ಮೇಲೆ ತಿಳಿಸಲಾಗಿರುವ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ೨೦೧೪-೧೫ ಮತ್ತು ೨೦೧೬-೧೭ ಸಾಲುಗಳ ಅಪೂರ್ಣ ವಾರ್ಷಿಕ ಲೆಕ್ಕಪತ್ರಗಳ ಕಾರಣ ಶಹಾಪುರದ ತಾಲ್ಲೂಕು ಪಂಚಾಯತಿಯ ೨೦೧೬-೧೭ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗಾಗಿ ಕೈಗೆತ್ತಿಕೊಂಡಿರುವುದಿಲ್ಲ.

೩.೪.೨ ತಾಲ್ಲೂಕು ಪಂಚಾಯತಿ, ಅಫಝುಲಪುರ

ಅಫಝುಲಪುರದ ತಾಲ್ಲೂಕು ಪಂಚಾಯತಿಯ ೨೦೧೬-೧೭ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಈ ಕಚೇರಿಯಲ್ಲಿ ಸ್ವೀಕರಿಸಲಾಯಿತು ಹಾಗೂ ಈ ಕೆಳಗೆ ನೀಡಲಾಗಿರುವ ಅಂಶಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಲೆಕ್ಕಪತ್ರಗಳು ಅಪೂರ್ಣವಾಗಿರುವವು ಎಂಬುದನ್ನು ಗಮನಿಸಲಾಯಿತು.

ಎ. ತಃಖ್ತೆ II ಮತ್ತು IIIರಲ್ಲಿ ಉಪ-ಲೆಕ್ಕಶೀರ್ಷಿಕೆವಾರು ಸ್ವೀಕೃತಿಗಳು ಮತ್ತು ವೆಚ್ಚಗಳ ಅಂಕಿಸಂಖ್ಯೆಗಳು.

ಬಿ. ವಾರ್ಷಿಕ ಲೆಕ್ಕಪತ್ರಗಳನ್ನು ನಿರ್ದಿಷ್ಟ ನಮೂನೆಯಲ್ಲಿ ತಯಾರಿಸಿರುವುದಿಲ್ಲ.

ಮೇಲೆ ತಿಳಿಸಲಾಗಿರುವ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಅಪೂರ್ಣವಾಗಿರುವಂತಹ ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಿರುವ ಕಾರಣ, 2016-17 ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗಾಗಿ ಕೈಗೆತ್ತಿಕೊಂಡಿರುವುದಿಲ್ಲ.

೩.4.೩ ತಾಲ್ಲೂಕು ಪಂಚಾಯತಿ, ಜೇವರ್ಗಿ

ಜೇವರ್ಗಿ ತಾಲ್ಲೂಕು ಪಂಚಾಯತಿಯ 2016-17 ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಈ ಕಚೇರಿಯಲ್ಲಿ ಸ್ವೀಕರಿಸಲಾಯಿತು ಹಾಗೂ ಈ ಕೆಳಗೆ ನೀಡಲಾಗಿರುವ ಅಂಶಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಲೆಕ್ಕಪತ್ರಗಳು ಅಪೂರ್ಣವಾಗಿರುವವು ಎಂಬುದನ್ನು ಗಮನಿಸಲಾಯಿತು.

- ತ:ಖ್ತೆ II ಮತ್ತು IIIರಲ್ಲಿ ಉಪ-ಲೆಕ್ಕಶೀರ್ಷಿಕೆವಾರು ಸ್ವೀಕೃತಿಗಳು ಮತ್ತು ವೆಚ್ಚಗಳ ಅಂಕಿಸಂಖ್ಯೆಗಳು.
- ವಾರ್ಷಿಕ ಲೆಕ್ಕಪತ್ರಗಳನ್ನು ನಿರ್ದಿಷ್ಟ ನಮೂನೆಯಲ್ಲಿ ತಯಾರಿಸಿರುವುದಿಲ್ಲ.
- ಮೇಲೆ ತಿಳಿಸಲಾಗಿರುವ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು, ಜೇವರ್ಗಿಯ ತಾಲ್ಲೂಕು ಪಂಚಾಯತಿಯ ಅಪೂರ್ಣವಾಗಿರುವಂತಹ ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸಿರುವ ಕಾರಣ, 2016-17 ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗಾಗಿ ಕೈಗೆತ್ತಿಕೊಂಡಿರುವುದಿಲ್ಲ.

೩.4.4 ತಾಲ್ಲೂಕು ಪಂಚಾಯತಿ, ಕುಣಿಗಲ್

ಕುಣಿಗಲ್‌ನ ತಾಲ್ಲೂಕ್ ಪಂಚಾಯತಿಯ ಸಂಪೂರ್ಣ ಪೂರ್ವಭಾವಿ ವಾರ್ಷಿಕ ಲೆಕ್ಕಪತ್ರಗಳನ್ನು 15 ಸೆಪ್ಟಂಬರ್ ೨೦೨೦ರಂದು ಸಲ್ಲಿಸಲಾಗಿದ್ದಿತು. ತಾಲ್ಲೂಕು ಪಂಚಾಯತಿಯು ವಾರ್ಷಿಕ ಲೆಕ್ಕಪತ್ರಗಳನ್ನು ವಿಳಂಬವಾಗಿ ಸಲ್ಲಿಸಿದ್ದ ಕಾರಣ, ಲೆಕ್ಕಪರಿಶೋಧನೆಯನ್ನು ಕೈಗೆತ್ತಿಕೊಳ್ಳಲಾಗಲಿಲ್ಲ.

೩.೫ ಸರ್ಕಾರವು ತನ್ನ ಆದೇಶ ಸಂಖ್ಯೆ ಎಫ್‌ಡಿ ೦7/ಝಡ್‌ಪಿಎ/೨೦೦೩ ದಿನಾಂಕ ೮ ಸೆಪ್ಟಂಬರ್ ೨೦೦4ರ ಮೂಲಕ ತಮ್ಮ ಲೆಕ್ಕಪತ್ರಗಳನ್ನು ನಿಧಿ- I, ನಿಧಿ - II, ನಿಧಿ - IIIರಲ್ಲಿ ನಿಧಿವಾರು ನಿರ್ವಹಿಸುವಂತೆ ತಾಲ್ಲೂಕು ಪಂಚಾಯತಿಗಳಿಗೆ ನಿರ್ದೇಶಿಸಿದ್ದಿತು. ಆದಾಗ್ಯೂ, ಈ ಕಾರ್ಯವಿಧಾನವನ್ನು ತಾಲ್ಲೂಕು ಪಂಚಾಯತಿಗಳು ಅನುಸರಿಸಲಿಲ್ಲ. ಈ ಲೋಪದೋಷವು ತಾಲ್ಲೂಕು ಪಂಚಾಯತಿಗಳಲ್ಲಿ ಲಭ್ಯವಿರುವ ನಿಧಿವಾರು ಹಣಕಾಸನ್ನು ಖಚಿತಪಡಿಸಿಕೊಳ್ಳದಿರುವಲ್ಲಿ ಪರಿಣಮಿಸಿದ್ದಿತು.

३.6 ನಿಧಿ ಖಾತೆ/ಲೆಕ್ಕದ (ಫಂಡ್ ಅಕೌಂಟ್) ಅಂತಿಮ ಶಿಲ್ಕನ್ನು ಸಮನ್ವಯಗೊಳಿಸದಿರುವುದು : ತಾಲ್ಲೂಕು ಪಂಚಾಯಿತಿ ಲೆಕ್ಕಪತ್ರಗಳು ಮತ್ತು ಖಜಾನೆ ಲೆಕ್ಕಪತ್ರಗಳ ನಡುವೆ ವ್ಯತ್ಯಾಸ.

ಖಜಾನೆಯ 'ಕೂಡುವುದು ಮತ್ತು ಕಳೆಯುವುದು ಮೆಮೊರಾಂಡ {ಪ್ಲಸ್ ಅಂಡ್ ಮೈನಸ್ ಮೆಮೊರಾಂಡಾ'[7] : ಉಪ-ಖಜಾನೆಯಲ್ಲಿ ತಾಲ್ಲೂಕು ಪಂಚಾಯಿತಿಯ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ವಿವರಿಸುವ ಷೆಡ್ಯೂಲ್} ಹಾಗೂ ತಾಲ್ಲೂಕು ಪಂಚಾಯಿತಿಗಳ ವಾರ್ಷಿಕ ಲೆಕ್ಕಪತ್ರಗಳ ನಡುವೆ ಅಂತಿಮ ಶಿಲ್ಕಿನಲ್ಲಿ 137 ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ರೂ.2531.30 ಕೋಟಿ ಮೊತ್ತದಷ್ಟು (75 ತಾಲ್ಲೂಕು ಪಂಚಾಯಿತಿಗಳಲ್ಲಿ ರೂ.1,607.28 ಕೋಟಿ ಮೊತ್ತವನ್ನು ಅಧಿಕ ಪ್ರಮಾಣದಲ್ಲಿ ತಿಳಿಸಲಾಗಿದ್ದಿತು ಹಾಗೂ 62 ತಾಲ್ಲೂಕು ಪಂಚಾಯಿತಿಗಳಲ್ಲಿ ರೂ.4138.58 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ತಿಳಿಸಲಾಗಿದ್ದಿತು) ನಿವ್ವಳ ಕಡಿಮೆ ಪ್ರಮಾಣದಲ್ಲಿ ತಿಳಿಸಲಾಗಿದ್ದಿತು ಮತ್ತು ಆದ್ದರಿಂದ ಅಷ್ಟರಮಟ್ಟಿಗೆ ವ್ಯತ್ಯಾಸವು ಮುಂದುವರೆದುಕೊಂಡು ಹೋಗಿದ್ದಿತು. ವಿವರಗಳಿಗೆ ಅನುಬಂಧ ಎಫ್ (ಎ) ಗಮನಿಸುವುದು. ಮುಂದುವರೆದು, 05 ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯತ್ಯಾಸಗಳಿರಲಿಲ್ಲ ಹಾಗೂ ಅನುಬಂಧ ಎಫ್ (ಬಿ)ಯಲ್ಲಿ ತೋರಿಸಿರುವಂತೆ 29 ತಾಲ್ಲೂಕು ಪಂಚಾಯಿತಿಗಳು ಖಜಾನೆಯ (+) ಮತ್ತು (–) ಮೆಮೊರಾಂಡಾವನ್ನು ಸಲ್ಲಿಸಲಿಲ್ಲ. ಎರಡು ತಾಲ್ಲೂಕು ಪಂಚಾಯಿತಿಗಳು, ಅವೆಂದರೆ ಲಿಂಗಸುಗೂರು ಮತ್ತು ಕಾರವಾರ, ಇವುಗಳಿಗೆ ಸಂಬಂಧಿಸಿದಂತೆ ಖಜಾನೆಯ 'ಕೂಡುವುದು ಮತ್ತು ಕಳೆಯುವುದು ಮೆಮೊರಾಂಡ {ಪ್ಲಸ್ ಅಂಡ್ ಮೈನಸ್ ಮೆಮೊರಾಂಡಾ ಋಣಾತ್ಮಕ (–) ಅಂತಿಮ ಶಿಲ್ಕನ್ನು ತೋರಿಸುತ್ತಿದ್ದವು.

ಆದ್ದರಿಂದ, ತಾಲ್ಲೂಕು ಪಂಚಾಯಿತಿಗಳ ವಾರ್ಷಿಕ ಲೆಕ್ಕಪತ್ರಗಳಲ್ಲಿ ತೋರಿಸಿರುವಂತಹ ರೂ.7632.36 ಕೋಟಿ ಮೊತ್ತದಷ್ಟು ಅಂತಿಮ ಶಿಲ್ಕಿನ ಯಥಾರ್ಥತೆಯನ್ನು ಲೆಕ್ಕಪರಿಶೋಧನೆಯಲ್ಲಿ ಖಚಿತಪಡಿಸಿಕೊಳ್ಳಲಾಗಲಿಲ್ಲ. ಮುಂದುವರೆದು, ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಲಭ್ಯವಿದ್ದಂತಹ ಹಣಕಾಸಿಗಿಂತ ಅಧಿಕ ಪ್ರಮಾಣದಲ್ಲಿ ಖಜಾನೆಗಳು ಯಾವ ರೀತಿಯಲ್ಲಿ ಅಧಿಕ ಪ್ರಮಾಣದಲ್ಲಿ ಪಾವತಿಸಿದ್ದವು ಎಂಬುದು ದಾಖಲೆಗಳಿಂದ ಕಂಡುಬರುವುದಿಲ್ಲ.

३.7 ಹಣಕಾಸು ವ್ಯವಹಾರಗಳಲ್ಲಿ ಯಥಾರ್ಥತೆಗಳಿಲ್ಲದಿದ್ದುದು ಹಾಗೂ ಅವುಗಳನ್ನು ತಪ್ಪಾಗಿ ವರದಿ ಮಾಡಿದ್ದುದು

'ಅನುಬಂಧ – ಸಿ' ಯಲ್ಲಿ ವಿವರಿಸಿರುವಂತೆ ಹಣಕಾಸು ಸ್ಥಿತಿಗತಿಗಳ ತ:ಖ್ತೆಯಲ್ಲಿ ಲೆಕ್ಕ ಹಾಕಲಾಗಿರುವಂತಹ ಶಿಲ್ಕುಗಳಿಗೆ ಹೋಲಿಸಿದಂತೆ ತಾಲ್ಲೂಕು ಪಂಚಾಯಿತಿಗಳು ತಮ್ಮಲ್ಲಿರುವ ಶಿಲ್ಕುಗಳನ್ನು ಕಂಡುಕೊಳ್ಳುವ ಸಲುವಾಗಿ ಲೆಕ್ಕಹಾಕುವಲ್ಲಿನ ತಪ್ಪಿನಿಂದಾಗಿ 31 ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಖಜಾನೆ ಮತ್ತು ಬ್ಯಾಂಕು ಅಂಕಣಗಳ ಅಡಿಯಲ್ಲಿ ಲೆಕ್ಕಪತ್ರಗಳಲ್ಲಿ ಅಂತಿಮ ಶಿಲ್ಕುಗಳನ್ನು ತೋರಿಸುವಲ್ಲಿ ವ್ಯತ್ಯಯಗಳನ್ನು ಗಮನಿಸಲಾಯಿತು ('ಅನುಬಂಧ – ಜಿ'ನಲ್ಲಿ ವಿವರಿಸಲಾಗಿದೆ).

---

[7] ಉಪ-ಖಜಾನೆಯಲ್ಲಿ ತಾಲ್ಲೂಕು ಪಂಚಾಯಿತಿಯ ಸ್ವೀಕೃತಿಗಳು ಮತ್ತು ವೆಚ್ಚಗಳನ್ನು ವಿವರಿಸುವ ಷೆಡ್ಯೂಲು

೩.೪ ಲೆಕ್ಕಪತ್ರಗಳ ಡಿಡಿಆರ್ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿನ ಶಿಲ್ಕುಗಳು

ರಾಜ್ಯ ಸರ್ಕಾರವು ತನ್ನ ಸುತ್ತೋಲೆ ಸಂಖ್ಯೆ ಆರ್‌ಡಿಪಿಆರ್/೨/ಎಆರ್/೨೦೦೪ ದಿನಾಂಕ ೨೯.೦೯.೨೦೦೯ರ ಮೂಲಕ ಡಿಡಿಆರ್ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿನ ಶಿಲ್ಕುಗಳನ್ನು ಮುಕ್ತಾಯಗೊಳಿಸುವುದಕ್ಕೆ ಸಂಬಂಧಿಸಿದಂತೆ ಸವಿವರ ನಿರ್ದೇಶನಗಳನ್ನು ನೀಡಿರುವುದು ಹಾಗೂ ಬಾಕಿಯಿರುವ ಎಲ್ಲಾ ಶಿಲ್ಕುಗಳನ್ನು ಮುಕ್ತಾಯಗೊಳಿಸುವಂತೆ ನಿರ್ದೇಶಿಸಿರುವುದು.

ಆದಾಗ್ಯೂ, ಡಿಡಿಆರ್ ಲೆಕ್ಕಶೀರ್ಷಿಕೆಗಳ ಅಡಿಯಲ್ಲಿನ ಬಾಕಿಯಿರುವಂತಹ ಶಿಲ್ಕುಗಳ ಸ್ಥಿತಿಗತಿಯು ಬಹಳಷ್ಟು ಮಟ್ಟಿಗೆ ಮುಕ್ತಾಯಗೊಳ್ಳದೆಯೇ ಉಳಿದಿದ್ದಿತು ಎಂಬುದನ್ನು ಗಮನಿಸಲಾಯಿತು.

ಮೊತ್ತ ಕೋಟಿ ರೂಪಾಯಿಗಳಲ್ಲಿ

ಕ್ರಮ ಸಂಖ್ಯೆ	೩೧ ಮಾರ್ಚ್‌ನಲ್ಲಿದ್ದಂತೆ ವಿವರಗಳು	ತಾಲ್ಲೂಕು ಪಂಚಾಯತಿಗಳ ಸಂಖ್ಯೆ	2016-17
1	ಸಾಲಗಳು ಮತ್ತು ಮುಂಗಡಗಳು	54	1.35
2	ಠೇವಣಿಗಳು ಮತ್ತು ಮುಂಗಡಗಲು	21	1.72
3	ಅಮಾನತ್ತು ಮತ್ತು ಇತರವುಗಳು	24	6.89
4	ಎಸ್‌ಎಸ್‌ಡಬ್ಲ್ಯು ಚೆಕ್ಕುಗಳು	39	0.009
5	ಬಿಸಿಎಂ ಚೆಕ್ಕುಗಳು	30	1.07
6	ಪಾವತಿಗಳು/ರೆಮಿಟೆನ್ಸ್	01	0.02

ಈ ನಿಟ್ಟಿನಲ್ಲಿ ಈ ಹಿಂದಿನ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳಲ್ಲಿ ಸ್ಪಷ್ಟಪಡಿಸಲಾಗಿದ್ದಿತಾದರೂ, ತಾಲ್ಲೂಕು ಪಂಚಾಯತಿಗಳು ಬಾಕಿಯಿರುವ ಶಿಲ್ಕುಗಳನ್ನು ಸಮನ್ವಯಗೊಳಿಸಲು ಅಥವಾ ಮುಕ್ತಯಗೊಳಿಸಲು ಯಾವುದೇ ಕ್ರಮವನ್ನೂ ತೆಗೆದುಕೊಂಡಿರುವುದಿಲ್ಲ. ಮುಂದುವರೆದು, ಶಿಲ್ಕುಗಳನ್ನು ತಾಲ್ಲೂಕು ಪಂಚಾಯತಿಯ ಆಡಳಿತ ವ್ಯಾಪ್ತಿಯಲ್ಲಿ ಬರುವಂತಹ ಸಂಬಂಧಿತ ಇಲಾಖಾ ಮುಖ್ಯಸ್ಥರುಗಳು ಶಿಲ್ಕುಗಳ ಬಗ್ಗೆ ಖಚಿತಪಡಿಸಿರುವುದಿಲ್ಲ. (ವಿವರಗಳು 'ಅನುಬಂಧ-ಎಚ್'ನಲ್ಲಿ)

೩.೯ **ನಿಷ್ಕ್ರಿಯ ಬ್ಯಾಂಕು ಖಾತೆಗಳು**

ಸುತ್ತೋಲೆ ಸಂಖ್ಯೆ ಆರ್‌ಡಿಪಿ/೩೦೯/ಎಪಿಎಂ/2016 ದಿನಾಂಕ ೩೦.೦೪.೨೦೧೬ರ ಅನುಸಾರ ತಾಲ್ಲೂಕು ಪಂಚಾಯತಿಗಳು ತಮ್ಮಲ್ಲಿನ ನಿಷ್ಕ್ರಿಯ ಬ್ಯಾಂಕು ಖಾತೆಗಳನ್ನು ಮುಕ್ತಾಯಗೊಳಿಸುವ ಸಲುವಾಗಿ ಹಾಗೂ ಅವುಗಳಲ್ಲಿರುವ ಶಿಲ್ಕುಗಳನ್ನು ಬಡ್ಡಿಯ ಜೊತೆಯಲ್ಲಿ ಸರ್ಕಾರಕ್ಕೆ/ಹಣಕಾಸನ್ನು ಒದಗಿಸಿರುವ ಸಂಸ್ಥೆಗೆ/ಕಚೇರಿಗೆ ಪಾವತಿಸುವ/ವರ್ಗಾಯಿಸುವ ಅಗತ್ಯತೆಯಿದ್ದಿತು.

ಆದಾಗ್ಯೂ, 2016-17 ಸಾಲಿನಲ್ಲಿ, 153 ತಾಲ್ಲೂಕು ಪಂಚಾಯತಿಗಳು ಕಾರ್ಯಾಚರಣೆಗೊಳಿಸಿದ್ದ 657 ಸಂಖ್ಯೆಯಷ್ಟು ಬ್ಯಾಂಕು ಖಾತೆಗಳು ನಿಷ್ಕ್ರಿಯವಾಗಿದ್ದವು, ಇದರಿಂದಾಗಿ ರೂ.18.44 ಕೋಟಿ

ಮೊತ್ತವನ್ನು ಬ್ಯಾಂಕುಗಳಲ್ಲಿ ಕೂಡಿಡುವಲ್ಲಿ ಪರಿಣಮಿಸಿದ್ದಿತು (ಅನುಬಂಧ – ಐ). ಮುಂದುವರೆದು, ಎಸ್‌ಜಿಎಸ್‌ವೈ/ಎಸ್‌ಜಿಆರ್‌ವೈ, ಸುವರ್ಣ ಗ್ರಾಮೋದಯ, ಇತ್ಯಾದಿ ಮುಕ್ತಾಯಗೊಂಡಿರುವಂತಹ ಯೋಜನೆಗಳಲ್ಲಿ ಉಳಿದಿರುವ ಅಂತಿಮ ಶಿಲ್ಕಿನ ಮೊತ್ತಗಳನ್ನು ಸರ್ಕಾರಿ ಖಾತೆಗಳಿಗೆ ಪಾವತಿಸಲು/ವರ್ಗಾಯಿಸಲು ತಾಲ್ಲೂಕು ಪಂಚಾಯಿತಿಗಳು ಯಾವುದೇ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ.

೩.10 ಲೆಕ್ಕಪತ್ರಗಳ ಸವಿವರ ಮತ್ತು ಸಂಕ್ಷಿಪ್ತ ತ:ಖ್ತೆಗಳ ನಡುವಿನ ವ್ಯತ್ಯಾಸಗಳು

೩.10.1 ತ:ಖ್ತೆ II ಹಾಗೂ ಗೋಷ್ವಾರೆ ತ:ಖ್ತೆಯಲ್ಲಿ ತೋರಿಸಲಾಗಿದ್ದ ಒಟ್ಟಾರೆ ಸ್ವೀಕೃತಿಗಳು

೨೭ ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಭಾಗ Iರಿಂದ ಭಾಗ IIIರ ಘೋಷ್ವಾರೆ ಹಾಗೂ ತಾಲ್ಲೂಕು ಪಂಚಾಯಿತಿಗಳ ವರಮಾನ ಸ್ವೀಕೃತಿಗಳ ತ:ಖ್ತೆ II -ಸವಿವರ ಲೆಕ್ಕಶೀರ್ಷಿಕೆವಾರು ಲೆಕ್ಕಪತ್ರಗಳಲ್ಲಿ ತೋರಿಸಲಾಗಿದ್ದ ಅಂಕಿಸಂಖ್ಯೆಗಳ ನಡುವೆ ವರಮಾನ ಸ್ವೀಕೃತಿಗಳು/ಅನುದಾನ ಸ್ವೀಕೃತಿಗಳಿಗೆ ಸಂಬಂಧಿತ ಅಂಕಿಸಂಖೆಗಳಲ್ಲಿ ವ್ಯತ್ಯಾಸಗಳನ್ನು ಗಮನಿಸಲಾಯಿತು, ಇದು ರೂ.500.55 ಕೋಟಿ ಮೊತ್ತದಷ್ಟು (೨೨ ತಾಲ್ಲೂಕು ಪಂಚಾಯಿತಿಗಳು ರೂ.539.58 ಕೋಟಿ ಮೊತ್ತವನ್ನು ಅಧಿಕ ಪ್ರಮಾಣದಲ್ಲಿ ತಿಳಿಸಿದ್ದವು ಹಾಗೂ 05 ತಾಲ್ಲೂಕು ಪಂಚಾಯಿತಿಗಳು ರೂ.39.03 ಕೋಟಿ ಮೊತ್ತವನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸಿದ್ದವು) ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿದ್ದಿತು. ವಿವರಗಳು 'ಅನುಬಂಧ ಜೆ'ಯಲ್ಲಿ. ಮುಂದುವರೆದು, 05 ತಾಲ್ಲೂಕು ಪಂಚಾಯಿತಿಗಳು[8] II ವರದಿಯು ಸಂಬಂಧಿಸಿರುವ ಸಾಲಿನ ವೆಚ್ಚದ ಅಂಕಿಸಂಖ್ಯೆಗಳನ್ನು ವಾರ್ಷಿಕ ಲೆಕ್ಕಪತ್ರಗಳ ತ:ಖ್ತೆ – IIರಲ್ಲಿ ಸ್ವೀಕೃತಿಗಳು ಎಂಬುದಾಗಿ ತಪ್ಪಾಗಿ ತೋರಿಸಲಾಗಿದ್ದಿತು ಎಂಬುದನ್ನು ಗಮನಿಸಲಾಯಿತು.

೩.10.೨ ತ:ಖೆ III ಮತ್ತು ಗೋಷ್ವಾರೆ ತ:ಖ್ತೆಯಲ್ಲಿ ತೋರಿಸಲಾಗಿದ್ದ ಒಟ್ಟಾರೆ ವೆಚ್ಚಗಳು

0೭ ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಭಾಗ Iರಿಂದ ಭಾಗ IIIರ ಘೋಷ್ವಾರೆ ಹಾಗೂ ತ:ಖ್ತೆ – III ತಾಲ್ಲೂಕು ಪಂಚಾಯಿತಿಗಳ ವರಮಾನ ವೆಚ್ಚಗಳ ಸವಿವರ ಲೆಕ್ಕಶೀರ್ಷಿಕೆವಾರು ಲೆಕ್ಕಪತ್ರಗಳಲ್ಲಿ ತೋರಿಸಲಾಗಿದ್ದ ಅಂಕಿಸಂಖ್ಯೆಗಳ ನಡುವೆ ವ್ಯತ್ಯಯಗಳನ್ನು ಗಮನಿಸಲಾಯಿತು, ಇದು ರೂ.49.81 ಕೋಟಿ ಮೊತ್ತದಷ್ಟು ವೆಚ್ಚಗಳನ್ನು ಅಧಿಕ ಪ್ರಮಾಣದಲ್ಲಿ ತಿಳಿಸುವಲ್ಲಿ ಪರಿಣಮಿಸಿದ್ದಿತು. (05 ತಾಲ್ಲೂಕು ಪಂಚಾಯಿತಿಗಳು ರೂ.51.55 ಕೋಟಿ ಮೊತ್ತದಷ್ಟು ಅಧಿಕಪ್ರಮಾಣದಲ್ಲಿ ತಿಳಿಸಿದ್ದವು ಹಾಗೂ 0೨ ತಾಲ್ಲೂಕು ಪಂಚಾಯಿತಿಗಳು ರೂ.1.೭4 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ತಿಳಿಸಿದ್ದವು) ವಿವರಗಳು 'ಅನುಬಂಧ – ಜೆ'ಯಲ್ಲಿ.

೩.10.೩ ಸವಿವರ ಬ್ಯಾಂಕು ತ:ಖ್ತೆ – ಸ್ವೀಕೃತಿಗಳು ಮತ್ತು ವೆಚ್ಚಗಳು

11 ತಾಲ್ಲೂಕು ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಭಾಗ Iರಿಂದ ಭಾಗ IIIರ ಘೋಷ್ವಾರೆ ಹಾಗೂ ಅನುಬಂಧ–ಎ – ತಾಲ್ಲೂಕು ಪಂಚಾಯಿತಿಗಳ ಸವಿವರ ಯೋಜನೆವಾರು

[8] ತಾಲ್ಲೂಕು ಪಂಚಾಯಿತಿಗಳು (1) ಹರಪನಹಳ್ಳಿ (2) ಗೌರಿಬಿದನೂರು (3) ಮೈಸೂರು (4) ಟಿ.ನರಸೀಪುರ ಮತ್ತು (5) ತಿಪಟೂರು.

ವ್ಯವಹಾರಗಳ ನಡುವಿನ ಅಂಕಿಸಂಖ್ಯೆಗಳಲ್ಲಿ ರೂ.1.85 ಕೋಟಿ (05 ತಾಲ್ಲೂಕು ಪಂಚಾಯತಿಗಳು ರೂ.2.07 ಕೋಟಿ ಮೊತ್ತದಷ್ಟು ಅಧಿಕ ಪ್ರಮಾಣದಲ್ಲಿ ತಿಳಿಸಿದ್ದವು ಹಾಗೂ 06 ತಾಲ್ಲೂಕು ಪಂಚಾಯತಿಗಳು 0.22 ಕೋಟಿ ಮೊತ್ತದಷ್ಟು ಕಡಿಮೆ ಪ್ರಮಾಣದಲ್ಲಿ ತಿಳಿಸಿದ್ದವು) ಮೊತ್ತದಷ್ಟು ವ್ಯತ್ಯಯಗಳನ್ನು ಗಮನಿಸಲಾಯಿತು, ಅದೇ ರೀತಿಯಲ್ಲಿ 10 ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದಂತೆ, ವೆಚ್ಚಗಳನ್ನು ರೂ.0.42 ಕೋಟಿ ಮೊತ್ತದಷ್ಟು (05 ತಾಲ್ಲೂಕು ಪಂಚಾಯತಿಗಳು ರೂ.1.10 ಕೋಟಿ ಮೊತ್ತವನ್ನು ಅಧಿಕ ಪ್ರಮಾಣದಲ್ಲಿ ತಿಳಿಸಿದ್ದವು ಹಾಗೂ 05 ತಾಲ್ಲೂಕು ಪಂಚಾಯತಿಗಳು ರೂ.068 ಕೋಟಿ ಮೊತ್ತವನ್ನು ಕಡಿಮೆ ಪ್ರಮಾಣದಲ್ಲಿ ತಿಳಿಸಿದ್ದವು) ಅಧಿಕ ಪ್ರಮಾಣದಲ್ಲಿ ತಿಳಿಸಲಾಗಿದ್ದಿತು. ವಿವರಗಳು 'ಅನುಬಂಧ – ಜೆ'ಯಲ್ಲಿ.

3.11 ತಾಲ್ಲೂಕು ಪಂಚಾಯತಿಗಳು ತಿದ್ದುಪಡಿ ಮಾಡಿರುವ ಲೆಕ್ಕಪತ್ರಗಳನ್ನು ಸಲ್ಲಿಸದಿರುವುದು

ಅನುಬಂಧ 'ಕೆ'ಯಲ್ಲಿ ಪಟ್ಟಿ ಮಾಡಲಾಗಿರುವ 12 ತಾಲ್ಲೂಕು ಪಂಚಾಯತಿಗಳು ತಾಲ್ಲೂಕು ಪಂಚಾಯತಿಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯ ನಂತರ ಸಂಬಂಧಿತ ತಾಲ್ಲೂಕು ಪಂಚಾಯತಿಗಳಿಗೆ ಪತ್ರ ಬರೆದು ಕೋರಿದ ಹೊರತಾಗಿಯೂ, ತಿದ್ದುಪಡಿ ಮಾಡಲಾಗಿರುವ ಲೆಕ್ಕಪತ್ರಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ, ಲೆಕ್ಕಪತ್ರಗಳ ಸವಿವರ ಮತ್ತು ಸಂಕ್ಷಿಪ್ತ ತಃಖ್ತೆಗಳಲ್ಲಿ ತೋರಿಸಲಾಗಿರುವ ವ್ಯವಹಾರಗಳ ಯಥಾರ್ಥತೆಯನ್ನು ಲೆಕ್ಕಪರಿಶೋಧನೆಯಲ್ಲಿ ಖಚಿತಪಡಿಸಿಕೊಳ್ಳಲಾಗಲಿಲ್ಲ.

4. ಇತರೆ ಅಂಶಗಳು

4.1 ಹನ್ನೆರಡನೆಯ ಹಣಕಾಸು ಆಯೋಗದ ಮತ್ತು ಹದಿಮೂರನೆಯ ಹಣಕಾಸು ಆಯೋಗದ ಶಿಫಾರಸುಗಳ ಆಧಾರದ ಮೇರೆಗೆ ತಾಲ್ಲೂಕು ಪಂಚಾಯತಿಗಳಿಗೆ ಅನುಕ್ರಮವಾಗಿ 2005–06ರಿಂದ 2009–10 ಹಾಗೂ 2010–11ರಿಂದ 2014–15ರ ಅವಧಿಯಲ್ಲಿ ಹಣಕಾಸನ್ನು ಬಿಡುಗಡೆಗೊಳಿಸಲಾಗಿದ್ದಿತು. ಯೋಜನೆಯ ಅವಧಿಯು ಮುಕ್ತಾಯಗೊಂಡನಂತರವೂ 98 ತಾಲ್ಲೂಕು ಪಂಚಾಯತಿಗಳು 12ನೇ ಹಣಕಾಸು ಆಯೋಗದ ಅನುದಾನಕ್ಕೆ ಸಂಬಂಧಿಸಿದಂತೆ ರೂ.4.41 ಕೋಟಿ ಮೊತ್ತದಷ್ಟು ಹಾಗೂ 162 ತಾಲ್ಲೂಕು ಪಂಚಾಯತಿಗಳು 13ನೇ ಹಣಕಾಸು ಆಯೋಗದ ಅನುದಾನಕ್ಕೆ ಸಂಬಂಧಿಸಿದಂತೆ ರೂ.54.10 ಕೋಟಿ ಮೊತ್ತವನ್ನು ಹೊಂದಿದ್ದವು. (ವಿವರಗಳು ಅನುಬಂಧ 'ಎಲ್'ನಲ್ಲಿ.)

4.2 2009–10ರಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ನೀಡಿದ್ದ ನಿರ್ದೇಶನಗಳ ಅನುಸಾರ, ಅಕ್ಷರ ದಾಸೋಹ ಯೋಜನೆಗೆ ಸಂಬಂಧಿಸಿದಂತೆ ಬ್ಯಾಂಕು ಖಾತೆಗಳಲ್ಲಿ ಹೊಂದಿದ್ದ ಶಿಲ್ಕುಗಳನ್ನು 2009–10 ಹಣಕಾಸು ಸಾಲಿನ ನಂತರ ಖಜಾನೆ ಖಾತೆಗೆ ಪಾವತಿಸಬೇಕಿದ್ದಿತು ಹಾಗೂ ಮುಂದಿನ ವ್ಯವಹಾರಗಳನ್ನು ಖಜಾನೆಯ ಮೂಲಕ ಮಾಡಬೇಕಿದ್ದಿತು. 13 ತಾಲ್ಲೂಕು ಪಂಚಾಯತಿಗಳಿಗೆ ಸಂಬಂಧಿಸಿದಂತೆ ರೂ.0.46 ಕೋಟಿ ಮೊತ್ತವನ್ನು ನಿರ್ದೇಶನಗಳನ್ನು ಉಲ್ಲಂಘಿಸಿ ಬ್ಯಾಂಕು ಖಾತೆಗಳಲ್ಲಿ ಇಡಲಾಗಿದ್ದಿತು ಎಂಬುದನ್ನು ಗಮನಿಸಲಾಯಿತು. (ವಿವರಗಳು ಅನುಬಂಧ 'ಎಂ'ನಲ್ಲಿ).

4.3 ಒಂಬತ್ತು ತಾಲ್ಲೂಕು ಪಂಚಾಯತಿಗಳು ಕೆಲವು ಯೋಜನೆಗಳಿಗೆ ಸಂಬಂಧಿತ ಮೂಲ ದಾಖಲೆಗಳು, ಅವೆಂದರೆ ನಗದು ಪುಸ್ತಕ, ಓಚರುಗಳು ಮತ್ತು ಬ್ಯಾಂಕು ಪಾಸು ಶೀಟುಗಳನ್ನು ಬ್ಯಾಂಕು ಖಾತೆಗಳ ಪರಿಶೀಲನೆಗಾಗಿ ಒದಗಿಸಿರುವುದಿಲ್ಲ. ತತ್ಪರಿಣಾಮವಾಗಿ, ಅಂತಹ ಯೋಜನೆಗಳ ಬ್ಯಾಂಕು ಖಾತೆಗಳ ತಃಖ್ತೆಯಲ್ಲಿ ತೋರಿಸಲಾಗಿರುವಂತಹ ಹದಿನೆಂಟು ಯೋಜನೆಗಳಿಗೆ ಸಂಬಂಧಿತ (ಅನುಬಂಧ "ಎನ್ " ನಲ್ಲಿ ವಿವರಿಸಿರುವಂತೆ) ವ್ಯವಹಾರಗಳ ಯಥಾರ್ಥತೆಯನ್ನು ಲೆಕ್ಕಪರಿಶೋಧನೆಯಲ್ಲಿ ನಿರ್ಧಾರಣೆ ಮಾಡಲಾಗಲಿಲ್ಲ.

4.4 ಸರ್ಕಾರವು ತನ್ನ ಅಧಿಕೃತ ಜ್ಞಾಪನಾ ಸಂಖ್ಯೆ ದಿನಾಂಕ 17.05.2000ದ ಮೂಲಕ ಬ್ಯಾಂಕು ಖಾತೆಗಳ ಮೂಲಕ ಕಾರ್ಯಚರಣೆಗೊಳಿಸಬೇಕಿರುವ ಯೋಜನೆಗಳಿಗಾಗಿ ಪ್ರತಿಯೊಂದು ಯೋಜನೆಗೂ ಒಂದು ಬ್ಯಾಂಕು ಖಾತೆಯನ್ನು ಮಾತ್ರ ಕಾರ್ಯಾಚರಣೆಗೊಳಿಸುವಂತೆ ಪಂಚಾಯತಿ ರಾಜ್ ಸಂಸ್ಥೆಗಳಿಗೆ ನಿರ್ದೇಶನವನ್ನು ನೀಡಿದ್ದಿತು. ಆದಾಗ್ಯೂ, 67 ತಾಲ್ಲೂಕು ಪಂಚಾಯತಿಗಳು ಸರ್ಕಾರದ ನಿರ್ದೇಶನಗಳನ್ನು ಉಲ್ಲಂಘಿಸಿ, ಪ್ರತಿಯೊಂದು ಯೋಜನೆಗೂ ಒಂದು ಬ್ಯಾಂಕು ಖಾತೆಗೆ ಬದಲಾಗಿ ಅನೇಕ ಸಂಖ್ಯೆಯ ಬ್ಯಾಂಕು ಖಾತೆಗಳನ್ನು ನಿರ್ವಹಿಸಿದ್ದವು (ವಿವರಗಳು ಅನುಬಂಧ – 'ಒ'ನಲ್ಲಿ).

4.5 ಮೂರು ತಾಲ್ಲೂಕು ಪಂಚಾಯತಿಗಳು ಅವೆಂದರೆ ಬೆಂಗಳೂರು (ದಕ್ಷಿಣ), ಹೊಳಲ್ಕೆರೆ ಮತ್ತು ಆಳಂದ, ಇವು ವಾರ್ಷಿಕ ಲೆಕ್ಕಪತ್ರಗಳ ಜೊತೆಯಲ್ಲಿ ತಃಖ್ತೆ – IVನ್ನು ಸಲ್ಲಿಸಿರುವುದಿಲ್ಲ ಹಾಗೂ ಐದು ತಾಲ್ಲೂಕು ಪಂಚಾಯತಿಗಳು, ಅವೆಂದರೆ ಕನಕಪುರ, ಬೆಂಗಳೂರು (ಪೂರ್ವ), ಜಮಖಂಡಿ, ಆಳಂದ ಮತ್ತು ಹುಣಸೂರು, ಇವು ವಾರ್ಷಿಕ ಲೆಕ್ಕಪತ್ರಗಳ ಜೊತೆಯಲ್ಲಿ ತಃಖ್ತೆ – Vನ್ನು ಲಗತ್ತಿಸಿರುವುದಿಲ್ಲ. ಚಿಂಚೋಳಿಯ ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದಂತೆ ತಃಖ್ತೆ II ಮತ್ತು IIIನ್ನು ಲಗತ್ತಿರುವುದಿಲ್ಲ ಹಾಗೂ ಹಾನಗಲ್ಲಿನ ತಾಲ್ಲೂಕು ಪಂಚಾಯತಿಗೆ ಸಂಬಂಧಿಸಿದಂತೆ ಬ್ಯಾಂಕು ತಃಖ್ತೆಯನ್ನು ಲಗತ್ತಿಸಿರುವುದಿಲ್ಲ.

5. ಎಂಎಎಸ್ ಲೆಕ್ಕಪತ್ರಗಳ ತಯಾರಿಕೆ

ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಆರ್‌ಡಿಪಿಆರ್/ಐಎಫ್/02/2012-13, ಬೆಂಗಳೂರು ದಿನಾಂಕ 31.3.2011ರ ಮೂಲಕ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಹಾಗೂ ಭಾರತ ಸರ್ಕಾರವು ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕಪತ್ರಗಳನ್ನು 2011-12ರಿಂದ ಜಾರಿಗೆ ಬರುವಂತೆ ತಯಾರಿಸುವ ಸಲುವಾಗಿ ನಿರ್ದಿಷ್ಟಪಡಿಸಿದ್ದಂತಹ ಹೊಸ ಮಾದರಿ ಪಂಚಾಯತಿ ಲೆಕ್ಕವನ್ನಿಡುವಿಕೆ (ಎಂಪಿಎಎಸ್) ನಮೂನೆಗಳನ್ನು ಅಳವಡಿಸಿಕೊಂಡಿತು. ಮುಂದುವರೆದು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ತನ್ನ ಸುತ್ತೋಲೆ ದಿನಾಂಕ 06.06.2012ರ ಮೂಲಕ ಲೆಕ್ಕಪತ್ರಗಳನ್ನು ಕರ್ನಾಟಕ ಪಂಚಾಯತಿ ರಾಜ್ ತಾಲ್ಲೂಕು ಪಂಚಾಯತಿಗಳ (ಹಣಕಾಸು ಮತ್ತು ಲೆಕ್ಕಪತ್ರಗಳು) ನಿಯಮಗಳು, 1996ರ ಅನುಸಾರ ಪ್ರಸ್ತುತ ಇರುವಂತಹ ನಮೂನೆಗಳಲ್ಲಿ ಹಾಗೂ ಮಾದರಿ ಪಂಚಾಯತಿ ಲೆಕ್ಕವನ್ನಿಡುವಿಕೆ ಪದ್ಧತಿಯ ನಮೂನೆಗಳಲ್ಲಿ ತಯಾರಿಸುವಂತೆ ತಾಲ್ಲೂಕು ಪಂಚಾಯತಿಗಳಿಗೆ ನಿರ್ದೇಶನವನ್ನು ನೀಡಿತು.

ಹೆಚ್ಚುಕಡಿಮೆ ಎಲ್ಲಾ ತಾಲ್ಲೂಕು ಪಂಚಾಯತಿಗಳು ತಮ್ಮ ಸ್ವೀಕೃತಿಗಳು ಮತ್ತು ವೆಚ್ಚಗಳ ವಿವರಗಳನ್ನು ಸೂಚಿಸಿ ಮಾದರಿ ಪಂಚಾಯತಿ ಲೆಕ್ಕವನ್ನಿಡುವಿಕೆ ಪದ್ಧತಿಯ ನಮೂನೆ – Iರಲ್ಲಿ ಲೆಕ್ಕಪತ್ರಗಳನ್ನು ತಯಾರಿಸಿದ್ದವಾದರೂ ಹಾಗೂ ಕಳುಹಿಸಿದ್ದವಾದರೂ, ಸಲ್ಲಿಸಲಾಗಿದ್ದ ವಿವರಗಳು ಲೆಕ್ಕಪತ್ರಗಳ ಹಳೆಯ ನಮೂನೆಯ ವಿವರಗಳಿಗೆ ಹೋಲಿಸಿದಂತೆ ವ್ಯತ್ಯಯಗಳಿಂದ ಕೂಡಿದ್ದವು.

ಮಾದರಿ ಪಂಚಾಯತಿ ಲೆಕ್ಕವನ್ನಿಡುವಿಕೆ ಪದ್ಧತಿಯ ಇತರೆ ನಮೂನೆಗಳು ಅಂದರೆ IIರಿಂದ VIIIನ್ನು[9] ತಯಾರಿಸಿರಲಿಲ್ಲ ಹಾಗೂ ಲೆಕ್ಕಪರಿಶೋಧನೆಯ ಪರಿಶೀಲನೆಗಾಗಿ ಸಲ್ಲಿಸಲಿಲ್ಲ 29 ತಾಲ್ಲೂಕು ಪಂಚಾಯತಿಗಳು ಕರ್ನಾಟಕ ಪಂಚಾಯತಿರಾಜ್ ತಾಲ್ಲೂಕು ಪಂಚಾಯತಿ (ಹಣಕಾಸು ಮತ್ತು ಲೆಕ್ಕಪತ್ರಗಳು) ನಿಯಮಗಳು, 1996ರ ನಿರ್ದೇಶನಗಳನ್ನು ಉಲ್ಲಂಘಿಸಿ ಎಂಪಿಎಎಸ್ ಲೆಕ್ಕಪತ್ರಗಳನ್ನು ತಯಾರಿಸಲಿಲ್ಲ ಹಾಗೂ ಸಲ್ಲಿಸಲಿಲ್ಲ. ವಿವರಗಳು ಅನುಬಂಧ– 'ಪಿ'ಯಲ್ಲಿ.

6. ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳು

ತಾಲ್ಲೂಕು ಪಂಚಾಯತಿಗಳು ತಮ್ಮ ಗಮನಾರ್ಹವಾದಂತಹ ಲೆಕ್ಕವನ್ನಿಡುವುದಕ್ಕೆ ಸಂಬಂಧಿತ ಕಾರ್ಯನೀತಿಗಳನ್ನು ಹಾಗೂ ಲೆಕ್ಕಪತ್ರಗಳ ಮೇಲಿನ ಟಿಪ್ಪಣಿಗಳನ್ನು ವಾರ್ಷಿಕ ಲೆಕ್ಕಪತ್ರಗಳಿಗೆ ಲಗತ್ತಿಸಿರಲಿಲ್ಲ.

--ಸಹಿ ಮಾಡಲಾಗಿದೆ—
ಪ್ರಧಾನ ಮಹಾಲೇಖಾಪಾಲರು
(ಲೆಕ್ಕಪರಿಶೋಧನೆ-I)

--ಸಹಿ ಮಾಡಲಾಗಿದೆ---
ಹಿರಿಯ ಲೆಕ್ಕಪರಿಶೋಧನಾ ಅಧಿಕಾರಿ
ಎಸ್ಎಆರ್-ಎಲ್‌ಬಿ

ಸ್ಥಳ : ಬೆಂಗಳೂರು
ದಿನಾಂಕ : ಜನವರಿ 2021

---

[9] ನಮೂನೆ-II: ಸ್ವೀಕೃತಿಗಳು ಮತ್ತು ವೆಚ್ಚಗಳ ವರ್ಗೀಕೃತ ಘೋಷ್ವಾರೆ, ನಮೂನೆ-III: ಸಮನ್ವಯಗೊಳಿಸುವಿಕೆ ರಿಜಿಸ್ಟರು, ನಮೂನೆ IV: ಸ್ವೀಕರಿಸಬೇಕಿರುವವುಗಳು ಮತ್ತು ಪಾವತಿಸಬೇಕಿರುವವುಗಳ ರಿಜಿಸ್ಟರು, ನಮೂನೆ V: ಸ್ಥಿರಾಸ್ತಿಗಳ ರಿಜಿಸ್ಟರು, ನಮೂನೆ VI: ಚರಾಸ್ತಿಗಳ ರಿಜಿಸ್ಟರು, ನಮೂನೆ VII: ಸರಕುಸಾಮಗ್ರಿಗಳ ರಿಜಿಸ್ಟಾರು, ನಮೂನೆ VIII: ಪಾವತಿಗಾಗಿ ತಗಾದೆ, ವಸೂಲಾಸ್ತಿ ಮತ್ತು ಬಾಕಿ ರಿಜಿಸ್ಟರು.

ಲೆಕ್ಕಪರಿಶೋಧನಾ ಪ್ರಮಾಣಪತ್ರ

2016-17 ಸಾಲಿಗೆ 171 ತಾಲ್ಲೂಕು ಪಂಚಾಯತಿಗಳ ವಾರ್ಷಿಕ ಲೆಕ್ಕಪತ್ರಗಳನ್ನು ನಾವು ಪರಿಶೀಲಿಸಿದೆವು. ಅಗತ್ಯವಿರುವ ಎಲ್ಲಾ ಮಾಹಿತಿಗಳನ್ನು ಹಾಗೂ ವಿವರಣೆಗಳನ್ನು ನಾವು ಪಡೆದುಕೊಂಡಿರುವೆವು ಹಾಗೂ ಲೆಕ್ಕಪರಿಶೋಧನೆಯ ವೇಳೆಯಲ್ಲಿ ಗಮನಿಸಲಾಗಿರುವ ಹಾಗೂ ಕ್ರೋಢೀಕೃತ ಲೆಕ್ಕಪರಿಶೋಧನಾ ವರದಿಗೆ ಲಗತ್ತಿಸಲಾಗಿರುವ ಅಂಶಗಳ ಷರತ್ತಿಗೆ ಒಳಪಟ್ಟಂತೆ, ನಮ್ಮ ಲೆಕ್ಕಪರಿಶೋಧನೆಯ ಫಲಿತಾಂಶವಾಗಿ, ನಮ್ಮ ಅಭಿಪ್ರಾಯದಲ್ಲಿ ನಮಗೆ ದೊರೆತಿರುವ ಅತ್ಯುತ್ತಮ ಮಾಹಿತಿಯ ಅನುಸಾರ ಹಾಗೂ ನಮಗೆ ನೀಡಲಾಗಿರುವ ವಿವರಣೆಗಳ ಅನುಸಾರ ಹಾಗೂ ತಾಲ್ಲೂಕು ಪಂಚಾಯತಿಗಳು ತೋರಿಸಿರುವಂತಹ ಲೆಕ್ಕಪತ್ರಗಳ ಪುಸ್ತಕಗಳ ಅನುಸಾರ ತಾಲ್ಲೂಕು ಪಂಚಾಯತಿಗಳ ಹಣಕಾಸು ವ್ಯವಹಾರಗಳ ಒಂದು ಸತ್ಯಾಸತ್ಯತೆಯಿಂದ ಕೂಡಿದ ಹಾಗೂ ನ್ಯಾಯಸಮ್ಮತವಾದಂತಹ ಅಭಿಪ್ರಾಯವನ್ನು ಬಿಂಬಿಸುವ ರೀತಿಯಲ್ಲಿ ಸಮರ್ಪಕವಾಗಿ ಈ ಲೆಕ್ಕಪತ್ರಗಳನ್ನು ತಯಾರಿಸಲಾಗಿರುವುದು.

--ಸಹಿ ಮಾಡಲಾಗಿದೆ—

ಪ್ರಧಾನ ಮಹಾಲೇಖಾಪಾಲರು –(ಲೆಕ್ಕಪರಿಶೋಧನೆ – I

ಗ್ರಾಮ ಪಂಚಾಯಿತಿಗಳ ಕ್ರೋಢೀಕೃತ ವಾರ್ಷಿಕ ಲೆಕ್ಕಪರಿಶೋಧನಾ ವರದಿ

31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷ

ಸಂಪುಟ–1

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ

ಬೆಂಗಳೂರು

2018-19ನೇ ಸಾಲಿನ ಗ್ರಾಮ ಪಂಚಾಯತಿಗಳ ವಾರ್ಷಿಕ ಕ್ರೋಢೀಕೃತ ಲೆಕ್ಕಪರಿಶೋಧನಾ ವರದಿಯನ್ನು ವಿಧಾನ ಮಂಡಲಕ್ಕೆ ಸಲ್ಲಿಸುವಲ್ಲಿ ಆದ ವಿಳಂಬದ ಬಗ್ಗೆ ವಿವರಣ ಪಟ್ಟಿ.

ಗ್ರಾಮ ಪಂಚಾಯತಿಗಳ ವಾರ್ಷಿಕ ಕ್ರೋಢೀಕೃತ ಲೆಕ್ಕ ಪರಿಶೋಧನಾ ವರದಿಯನ್ನು ವಿಧಾನಾಮಂಡಲದ ಉಭಯ ಸದನಗಳ ಮುಂದೆ ಮಂಡಿಸುವ ಬಗ್ಗೆ ದಿನಾಂಕ 14.03.2012 ರಲ್ಲಿ ಸರ್ಕಾರ ಅಧಿಸೂಚನೆ ಹೊರಡಿಸಿರುತ್ತದೆ. ಅದರಂತೆ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಹಾಗೂ ಲೆಕ್ಕಪತ್ರ ಇಲಾಖೆಯು 2012-13ನೇ ಸಾಲಿನಲ್ಲಿ ವಾರ್ಷಿಕ ಕ್ರೋಢೀಕೃತ ಲೆಕ್ಕಪರಿಶೋಧನಾ ವರದಿಯನ್ನು ಸಿದ್ಧಪಡಿಸಲು ಕ್ರಮಕೈಗೊಂಡಿರುತ್ತದೆ. ಪ್ರತಿ ವಾರ್ಷಿಕ ಲೆಕ್ಕಪರಿಶೋಧನಾ ವರದಿಯನ್ನು ತಯಾರಿಸಲು ಸುಮಾರು 6000 ಗ್ರಾಮ ಪಂಚಾಯತಿ ವರದಿಗಳ ಮಾಹಿತಿಯನ್ನು ಪಡೆದು, ಕ್ರೋಢೀಕರಿಸಲು ಹೆಚ್ಚಿನ ಮಾನವ ಸಂಪನ್ಮೂಲ ಅವಶ್ಯವಿರುತ್ತದೆ. ಇಲಾಖೆಯ ಕ್ರೋಢೀಕೃತ ವಿಭಾಗದಲ್ಲಿ ಅಗತ್ಯವಿರುವ ಸಿಬ್ಬಂದಿಗಳ ಕೊರತೆಯ ಕಾರಣ 2018-19ನೇ ಸಾಲಿನ ಕ್ರೋಢೀಕೃತ ಲೆಕ್ಕಪರಿಶೋಧನ ವರದಿಯನ್ನು ಅಂತಿಮಗೊಳಿಸಿ ಸರ್ಕಾರಕ್ಕೆ ಸಲ್ಲಿಸಲು ವಿಳಂಬವಾಗಿರುತ್ತದೆ.

ದಿನಾಂಕ: 24.08.2021

(ಡಾ. ಜೆ.ವಿ.ನಂದನ್ ಕುಮಾರ್)
ಆಂತರಿಕ ಆರ್ಥಿಕ ಸಲಹೆಗಾರರು ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಅನುಬಂಧಗಳ ವಿವರಗಳು

31ನೇ ಮಾರ್ಚ್ 2019ಕ್ಕೆ ಕೊನೆಗೊಂಡ ಗ್ರಾಮ ಪಂಚಾಯತಿಗಳ ವಾರ್ಷಿಕ ಕ್ರೋಢಿಕೃತ ಲೆಕ್ಕಪರಿಶೋಧನಾ ವರದಿ.

ಪ್ರಸ್ತಾವನೆ:-

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಕಲಂ 246(1) ಪ್ರಕಾರ, ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಯನ್ನು ಪ್ರತಿ ವರ್ಷ ನಿಯಂತ್ರಕರು, ರಾಜ್ಯ ಲೆಕ್ಕಪತ್ರ ಇಲಾಖೆ, ಇಲ್ಲವೇ ಇವರು ಅಧಿಕಾರ ನೀಡುವಂತಹ ಅಧಿಕಾರಿಗಳು ಕೈಗೊಳ್ಳಲು ಅಧಿಕಾರವಿರುತ್ತದೆ.

ಸರ್ಕಾರದ ಅಧಿಸೂಚನೆ ದಿನಾಂಕ:16.07.2011 ರನ್ವಯ ಜಾರಿಗೆ ಬಂದಿರುವ ಅಧಿನಿಯಮದ ಕಲಂ 246(12) ರಂತೆ ಈ ಇಲಾಖೆಯಿಂದ ಕೈಗೊಂಡ ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನಾ ವರದಿಗಳ ಕ್ರೋಢಿಕೃತ ವರದಿಯನ್ನು ಸಿದ್ಧಪಡಿಸಲಾಗಿದೆ. ವರದಿಯನ್ನು ಒಟ್ಟು ನಾಲ್ಕು ಅಧ್ಯಾಯಗಳನ್ನಾಗಿ ವಿಂಗಡಿಸಿ ಕ್ರಮವಾಗಿ ಗ್ರಾಮ ಪಂಚಾಯತಿಗಳ ಸ್ಥೂಲನೋಟ, ಗ್ರಾಮ ಪಂಚಾಯತಿಗಳ ಹಣಕಾಸಿನ ಸ್ಥಿತಿ, ಲೆಕ್ಕಪರಿಶೋಧನೆಯ ಫಲಿತಾಂಶಗಳು ಮತ್ತು ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನದಲ್ಲಿ ಕಂಡು ಬಂದ ಅಂಶಗಳನ್ನು **ಸಂಪುಟ-1ರಲ್ಲಿ ವಿವರಣೆಯೊಂದಿಗೆ ಜಿಲ್ಲಾವಾರು ಮಾಹಿತಿಯನ್ನು ಹಾಗೂ ಸಂಪುಟ-2ರಲ್ಲಿ ಗ್ರಾಮ ಪಂಚಾಯಿತಿವಾರು ಮಾಹಿತಿಯನ್ನು ನೀಡಲಾಗಿದೆ.**

ಅಧ್ಯಾಯ 1

ಗ್ರಾಮ ಪಂಚಾಯತಿಗಳ ಸ್ಥೂಲ ನೋಟ

1.1 ಹಿನ್ನೆಲೆ:


ಭಾರತ ಸಂವಿಧಾನದ 73ನೇ ತಿದ್ದುಪಡಿಯು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನವನ್ನು ನೀಡಿದೆ.ಒಂದೇ ಸಮನಾದರಚನೆ, ನಿಯತಕಾಲಿಕ ಚುನಾವಣೆಗಳು, ಹಣಕಾಸು ಆಯೋಗಗಳ ಶಿಫಾರಸ್ಸಿನನ್ವಯ ಹಾಗೂ ಸ್ಥಳೀಯ ತೆರಿಗೆಗಳನ್ನು ವಿಧಿಸುವ ಮೂಲಕ ಈ ಸಂಸ್ಥೆಗಳಿಗೆ ನಿಯಮಿತವಾದ ಹಣಕಾಸಿನ ಹರಿವನ್ನು ಸ್ಥಾಪಿಸಿದೆ. ಇದಕ್ಕೆ ಸಂಬಂಧಿಸಿದಂತೆ, ರಾಜ್ಯ ಸರ್ಕಾರವು ಈ ಕೆಲಸ ಕಾರ್ಯಗಳಿಗೆ ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸಲು ಅನುಕೂಲವಾಗುವಂತಹ ಅಧಿಕಾರ, ಕಾರ್ಯಗಳು ಮತ್ತು ಜವಾಬ್ದಾರಿಗಳನ್ನು ನೀಡಿರುತ್ತದೆ. ಸಂವಿಧಾನದ 11ನೇ ಪರಿಶಿಷ್ಟದಲ್ಲಿ ತಿಳಿಸಿರುವಂತೆ, ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಅದರಲ್ಲೂ ವಿಶೇಷವಾಗಿ ಗ್ರಾಮ ಪಂಚಾಯತಿಗಳು, ಲಭ್ಯವಾಗುವ ಸ್ಥಳೀಯ ಸಂಪನ್ಮೂಲಗಳು ಮತ್ತು ಸರ್ಕಾರದ ಅನುದಾನಗಳನ್ನು ಅವಲಂಬಿಸಿದ ಯೋಜನೆಗಳನ್ನು ಸಿದ್ಧಪಡಿಸಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕಾಗಿರುತ್ತದೆ.

ಸಂವಿಧಾನದ 73ನೇ ತಿದ್ದುಪಡಿಗೆ ಅನುಗುಣವಾಗಿ ಕರ್ನಾಟಕ ರಾಜ್ಯದಲ್ಲಿ ಗ್ರಾಮಗಳ ಮಟ್ಟದಲ್ಲಿ ಪಂಚಾಯತ್ ರಾಜ್ ಸಾಂಸ್ಥಿಕ ವ್ಯವಸ್ಥೆಯನ್ನು ಸ್ಥಾಪಿಸಲು ಅನುವಾಗುವಂತೆ 1993ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಜಾರಿಗೊಳಿಸಿ ಗ್ರಾಮ ಪಂಚಾಯತಿಗಳು ಸ್ಥಳೀಯ ಸ್ವಯಂ ಆಡಳಿತ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸಲು ನಿಯಮಗಳನ್ನು ರಚಿಸಲಾಗಿರುತ್ತದೆ. ಈ ವರದಿಯಲ್ಲಿ ನಮೂದಿತವಾಗಿರುವ ಪ್ರಕರಣಗಳು ರಾಜ್ಯದ ಗ್ರಾಮ ಪಂಚಾಯತಿಗಳ 2018-19ರ ಆರ್ಥಿಕ ವರ್ಷದ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಗಮನಿಸಿದಂತಹ ಅಂಶಗಳಾಗಿರುತ್ತವೆ.

1.2 ಗ್ರಾಮ ಪಂಚಾಯತಿಗಳ ಸಾಂಸ್ಥಿಕ ರಚನೆ.

ರಾಜ್ಯದಲ್ಲಿ ದಿನಾಂಕ:31.03.2019ರಂತ್ಯಕ್ಕೆ ಒಟ್ಟು 6035 ಗ್ರಾಮ ಪಂಚಾಯತಿಗಳು ಸ್ಥಾಪಿತವಾಗಿದ್ದು, 6000 ಮತ್ತು ಅದಕ್ಕಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯತಿಗಳನ್ನು **ಗ್ರೇಡ್-1** ಗ್ರಾಮ ಪಂಚಾಯತಿಗಳು ಹಾಗೂ 6000ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯತಿಗಳನ್ನು **ಗ್ರೇಡ್-2** ಗ್ರಾಮ ಪಂಚಾಯತಿಗಳೆಂದು ವರ್ಗೀಕರಿಸಲಾಗಿರುತ್ತದೆ.

ಗ್ರಾಮ ಪಂಚಾಯತಿಯ ಸಾಂಸ್ಥಿಕ ರಚನೆ ಈ ಕೆಳಗಿನಂತಿದೆ.



1.3 ಗ್ರಾಮ ಪಂಚಾಯತಿಗಳ ಸ್ಥಾಯಿ ಸಮಿತಿಗಳ ರಚನೆ.

ಪಂಚಾಯತ್‌ರಾಜ್ ಸಂಸ್ಥೆಯ ಸ್ಥರ	ಸ್ಥಾಯಿ ಸಮಿತಿಗಳು
ಗ್ರಾಮ ಪಂಚಾಯತಿ	1.ಹಣಕಾಸು, ಲೆಕ್ಕಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ
	2.ಸಾಮಾನ್ಯ ಸ್ಥಾಯಿ ಸಮಿತಿ
	3.ಸಾಮಾಜಿಕ ನ್ಯಾಯ ಸಮಿತಿ
	4.ಸೌಕರ್ಯಗಳ ಸಮಿತಿ
	5. ಉತ್ಪಾದನಾ ಸಮಿತಿ
	(ಕಲಂ 61-1)

ಆಧಾರ: ಕರ್ನಾಟಕ ಪಂಚಾಯತ್‌ರಾಜ್‌ಅಧಿನಿಯಮ, 1993.

1.4 ಗ್ರಾಮ ಪಂಚಾಯತಿಗಳ ಆಂತರಿಕ ಹೊಣೆಗಾರಿಕೆಯ ಸ್ಥೂಲ ಪರಿಚಯ.

ಪ್ರಾಧಿಕಾರ	ಹೊಣೆಗಾರಿಕೆ
ಅಧ್ಯಕ್ಷರು/ಪಂಚಾಯತ್‌ಅಭಿವೃದ್ಧಿ ಅಧಿಕಾರಿಗಳು	1. ಎಲ್ಲಾ ಹಂತಗಳಲ್ಲಿ ಪಾರದರ್ಶಕತೆಯನ್ನು ಅಳವಡಿಸುವುದು.
	2. ವಾಸ್ತವಿಕ ಹಾಗೂ ಗುರಿಯುಳ್ಳ ಕಾರ್ಯಕ್ರಮ ರೂಪಿಸುವುದು.
	3. ಮೂಲಭೂತ ಸೌಕರ್ಯ ಒದಗಿಸುವುದು.
	4. ಭೌತಿಕ ಆಸ್ತಿ ನಿರ್ವಹಣೆ.
	5. ರಾಜಸ್ವ ಕೊರತೆ ನೀಗಿಸುವುದು.
ಜಿಲ್ಲಾ ಪಂಚಾಯತ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು / ತಾಲ್ಲೂಕು ಪಂಚಾಯತಿಕಾರ್ಯನಿರ್ವಾಹಣಾಧಿಕಾರಿಗಳು	1. ಆಯವ್ಯಯ ಮತ್ತು ಕ್ರಿಯಾ ಯೋಜನೆ ಅನುಮೋದನೆ ಮತ್ತು ಅನುಷ್ಠಾನದ ಬಗ್ಗೆ ಉಸ್ತುವಾರಿ.
	2. ಎಲ್ಲಾ ಕಾರ್ಯಕ್ರಮಗಳ ಸಮಗ್ರ ಮೇಲ್ವಿಚಾರಣೆ ಮತ್ತು ನಿಯಂತ್ರಣ.

ಅಧ್ಯಾಯ-2

ಗ್ರಾಮ ಪಂಚಾಯತಿಗಳ ಹಣಕಾಸಿನ ಪರಿಸ್ಥಿತಿ

2.1 ಗ್ರಾಮ ಪಂಚಾಯತಿಗಳಿಗೆ ಹಣಕಾಸಿನ ಹರಿವು.

ಗ್ರಾಮ ಪಂಚಾಯತಿಗಳಿಗೆ ರಾಜ್ಯ ಸರ್ಕಾರವು ಸಾಮಾನ್ಯ ಆಡಳಿತ ಮತ್ತು ಅಭಿವೃದ್ಧಿ ಚಟುವಟಿಕೆಗಳ ಅನುಷ್ಠಾನಕ್ಕಾಗಿ ಶಾಸನಬದ್ಧ ಅನುದಾನ, ಅಭಿವೃದ್ಧಿ ಅನುದಾನ, 14ನೇ ಹಣಕಾಸು ಆಯೋಗದ ಅನುದಾನ, ನಿರ್ಮಲ ಕರ್ನಾಟಕ, ಇಂದಿರಾ ಆವಾಸ್, ಕಿರುನೀರು ಸರಬರಾಜು, ಆಶ್ರಯ ಯೋಜನೆ, ಗ್ರಾಮ ಸ್ವರಾಜ್ ಯೋಜನೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗಳು ಹಾಗೂ ಇತರೆ ಯೋಜನೆಗಳ ಅನುದಾನವನ್ನು ನಿಗದಿಪಡಿಸುವ ಮೂಲಕ, ಸಾಕ್ಷರತೆ, ಜನಸಂಖ್ಯೆ, ಆರೋಗ್ಯ, ವೈದ್ಯಕೀಯ, ಸಾಮಾಜಿಕ ಕಾರ್ಯಕ್ರಮಗಳು ಪ್ರಕೃತಿ ವಿಕೋಪದ ಸವಾಲುಗಳು, ತುರ್ತು ಕಾಮಗಾರಿ ನಿರ್ವಹಣೆ, ಕುಡಿಯುವ ನೀರಿನ ವ್ಯವಸ್ಥೆ, ನೈರ್ಮಲ್ಯೀಕರಣ ಮುಂತಾದ ಅಗತ್ಯಗಳನ್ನು ಪರಿಗಣಿಸುವುದರ ಜೊತೆಗೆ ಕೇಂದ್ರ ಮತ್ತು ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಆಧರಿಸಿ ಅನುದಾನವನ್ನು ಬಿಡುಗಡೆ ಮಾಡುತ್ತದೆ.

ರಾಜ್ಯ ಸರ್ಕಾರವು ಒಟ್ಟಾರೆ ಅನುದಾನಗಳನ್ನು ಪ್ರತಿ ತ್ರೈಮಾಸಿಕ ಹಾಗೂ ವರ್ಷಾಂತ್ಯದಲ್ಲಿ ಬಿಡುಗಡೆ ಮಾಡುತ್ತದೆ. ಪ್ರತಿ ವರ್ಷ ಅನುದಾನವನ್ನು ಕೇಂದ್ರದಿಂದ, ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯಿತಿಯ ಮೂಲಕ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಅನುದಾನವನ್ನು ದಿನಗೂಲಿ ಮತ್ತು ಸಾಮಗ್ರಿಗಳ ಖರೀದಿಗೆ ಆಯಾ ಗ್ರಾಮ ಪಂಚಾಯತಿಗಳಿಗೆ ರಾಜ್ಯ ಸರ್ಕಾರದಿಂದ ಕೇಂದ್ರೀಕೃತ ಖಾತೆಯಿಂದ ಒದಗಿಸಲಾಗುತ್ತಿದೆ.

ಸರ್ಕಾರದಿಂದ ಬಿಡುಗಡೆಯಾದ ಅನುದಾನಗಳಲ್ಲದೇ, ಗ್ರಾಮ ಪಂಚಾಯತಿ ವಸೂಲಿಸಿದ/ಸ್ವೀಕರಿಸಿದ ತೆರಿಗೆ/ದರ, ಕೊಡುಗೆ/ಕಾಣಿಕೆ ರೂಪದಲ್ಲಿ ಸ್ವೀಕರಿಸಿದ ಮೊತ್ತಗಳು, ಗ್ರಾಮ ಪಂಚಾಯತಿಗಳ ಮಾಲೀಕತ್ವದಲ್ಲಿನ ಯಾವುದೇ ಸ್ಥಿರ/ಚರ ಸ್ವತ್ತಿನ ಬಾಡಿಗೆ, ಮಾರಾಟದಿಂದ ಬರುವ ಆದಾಯಗಳು ಗ್ರಾಮ ಪಂಚಾಯತಿಯ ಆದಾಯದ ಸ್ವಂತ ಸಂಪನ್ಮೂಲಗಳಾಗಿರುತ್ತದೆ.

2.2 2019-20ನೇ ಸಾಲಿನಲ್ಲಿ ಲೆಕ್ಕಪರಿಶೋಧನೆ ಕೈಗೊಂಡ ಗ್ರಾಮ ಪಂಚಾಯತಿಗಳ ವಿವರಗಳು.

ವರ್ಷ	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನೆ ಮುಕ್ತಾಯಗೊಂಡಿರುವ ಗ್ರಾಮ ಪಂಚಾಯತಿಗಳ	ಲೆಕ್ಕ ಪರಿಶೋಧನೆಗೆ ಬಾಕಿ ಉಳಿದಿರುವ ಗ್ರಾಮ ಪಂಚಾಯತಿಗಳ ಸಂಖ್ಯೆ	ಶೇಕಡವಾರು ಪ್ರಗತಿ
2018-19	6035	5493	542	91.02

ರಾಜ್ಯದಲ್ಲಿ 2018-19ನೇ ಸಾಲಿನಂತ್ಯಕ್ಕೆ 6035 ಗ್ರಾಮ ಪಂಚಾಯತಿಗಳು ಅಸ್ತಿತ್ವದಲ್ಲಿದ್ದು, ದಿನಾಂಕ:31.03.2019ರಂತ್ಯಕ್ಕೆ 5493 ಗ್ರಾಮ ಪಂಚಾಯತಿಗಳ ಲೆಕ್ಕ ಪರಿಶೋಧನೆ ಪೂರ್ಣಗೊಂಡಿರುತ್ತದೆ. ಇನ್ನುಳಿದ 542 ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಯನ್ನು ಈ ಕೆಳಕಂಡ ಕಾರಣಗಳಿಂದ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ.

1) ಗ್ರಾಮ ಪಂಚಾಯತಿಗಳು ದೀರ್ಘಕಾಲದಿಂದ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸದೇ ಬಾಕಿ ಉಳಿಸಿ ಕೊಂಡಿರುವುದು.

2) ಗ್ರಾಮ ಪಂಚಾಯತಿಗಳು ನಗದು ಪುಸ್ತಕ / ಜರ್ನಲ್ ಪುಸ್ತಕ / ಜಮೆ ಪುಸ್ತಕ (Remittaence Book) ಮುಂತಾದ ಲೆಕ್ಕಪುಸ್ತಕಗಳನ್ನು ಬರೆಯದೇ ಇರುವುದು.

3) ಲೆಕ್ಕಪರಿಶೋಧನೆಗೆ ಕಡತಗಳು, ಲೆಕ್ಕಪತ್ರಗಳು ಹಾಗೂ ದಾಖಲೆಗಳನ್ನು ಹಾಜರುಪಡಿಸದಿರುವುದು.

2018-19ನೇ ಸಾಲಿನಂತ್ಯಕ್ಕೆ 6035 ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆ ಕೈಗೊಳ್ಳಬೇಕಾಗಿದ್ದು, ಅವುಗಳಲ್ಲಿ 5493 ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆ ಪೂರ್ಣಗೊಂಡಿದ್ದು, ಉಳಿದ 542 ಗ್ರಾಮ

ಪಂಚಾಯತಿಗಳ ಲೆಕ್ಕಪರಿಶೋಧನೆ ಬಾಕಿ ಇರುತ್ತದೆ. ಈ ಸಂಬಂಧ ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು ಕ್ರಮವಾಗಿ ಅನುಬಂಧ-1ಎ ರಲ್ಲಿ ನೀಡಲಾಗಿದೆ.

2.3 ಗ್ರಾಮ ಪಂಚಾಯತಿಗಳ ಹಣಕಾಸಿನ ಪರಿಸ್ಥಿತಿ.

ಗ್ರಾಮ ಪಂಚಾಯತಿಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ಸಂಪನ್ಮೂಲಗಳ ಆಧಾರವೆಂದರೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನಗಳು ಹಾಗೂ ಕೇಂದ್ರ ಮತ್ತು ರಾಜ್ಯ ಹಣಕಾಸು ಆಯೋಗದ ಅನುದಾನಗಳಾಗಿರುತ್ತವೆ. ಅಲ್ಲದೆ ಸ್ಥಳೀಯವಾಗಿ ತೆರಿಗೆಗಳು / ಉಪಕರಗಳು ಮತ್ತು ಇತರೆ ಆರ್ಥಿಕ ಸಂಪನ್ಮೂಲಗಳಿಂದ ಆದಾಯವನ್ನು ಹೆಚ್ಚಿಸಿಕೊಳ್ಳಬೇಕಾಗಿರುತ್ತದೆ. ಗ್ರಾಮ ಪಂಚಾಯತಿಗಳು ಈ ಕೆಳಕಂಡಂತೆ ಹಣಕಾಸು ಹರಿವಿನ ವ್ಯವಸ್ಥೆಯನ್ನು ನಿರ್ವಹಿಸಲಾಗುತ್ತಿವೆ.

ಹಣಕಾಸು ಹರಿವಿನ ವ್ಯವಸ್ಥೆ

ಕ್ರ.ಸಂ.	ಹಣದ ಸ್ವರೂಪ	ಹಣದ ಮೂಲ	ಹಣದ
1	ಸ್ವಂತ ಜಮೆಗಳು	ತೆರಿಗೆದಾರರು ಮತ್ತು	ಬ್ಯಾಂಕ್
2	ರಾಜ್ಯ ಹಣಕಾಸು ಆಯೋಗದ ನಿಯೋಜಿಸಿದ ಆದಾಯ.	ರಾಜ್ಯ ಸರ್ಕಾರ	ಖಜಾನೆ/ಬ್ಯಾಂಕ್
3	ಕೇಂದ್ರ ಹಣಕಾಸು ಆಯೋಗ/ ಕೇಂದ್ರ ಪ್ರಾಯೋಜಿತ ಯೋಜನೆಗಳು	ಭಾರತ ಸರ್ಕಾರ	ಬ್ಯಾಂಕ್
4	ರಾಜ್ಯ ಯೋಜನೆಗಳು	ರಾಜ್ಯ ಸರ್ಕಾರ	ಖಜಾನೆ

ರಾಜ್ಯದಲ್ಲಿನ ಗ್ರಾಮ ಪಂಚಾಯತಿಗಳ 2018-19ರ ಆರ್ಥಿಕ ವರ್ಷಗಳಲ್ಲಿ ಕೈಗೊಂಡ ಲೆಕ್ಕಪರಿಶೋಧನಾ ವರದಿಗಳ ಮಾಹಿತಿಯಂತೆ ಒಟ್ಟಾರೆ ಹಣಕಾಸಿನ ವಹಿವಾಟು ಈ ಕೆಳಕಂಡಂತಿರುತ್ತವೆ.

	(ರೂ.ಲಕ್ಷಗಳಲ್ಲಿ)
ವಿವರಗಳು	2018-2019
ಲೆಕ್ಕಪರಿಶೋಧನೆಯಾದ ಗ್ರಾಮ ಪಂಚಾಯತಿಗಳ ಸಂಖ್ಯೆ (ದಿನಾಂಕ:31.03.2020 ರಅಂತ್ಯದ ವರೆಗಿನ ಪ್ರಗತಿ)	5493
ದಿನಾಂಕ:01.04.2018ರಂತೆ ಆರಂಭಿಕ ಶಿಲ್ಕು	191621.83
ವರ್ಷದ ಸ್ವೀಕೃತಿ	852905.15
ಒಟ್ಟು	1044526.98
ವರ್ಷದ ವೆಚ್ಚ	744987.89
31.03.2019ರಂತೆ ಅಖೈರು ಶಿಲ್ಕು	299539.09

2018-19ನೇ ಸಾಲಿನ ಆರ್ಥಿಕ ವಹಿವಾಟಿನ ಜಿಲ್ಲಾವಾರು ವಿವರಗಳನ್ನು ಅನುಬಂಧ-2ರಲ್ಲಿ ಮತ್ತು ಗ್ರಾಮಪಂಚಾಯಿತಿವಾರು ವಿವರಗಳನ್ನು ಅನುಬಂಧ-2ಎ ರಲ್ಲಿ ನೀಡಲಾಗಿದೆ.

2.4 ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಯಾದ ಶಾಸನಬದ್ಧ ಅನುದಾನ/ಸ್ವೀಕೃತಿಯಾದ ರಾಜಸ್ವ

2018-19ನೇ ಸಾಲಿನ ಆಯವ್ಯಯದಲ್ಲಿ, ಹಿಂದಿನ ಸಾಲಿನಂತೆ ಗ್ರಾಮಪಂಚಾಯತಿಗಳಿಗೆ ನೀಡುತ್ತಿರುವ ಶಾಸನಬದ್ಧ ಅನುದಾನವನ್ನು ಮುಂದುವರಿಸಲಾಗಿದೆ. ಎಂಟು ಸಾವಿರಗಳಿಗಿಂತ ಹೆಚ್ಚಿನ ಜನಸಂಖ್ಯೆ ಹೊಂದಿರುವ

ಗ್ರಾಮ ಪಂಚಾಯತಿಗಳಿಗೆ ರೂ.10.00 ಲಕ್ಷಗಳನ್ನು ನಿಗದಿಪಡಿಸಲಾಗಿದ್ದು, ಇದರಲ್ಲಿ ಶೇಕಡ 60ರಷ್ಟನ್ನು ಗ್ರಾಮ ಪಂಚಾಯತಿಗಳ ಚಾಲ್ತಿ ತಿಂಗಳುಗಳ ವಿದ್ಯುಚ್ಛಕ್ತಿ ಬಿಲ್ ಪಾವತಿಗಾಗಿ ಮತ್ತು ಶೇಕಡ 40 ರಷ್ಟನ್ನು ಗ್ರಾಮ ಪಂಚಾಯತಿ ನೌಕರರ ವೇತನಕ್ಕಾಗಿ ಬಳಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಆದರೆ, ಎಂಟು ಸಾವಿರಗಳಿಗೂ ಕಡಿಮೆ ಜನಸಂಖ್ಯೆ ಹೊಂದಿರುವ ಗ್ರಾಮ ಪಂಚಾಯತಿಗಳು ಈ ಸೌಲಭ್ಯದಿಂದ ವಂಚಿತಗೊಂಡಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ತೆರಿಗೆಗಳ ಅಧಿನಿಯಮ 1994ರ ನಿಯಮ 14 ರಂತೆ ಕಂದಾಯದ ದರಗಳನ್ನು ಪ್ರತಿ 4 ವರ್ಷಗಳಿಗೊಮ್ಮೆ ಪರಿಷ್ಕರಿಸಬೇಕಾಗಿದ್ದು, ಈ ಕುರಿತಂತೆ ಕ್ರಮಕೈಗೊಂಡು ಗ್ರಾಮ ಪಂಚಾಯತಿಗಳಲ್ಲಿ ಆದಾಯವನ್ನು ಹೆಚ್ಚಿಸಿಕೊಳ್ಳಲು ಸೂಚಿಸಬಹುದಾಗಿದೆ. ಗ್ರಾಮ ಪಂಚಾಯತಿಗಳು ವಸೂಲಿಸಿದ/ಸ್ವೀಕರಿಸಿದ ತೆರಿಗೆ ದರ, ಸ್ಥಿರ/ಚರ ಸ್ವತ್ತಿನ ಬಾಡಿಗೆ ಹಾಗೂ ಇತರೆ ಆರ್ಥಿಕ ಸಂಪನ್ಮೂಲಗಳಿಂದ ಆದಾಯವನ್ನು ಹೆಚ್ಚಿಸಿಕೊಂಡು, ಸದರಿ ಖರ್ಚು-ವೆಚ್ಚವನ್ನು ನಿಭಾಯಿಸಬಹುದಾಗಿದೆ. ಈ ವರ್ಷದಲ್ಲಿ ಎಲ್ಲಾ ಯೋಜನೆಗಳಿಗಾಗಿ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಯಾದ/ಸ್ವೀಕೃತವಾದ ಒಟ್ಟು ಅನುದಾನ ರೂ.852905.15ಲಕ್ಷಗಳಾಗಿದೆ. ಜಿಲ್ಲಾವಾರು ವೆಚ್ಚದ ವಿವರಗಳನ್ನು ಅನುಬಂಧ-3ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು ಅನುಬಂಧ-3ಎ ರಲ್ಲಿ ನೀಡಲಾಗಿದೆ.

2.5 ಗ್ರಾಮ ಪಂಚಾಯತಿಗಳಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ಭರಿಸಲಾದ ವೆಚ್ಚಗಳ ವಿವರಗಳು.

2018-19ನೇ ಆರ್ಥಿಕ ವರ್ಷಾಂತ್ಯಕ್ಕೆ ಸಂಬಂಧಿಸಿದಂತೆ ಈ ಕ್ರೋಢೀಕೃತ ವರದಿ ತಯಾರಿಕಾ ವೇಳೆಗೆ 6035 ಗ್ರಾಮ ಪಂಚಾಯತಿಗಳ ಲೆಕ್ಕ ಪರಿಶೋಧನೆಯನ್ನು ಕೈಗೊಂಡು ವರದಿಗಳನ್ನು ಬಿಡುಗಡೆಗೊಳಿಸಲಾಗಿದೆ. ಈ ಪೈಕಿ ಗ್ರಾಮ ಪಂಚಾಯತಿಗಳಲ್ಲಿ ಮುಖ್ಯವಾಗಿ ನಿರ್ವಹಿಸಲಾಗಿರುವ ವೆಚ್ಚಗಳೆಂದರೆ, ಸಾಮಾನ್ಯ ಆಡಳಿತ, ಸಾರ್ವಜನಿಕ ಆರೋಗ್ಯ, ಸಾರ್ವಜನಿಕ ಕಾಮಗಾರಿ, ಇತರೇ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮಾಡಿದ ವೆಚ್ಚ ಹಾಗೂ ಸರ್ಕಾರದ ನಿರ್ದಿಷ್ಟ ಯೋಜನೆಗಳಿಗಾಗಿ ಮಾಡಿದ ವೆಚ್ಚವಾಗಿರುತ್ತದೆ. ಈ ವರ್ಷದಲ್ಲಿ ಎಲ್ಲಾ ಯೋಜನೆಗಳಿಗಾಗಿ ಗ್ರಾಮ ಪಂಚಾಯತಿಗಳ ವತಿಯಿಂದ ಭರಿಸಲಾದ ಒಟ್ಟು ವೆಚ್ಚ ರೂ.744987.89ಲಕ್ಷಗಳಾಗಿದೆ. ಜಿಲ್ಲಾವಾರು ವೆಚ್ಚದ ವಿವರಗಳನ್ನು ಅನುಬಂಧ-4ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು ಅನುಬಂಧ-4ಎ ರಲ್ಲಿ ನೀಡಲಾಗಿದೆ.

2.6 ಗ್ರಾಮ ಪಂಚಾಯತಿಗಳು ತೆರಿಗೆಗಳ ದರ ವಿಧಿಸುವುದು ಮತ್ತು ತೆರಿಗೆಗಳ ಬೇಡಿಕೆ, ವಸೂಲಾತಿ ಹಾಗೂ ಬಾಕಿಯ ವಿವರಗಳು.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಕಲಂ 199ರ ಪ್ರಕಾರ ರಾಜ್ಯದ ಗ್ರಾಮ ಪಂಚಾಯತಿಗಳು ಅವುಗಳ ಆದಾಯದ ಮೂಲವಾದ ಆಸ್ತಿ ತೆರಿಗೆ ಮತ್ತು ಇತರೆ ತೆರಿಗೆಗಳನ್ನು ವಿಧಿಸಿ, ವಸೂಲಿ ಮಾಡಬಹುದಾಗಿದೆ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 33 ಮತ್ತು 34 ರಂತೆ ಗ್ರಾಮ ಪಂಚಾಯತಿಗಳು ವಿಧಿಸುವ ವಿವಿಧ ತೆರಿಗೆಗಳ ಕುರಿತಂತೆ, ಬೇಡಿಕೆ-ವಸೂಲಾತಿ-ಬಾಕಿ ವಹಿಗಳನ್ನು ನಿರ್ವಹಿಸಬೇಕಾಗಿರುತ್ತದೆ. ಬಹಳಷ್ಟು ಗ್ರಾಮ ಪಂಚಾಯತಿಗಳು ಈ ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಂಡಿರುವುದಿಲ್ಲ ಹಾಗೂ ಬಹುತೇಕ ಗ್ರಾಮ ಪಂಚಾಯತಿಗಳು ಸದರಿ ವಹಿಗಳನ್ನು ನಿರ್ವಹಿಸಿರುವುದಿಲ್ಲ. ಈ ರೀತಿ ಬೇಡಿಕೆ-ವಸೂಲಾತಿ-ಬಾಕಿ ವಹಿಗಳನ್ನು ನಿರ್ವಹಿಸದಿದ್ದಲ್ಲಿ ಮತ್ತು ಸಂಸ್ಥೆವಾರು ಬಾಕಿ ಪಟ್ಟಿಯನ್ನು ತಯಾರಿಸದಿದ್ದಲ್ಲಿ ಗ್ರಾಮ ಪಂಚಾಯತಿಗಳಿಗೆ ಬರುವ ಆದಾಯವು ಕೈ ತಪ್ಪುವ ಸಾಧ್ಯತೆ ಇರುತ್ತದೆ. ಈ ಬಗ್ಗೆ ಸರ್ಕಾರವು ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ಜಮಾಬಂದಿ ನಿರ್ವಹಣೆ) ನಿಯಮಗಳು 2004 ನ್ನು ರಚಿಸಿದ್ದು, ಗ್ರಾಮ ಪಂಚಾಯತಿಗಳ ಲೆಕ್ಕ ಪುಸ್ತಕಗಳು, ರಿಜಿಸ್ಟರ್‌ಗಳು ಮತ್ತು ದಾಖಲೆಗಳ ಸಮರ್ಪಕ ನಿರ್ವಹಣೆ ಹಾಗೂ ಆಸ್ತಿ ತೆರಿಗೆ, ಫೀಜುಗಳು ಮತ್ತು ನೀರಿನ ದರಗಳ ಲೆವಿ ಮತ್ತು ಸಂಗ್ರಹಗಳನ್ನು ಪರಿಶೀಲಿಸುವುದು ಪಂಚಾಯತ್ ಜಮಾಬಂದಿ ನಿರ್ವಾಹಣಾಧಿಕಾರಿಯ ಕರ್ತವ್ಯ ಹಾಗೂ ಜವಾಬ್ದಾರಿಯಾಗಿರುತ್ತದೆ. ಆದ್ದರಿಂದ ಗ್ರಾಮ

ಪಂಚಾಯತಿಗಳ ಆಡಳಿತ ವರ್ಗವು ಬರಬಹುದಾದ ಆದಾಯ ಕೈ ತಪ್ಪುವುದನ್ನು ತಡೆಗಟ್ಟಲು ಬೇಡಿಕೆ, ವಸೂಲಿ ಹಾಗೂ ಬಾಕಿಯ ವಿವರಗಳ ವಹಿಯನ್ನು ನಿರ್ವಹಿಸಿ, ತೆರಿಗೆಗಳನ್ನು ವಸೂಲಿ ಮಾಡಿ, ಗ್ರಾಮ ಪಂಚಾಯತಿಗಳ ಆದಾಯವನ್ನು ವೃದ್ಧಿಸಿಕೊಳ್ಳುವಂತೆ ಹಾಗೂ ತೆರಿಗೆ ಪಾವತಿಯಿಂದ ನುಣುಚಿಕೊಳ್ಳುವ ಪ್ರಕರಣಗಳನ್ನು ತಡೆಗಟ್ಟುವಂತೆ ಲೆಕ್ಕಪರಿಶೋಧನೆಯಲ್ಲಿ ಸಲಹೆ ನೀಡಿದೆ. ಗ್ರಾಮ ಪಂಚಾಯತಿಗಳ ಆಸ್ತಿ ತೆರಿಗೆ, ನೀರಿನ ತೆರಿಗೆ, ಬಾಡಿಗೆ ಹರಾಜು ಇತ್ಯಾದಿಗಳ ಕುರಿತಂತೆ 2018-19ನೇ ಸಾಲಿನ ಪ್ರಾರಂಭದಲ್ಲಿ ರೂ.103474.79ಲಕ್ಷಗಳು ಪ್ರಾರಂಭ ಶಿಲ್ಕು ಇದ್ದು, ವರದಿ ಸಾಲಿನ ಬೇಡಿಕೆ ರೂ.82090.69ಲಕ್ಷಗಳಾಗಿದ್ದು ಒಟ್ಟು ರೂ.185565.47ಲಕ್ಷಗಳಾಗಿರುತ್ತದೆ. ಇದರಲ್ಲಿ ರೂ.66005.56ಲಕ್ಷಗಳು ವಸೂಲಿಯಾಗಿ, ವರದಿ ಸಾಲಿನಂತ್ಯಕ್ಕೆ ರೂ.119559.91ಲಕ್ಷಗಳು ಬಾಕಿ ಉಳಿದಿರುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-7ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು ಅನುಬಂಧ-7ಎ ರಲ್ಲಿ ನೀಡಲಾಗಿದೆ.

2.7 ಮಾಸಿಕ, ಅರ್ಧವಾರ್ಷಿಕ ಮತ್ತು ವಾರ್ಷಿಕ ಲೆಕ್ಕಪತ್ರಗಳು ಸಲ್ಲಿಕೆಯಾಗದಿರುವ ಬಗ್ಗೆ.

ಕರ್ನಾಟಕ ಪಂಚಾಯತ್‌ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 108ರ ಪ್ರಕಾರ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳು/ಕಾರ್ಯದರ್ಶಿಯವರು ಪ್ರತಿ ತಿಂಗಳ ಸ್ವೀಕೃತಿ ಮತ್ತು ಪಾವತಿಗಳ ವಿವರಣಾ ಪಟ್ಟಿಯನ್ನು ನಮೂನೆ-53ರಲ್ಲಿ ಹಾಗೂ ಪ್ರಾಯೋಗಿಕ ಸಮತೋಲನಾ ಪಟ್ಟಿಯನ್ನು (ಖಿಡಿಚಿಟ ಃಚಿಟಚಿಟಿಛಿಜ) ನಮೂನೆ-54ರಲ್ಲಿ ಸಿದ್ಧಪಡಿಸಿ ಮುಂದಿನ ತಿಂಗಳಿನ 20ನೇ ದಿನಾಂಕದೊಳಗಾಗಿ ಗ್ರಾಮ ಪಂಚಾಯತಿಯ ಮಾಸಿಕ ಸಭೆಯಲ್ಲಿ ಪರಿಶೀಲನೆಗೆ ಮಂಡಿಸಿ ಹಾಗೂ ಅನುಮೋದಿತ ಪ್ರತಿಯನ್ನು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳ ಸಹಾಯಕ ನಿಯಂತ್ರಕರುರವರಿಗೆ ಸಲ್ಲಿಸಬೇಕಾಗಿರುತ್ತದೆ. ಗ್ರಾಮ ಪಂಚಾಯತಿಯ ಸಂಪನ್ಮೂಲ ಸಂಗ್ರಹಣೆ, ಅಭಿವೃದ್ಧಿ ಕಾರ್ಯಗಳ ವೆಚ್ಚದ ಪ್ರಗತಿ ಹಾಗೂ ವಿವರಣಾ ಪಟ್ಟಿಯಲ್ಲಿನ ಲೋಪದೋಷಗಳ ಬಗ್ಗೆ ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಹಾಗೂ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲಗಳ ಸಹಾಯಕ ನಿಯಂತ್ರಕರು ಪರಿಶೀಲಿಸಿ ಸಂಬಂಧಪಟ್ಟ ಗ್ರಾಮ ಪಂಚಾಯತಿಗೆ ತಿಳಿಸಬೇಕಾಗಿರುತ್ತದೆ.

ಆದರೆ ರಾಜ್ಯದ 6035 ಗ್ರಾಮ ಪಂಚಾಯತಿಗಳ ಪೈಕಿ, 5493 ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಯು 2018-19ನೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಂಡಿದ್ದರೂ ಸದರೀ ಗ್ರಾಮಪಂಚಾಯತಿಗಳಿಂದ ಮಾಸಿಕ ಲೆಕ್ಕಪತ್ರಗಳು ನಿಗದಿತ ಅವಧಿಯಲ್ಲಿ ಸಲ್ಲಿಕೆಯಾಗದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಿರುತ್ತದೆ. ಇದರಿಂದ ಲೆಕ್ಕಪರಿಶೀಲನೆ ಕಾರ್ಯ ವಿಳಂಬವಾಗುತ್ತಿದ್ದು, ಈ ಬಗ್ಗೆ ಪ್ರತಿ ವರ್ಷ ಲೆಕ್ಕಪರಿಶೋಧನಾ ವರದಿಗಳಲ್ಲಿ ತಿಳಿಸಲಾಗಿದ್ದರೂ ಮಾಸಿಕ ಲೆಕ್ಕಪತ್ರಗಳನ್ನು ನಿಗದಿತ ಅವಧಿಯಲ್ಲಿ ಸಲ್ಲಿಸದಿರುವ ಪ್ರವೃತ್ತಿಯು ಮುಂದುವರೆದಿದೆ.

ಅದೇ ರೀತಿ ಸೆಪ್ಟೆಂಬರ್ ಅಂತ್ಯಕ್ಕೆ ನಮೂನೆ 53 ಮತ್ತು 54 ರಲ್ಲಿ ಅರ್ಧ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ದಪಡಿಸಿ ಮುಂದಿನ ಮಾಹೆಯ 20ನೇ ತಾರೀಖಿನೊಳಗೆ ಸಲ್ಲಿಸಬೇಕಾಗಿದ್ದು, ಅರ್ಧ ವಾರ್ಷಿಕ ಲೆಕ್ಕಪತ್ರಗಳನ್ನು ಸಂಬಂಧಿಸಿದ ಗ್ರಾಮ ಪಂಚಾಯತಿಗಳು ನಿಗದಿತ ಸಮಯದಲ್ಲಿ ಸಿದ್ದಪಡಿಸಿ ಸಲ್ಲಿಸದಿರುವುದು ಸಹ ಕಂಡು ಬಂದಿದೆ.

ವಾರ್ಷಿಕ ಲೆಕ್ಕಪತ್ರಗಳಾದ ವಿತ್ತ ನಿರೂಪಣಾ ಪಟ್ಟಿಗಳನ್ನು ನಮೂನೆ 53, 55 ಮತ್ತು 56 ರಲ್ಲಿ ಸಿದ್ದಪಡಿಸಿ, ಜೂನ್ 30ನೇ ತಾರೀಖಿನ ಒಳಗಾಗಿ ಗ್ರಾಮ ಪಂಚಾಯತಿಯ ಅಂಗೀಕಾರ ಪಡೆದು, ಲೆಕ್ಕ ಪರಿಶೋಧನಾ ವರ್ತುಲಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದರೆ ಗ್ರಾಮ ಪಂಚಾಯತಿಗಳು ಜೂನ್ 30ರ ಒಳಗಾಗಿ ವಾರ್ಷಿಕ ಲೆಕ್ಕಪತ್ರಗಳನ್ನು ಸಂಬಂಧಿಸಿದ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಗಳಿಗೆ ಸಲ್ಲಿಸಿರುವುದಿಲ್ಲ. ಈ ಅಂಶವನ್ನು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಹಾಗೂ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳ ಗಮನಕ್ಕೂ ಸಹ ಪತ್ರ ಮುಖೇನ ತರಲಾಗಿರುತ್ತದೆ. ವಿತ್ತ

ನಿರೂಪಣಾ ಪಟ್ಟಿಗಳನ್ನು ನಿಗದಿತ ಸಮಯದ ಒಳಗೆ ಸಲ್ಲಿಸದಿರುವುದರಿಂದ ಗ್ರಾಮ ಪಂಚಾಯಿತಿಗಳ ಲೆಕ್ಕಪರಿಶೋಧನೆ ಕಾರ್ಯಕ್ರಮ ಹಮ್ಮಿಕೊಳ್ಳಲು ಸಾಧ್ಯವಾಗುವುದಿಲ್ಲ. ಸದರಿ ವಿಷಯಕ್ಕೆ ಸಂಬಂಧಿಸದಂತೆ ಆಡಳಿತ ಇಲಾಖೆಯವರು ಗ್ರಾಮಪಂಚಾಯಿತಿಗಳಿಗೆ ನಿಗಧಿತ ಅವಧಿಯಲ್ಲಿ ಲೆಕ್ಕಪತ್ರಗಳನ್ನು ಸಲ್ಲಿಸಲು ಸೂಕ್ತ ನಿರ್ದೇಶನ ನೀಡಬಹುದಾಗಿದೆ.

2.8 ಗ್ರಾಮ ಪಂಚಾಯತಿಗಳಲ್ಲಿ ಜೋಡಿ ದಾಖಲೆ ಲೆಕ್ಕ ಪದ್ಧತಿಯನ್ನು ನಿರ್ವಹಿಸಿರುವುದಿಲ್ಲ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ 243ನೇ ಪ್ರಕರಣದ ಮೇರೆಗೆ ಮತ್ತು ಕರ್ನಾಟಕ ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆಗಳ ಅಧಿನಿಯಮ 2003 ರ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 101ರ ಮೇರೆಗೆ ಗ್ರಾಮ ಪಂಚಾಯತಿಗಳಲ್ಲಿ ಸಂಚಯನ ಅಥವಾ ಜೋಡಿ ದಾಖಲೆ ಲೆಕ್ಕಪತ್ರ ಪದ್ಧತಿ ಜಾರಿಗೊಳಿಸಲಾಗಿದೆ. ಈ ನಿಯಮದ ಮೇರೆಗೆ ಗ್ರಾಮಪಂಚಾಯತಿಯ ಆದಾಯ ಮತ್ತು ವೆಚ್ಚದ ಲೆಕ್ಕಪತ್ರಗಳನ್ನು ಏಕ ದಾಖಲೆ ಲೆಕ್ಕ ಪದ್ಧತಿಯ (Single Entry System) ಬದಲಾಗಿ ಜೋಡಿ ದಾಖಲೆ ಲೆಕ್ಕ ಪದ್ದತಿಯ (Double Entry System) ಆಧಾರದ ಮೇಲೆ ಲೆಕ್ಕಪತ್ರಗಳನ್ನು ನಿರ್ವಹಿಸಬೇಕಾಗಿರುತ್ತದೆ. ಗ್ರಾಮ ಪಂಚಾಯತಿಗಳು ನಗದು ಪುಸ್ತಕ, ಜರ್ನಲ್ ಪುಸ್ತಕ ಮತ್ತು ಸಾಮಾನ್ಯ ಲೆಡ್ಜರ್‌ಗಳನ್ನು ನಿರ್ವಹಿಸಬೇಕಾಗಿರುತ್ತದೆ. ಗ್ರಾಮಪಂಚಾಯತಿಗಳಲ್ಲಿ 2018–19ನೇ ಸಾಲಿನ ಲೆಕ್ಕಪತ್ರಗಳನ್ನು ಜೋಡಿ ದಾಖಲೆ ಲೆಕ್ಕ ಪದ್ದತಿಯಲ್ಲಿ ಪೂರ್ಣ ಪ್ರಮಾಣದಲ್ಲಿ ನಿರ್ವಹಿಸದಿರುವುದನ್ನು ಲೆಕ್ಕ ತಪಾಸಣೆಯಲ್ಲಿ ಗಮನಿಸಿದ್ದು, 2018–19ನೇ ಸಾಲಿನಲ್ಲಿ ಲೆಕ್ಕಪರಿಶೋಧನೆ ಕೈಗೊಂಡ 5493 ಗ್ರಾಮಪಂಚಾಯಿತಿಗಳಲ್ಲಿ 2306 ಗ್ರಾಮ ಪಂಚಾಯತಿಗಳಲ್ಲಿ ಈ ಪದ್ದತಿಯನ್ನು ಇನ್ನೂ ಅಳವಡಿಸದೇ ಇರುವುದು ಕಂಡು ಬಂದಿದೆ. ಜೋಡಿ ದಾಖಲೆ ಲೆಕ್ಕ ಪದ್ದತಿಯನ್ನು ನಿರ್ವಹಿಸದಿರುವ ಗ್ರಾಮಪಂಚಾಯತಿಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ–8ರಲ್ಲಿ ಹಾಗೂ ಗ್ರಾಮಪಂಚಾಯತಿವಾರು ವಿವರಗಳನ್ನು ಅನುಬಂಧ–8(ಎ) ರಲ್ಲಿ ನೀಡಲಾಗಿದೆ.

ಅಧ್ಯಾಯ 3

ಲೆಕ್ಕಪರಿಶೋಧನೆಯ ಫಲಿತಾಂಶಗಳು

3.1 ಗ್ರಾಮ ಪಂಚಾಯತಿಗಳಲ್ಲಿ ರಾಜಸ್ವ ಸ್ವೀಕೃತಿಯನ್ನು ಪಂಚಾಯತಿ ನಿಧಿಗೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವ ಬಗ್ಗೆ.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 25ರ ಪ್ರಕಾರ ದಿನವಹಿ ವಸೂಲಿ ಮಾಡಿದ ಸ್ವೀಕೃತಿಯ ಮೊತ್ತವನ್ನು ದಿನವಹಿ ವಸೂಲಾತಿ ಪುಸ್ತಕದಲ್ಲಿ ನಮೂದಿಸಿಕೊಂಡು, ಕಾರ್ಯದರ್ಶಿಗಳು/ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ನಮೂದಾದ ಮೊತ್ತದ ಸತ್ಯಾಪನೆ ಮಾಡಿ ಚಲನ್ ಮೂಲಕ ಬ್ಯಾಂಕಿಗೆ ಜಮಾ ಮಾಡಬೇಕಾಗಿರುತ್ತದೆ. ಈ ರೀತಿ ಜಮಾ ಮಾಡಿದ ಮೊತ್ತವನ್ನು ಕಾರ್ಯದರ್ಶಿಯವರು ಪರಿಶೀಲಿಸಿ ಖಚಿತ ಪಡಿಸಿಕೊಳ್ಳಬೇಕಾಗಿರುತ್ತದೆ. ಆದರೆ ಪ್ರಸಕ್ತ ಸಾಲಿನ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಬ್ಯಾಂಕಿಗೆ ಜಮಾ ಮಾಡದೇ ಹಣ ದುರುಪಯೋಗಪಡಿಸಿಕೊಂಡಿರುವ ಹಲವಾರು ಪ್ರಕರಣಗಳು ಕಂಡುಬಂದಿರುತ್ತವೆ. ಆಯಾ ಗ್ರಾಮಪಂಚಾಯಿತಿಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಕಂದಾಯ ಹಾಗೂ ಇತರೇ ಸ್ವೀಕೃತಿ ಮೊತ್ತದ ಹಣದುರುಪಯೋಗ ಪ್ರಕರಣಗಳನ್ನು ವಿವರಿಸಲಾಗಿರುತ್ತದೆ. ಅದರಂತೆ 2018–19ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ 1632 ಗ್ರಾಮ ಪಂಚಾಯತಿಗಳ ರಾಜಸ್ವ ವಸೂಲಿಯ ಹಣದುರುಪಯೋಗದ ಮೊತ್ತ ರೂ.1097.55ಲಕ್ಷಗಳಾಗಿದ್ದು, ಈ ಪೈಕಿ ರೂ.678.70ಲಕ್ಷಗಳನ್ನು ವಸೂಲಿಸಿ, ಸಾಲಿನಂತ್ಯಕ್ಕೆ ಬಾಕಿ ರೂ.418.85ಲಕ್ಷಗಳನ್ನು ಗ್ರಾಮಪಂಚಾಯತಿ ನಿಧಿಗೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವುದು ಕಂಡುಬಂದಿರುತ್ತದೆ. ಈ ಮೊತ್ತವನ್ನು ವಸೂಲಿ ಮಾಡಿ ಸಂಬಂಧಿಸಿದ ಗ್ರಾಮ ಪಂಚಾಯತಿಗಳ ನಿಧಿಗೆ ಜಮಾ ಮಾಡಬೇಕಾಗುತ್ತದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ–9ರಲ್ಲಿ ಹಾಗೂ ಗ್ರಾಮ ಪಂಚಾಯಿತಿವಾರು ವಿವರಗಳನ್ನು ಅನುಬಂಧ–9ಎನಲ್ಲಿ ನೀಡಲಾಗಿದೆ.

ಇಂತಹ ಲೋಪದೋಷಗಳಿಗೆ ಕಾರಣರಾದ ಸಂಬಂಧಿಸಿದ ಕಾರ್ಯದರ್ಶಿಗಳು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ನಿಯಮಾನುಸಾರ ಸೂಕ್ತ ಶಿಸ್ತುಕ್ರಮ ಜರುಗಿಸಿ ಹಣದುರುಪಯೋಗದ ಮೊತ್ತದೊಂದಿಗೆ ನಿಗದಿತ ಬಡ್ಡಿಯನ್ನು ಸಹ ವಸೂಲಿ ಮಾಡಿ ಗ್ರಾಮಪಂಚಾಯತಿ ನಿಧಿಗೆ ಜಮಾ ಮಾಡಲು ಲೆಕ್ಕಪರಿಶೋಧನೆಯಲ್ಲಿ ಸೂಚಿಸಲಾಗಿದೆ.

3.1(ಎ) ಶಾಸನಬದ್ಧ ಕಡಿತಗಳನ್ನು ಸರ್ಕಾರಕ್ಕೆ ಜಮೆ ಮಾಡದೇ ಇರುವ ಪ್ರಕರಣಗಳು.

ಲೆಕ್ಕಪರಿಶೋಧನೆ ಕೈಗೊಂಡ 05 ಜಿಲ್ಲೆಗಳ 549 ಗ್ರಾಮ ಪಂಚಾಯಿತಿಗಳಲ್ಲಿ ವಸೂಲಿಸಲಾದ ರಾಜಸ್ವ ಸ್ವೀಕೃತಿಯ ಮೊತ್ತವನ್ನು ಪಂಚಾಯತಿ ನಿಧಿಗೆ ಕಡಿಮೆ ಜಮಾ ಮಾಡಿರುವುದು/ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವುದು ಕಂಡು ಬಂದಿದ್ದು, ರೂ.386.38ಲಕ್ಷಗಳನ್ನು ಆಕ್ಷೇಪಣೆಯಲ್ಲಿಟ್ಟಿದ್ದು, ರೂ.16.03ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2 ರ 3.1ಎ ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಒಟ್ಟು ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
1	2	3	4	5	6
1	ಕೊಪ್ಪಳ	124	124	33.87	6.11
2	ರಾಯಚೂರು	74	74	251.70	0.06
3	ತುಮಕೂರು	287	287	79.21	8.94
4	ಉತ್ತರಕನ್ನಡ	11	11	2.38	0.92
5	ವಿಜಯಪುರ	53	53	19.22	0.00
ಒಟ್ಟು ಮೊತ್ತ		**549**	**549**	**386.38**	**16.03**
ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)				**402.41**	

3.2 ಗ್ರಾಮ ಪಂಚಾಯತಿಗಳು ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ ಮಾರಾಟ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ರಾಜಧನ, ಆದಾಯ ತೆರಿಗೆ, ಕಾರ್ಮಿಕ ಕಲ್ಯಾಣ ನಿಧಿ ಹಾಗೂ ಗುತ್ತಿಗೆದಾರರ ಕ್ಷೇಮಾಭಿವೃದ್ಧಿ ನಿಧಿಗಳಲ್ಲಿ ಕಡಿಮೆ ಕಟಾಯಿಸಲಾದ ಹಾಗೂ ಕಟಾಯಿಸದೇ ಇರುವ ಬಗ್ಗೆ.

ಗ್ರಾಮ ಪಂಚಾಯತಿಗಳು ನಿರ್ವಹಿಸಿರುವ ಕಾಮಗಾರಿಗಳ ಬಿಲ್ಲುಗಳಲ್ಲಿ ಮಾರಾಟ ತೆರಿಗೆ (ಮಾರಾಟ ತೆರಿಗೆ ಅಧಿನಿಯಮ-2003), ರಾಜಧನ (ಸರ್ಕಾರದ ಗಣಿ ಮತ್ತು ಭೂಗರ್ಭ ಇಲಾಖೆಯು ಕಾಲ ಕಾಲಕ್ಕೆ ನಿಗದಿ ಪಡಿಸಿರುವ ದರಗಳನ್ವಯ), ಆದಾಯ ತೆರಿಗೆ (ಆದಾಯ ತೆರಿಗೆ ಅಧಿನಿಯಮ-1961ರ ಕಲಂ 194ಸಿ), ಕಾರ್ಮಿಕ ಕಲ್ಯಾಣ ನಿಧಿ ಹಾಗೂ ಗುತ್ತಿಗೆದಾರರ ಕ್ಷೇಮಾಭಿವೃದ್ಧಿ ನಿಧಿಗಳನ್ನು (ಸರ್ಕಾರದ ಕಾರ್ಮಿಕ ಇಲಾಖೆಯ ಆದೇಶ ಸಂ:ಎಲ್‌ಡಿ 300 ಎಲ್‌ಇಟಿ 2006, ದಿನಾಂಕ:18.01.2007)ರನ್ವಯ ಕಟಾಯಿಸಿ ಸರ್ಕಾರದ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಬೇಕಾಗಿರುತ್ತದೆ. 2018-19ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳಲ್ಲಿ ವಿವರಿಸಿರುವಂತೆ ಹಲವಾರು ಗ್ರಾಮ ಪಂಚಾಯತಿಗಳು ತಾವು ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ ಮಾರಾಟ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ರಾಜಧನ, ಆದಾಯ ತೆರಿಗೆ, ಕಾರ್ಮಿಕ ಕಲ್ಯಾಣ ನಿಧಿ ಹಾಗೂ ಗುತ್ತಿಗೆದಾರರ ಕ್ಷೇಮ ನಿಧಿಯನ್ನು ಕಡಿಮೆ ಕಟಾಯಿಸಿರುವುದು ಹಾಗೂ ಕಟಾಯಿಸದೇ ಇರುವುದು ಕಂಡುಬಂದಿರುತ್ತದೆ. ವಿವರಗಳು ಈ ಕೆಳಗಿನಂತಿರುತ್ತವೆ.

ರೂ.ಲಕ್ಷಗಳಲ್ಲಿ

ಕ್ರ ಸ	ಮಾರಾಟ ತೆರಿಗೆ	ಸರಕು ಮತ್ತು ಸೇವಾ ತೆರಿಗೆ	ರಾಜಧನ	ಆದಾಯ ತೆರಿಗೆ	ಕಾರ್ಮಿಕ ಕಲ್ಯಾಣ ನಿಧಿ	ಗುತ್ತಿಗದಾರರ ಕ್ಷೇಮಾಭಿವೃದ್ಧಿ ನಿಧಿ	ಒಟ್ಟು
ಕಾಮಗಾರಿ ಬಿಲ್ಲುಗಳಲ್ಲಿ ವಿವಿಧ ತೆರಿಗೆಗಳನ್ನು ಕಡಿಮೆ ಕಟಾವಣೆ ಮಾಡಿರುವುದು							
1	58.94	10.78	326.53	18.61	6.89	18.80	440.54
ಕಾಮಗಾರಿ ಬಿಲ್ಲುಗಳಲ್ಲಿ ವಿವಿಧ ತೆರಿಗೆಗಳನ್ನು ಕಟಾವಣೆ ಮಾಡದಿರುವುದು							
2	120.01	8.70	499.22	74.21	71.82	124.17	898.13

ಜಿಲ್ಲಾವಾರು ವಿವರಗಳನ್ನು ಅನುಬಂಧ-10 ರಲ್ಲಿ ಹಾಗೂ ಗ್ರಾಮ ಪಂಚಾಯಿತಿವಾರು ವಿವರಗಳನ್ನು ಅನುಬಂಧ-10ಎ ರಲ್ಲಿ ನೀಡಲಾಗಿದೆ.

ಈ ಮೇಲಿನ ಲೋಪಗಳಿಗೆ ಸಂಬಂಧಿಸಿದ ಗ್ರಾಮ ಪಂಚಾಯತಿಗಳ ಕಾರ್ಯದರ್ಶಿಗಳು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು ಜವಾಬ್ದಾರರನ್ನಾಗಿಸಿ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸುವುದರೊಂದಿಗೆ ಕಡಿಮೆ ಕಟಾವಣೆ/ ಕಟಾಯಿಸದ ಮೊಬಲಗನ್ನು ಸಂಬಂಧಿಸಿದ ಗುತ್ತಿಗೆದಾರರಿಂದ ವಸೂಲಿಸಿ ಸರ್ಕಾರದ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಲು ಲೆಕ್ಕ ಪರಿಶೋಧನೆಯಲ್ಲಿ ಸೂಚಿಸಲಾಗಿದೆ.

3.2(ಎ) ವಿವಿಧ ಯೋಜನೆಯ ಬಿಲ್ಲುಗಳನ್ನು ಪಾವತಿಸುವಾಗ ಉಪಕರ/ತೆರಿಗೆಗಳನ್ನು ಕಟಾಯಿಸದೆ, ಕಡಿಮೆ ಕಟಾಯಿಸಿ ಪಾವತಿಸಿರುವ ಪ್ರಕರಣಗಳು.

ವಿವಿಧ ಯೋಜನೆಯ ಬಿಲ್ಲುಗಳನ್ನು ಪಾವತಿಸುವಾಗ 27 ಜಿಲ್ಲೆಗಳ 2417 ಗ್ರಾಮ ಪಂಚಾಯಿತಿಗಳಲ್ಲಿ ಉಪಕರ/ತೆರಿಗೆಗಳನ್ನು ಕಟಾಯಿಸದೆ/ ಕಡಿಮೆ ಕಟಾಯಿಸಿ ಪಾವತಿಸಿರುವ ಪ್ರಕರಣಗಳು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿದ್ದು, ಇದರಲ್ಲಿ ರೂ.880.73ಲಕ್ಷಗಳನ್ನು ಆಕ್ಷೇಪಣೆ ಮತ್ತು ರೂ.863.33ಲಕ್ಷಗಳನ್ನು ವಸೂಲಾತಿಗೆ

ಸೂಚಿಸಲಾಗಿದೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 3.2ಎ ರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	131	131	250.77	7.14
2	ಬಾಗಲಕೋಟೆ	69	69	21.79	10.96
3	ಬೆಳಗಾವಿ	215	215	0.00	165.83
4	ಬಳ್ಳಾರಿ	22	22	1.66	9.43
5	ಬೀದರ್	1	1	0.00	0.11
6	ಚಾಮರಾಜನಗರ	88	88	8.74	22.20
7	ಚಿಕ್ಕಮಗಳೂರು	70	70	0.56	14.29
8	ಚಿಕ್ಕಬಳ್ಳಾಪುರ	44	44	1.35	4.65
9	ಚಿತ್ರದುರ್ಗ	150	150	15.71	126.76
10	ದಕ್ಷಿಣ ಕನ್ನಡ	10	10	0.00	1.29
11	ದಾವಣಗೆರೆ	116	116	24.47	29.25
12	ಧಾರವಾಡ	90	90	16.33	1.21
13	ಹಾವೇರಿ	206	206	6.81	130.68
14	ಹಾಸನ	164	164	190.96	1.52
15	ಕಲಬುರಗಿ	78	78	0.00	20.40
16	ಕೋಲಾರ	194	194	0.06	161.10
17	ಕೊಪ್ಪಳ	12	12	0.00	1.01
18	ಕೊಡಗು	52	52	0.00	2.07
19	ಮಂಡ್ಯ	178	178	42.77	47.63
20	ಮೈಸೂರು	183	183	264.05	52.88
21	ರಾಮನಗರ	7	7	0.23	0.83
22	ಶಿವಮೊಗ್ಗ	165	165	0.00	25.69
23	ತುಮಕೂರು	61	61	3.99	13.24
24	ಉಡುಪಿ	30	30	0.27	7.71
25	ಉತ್ತರ ಕನ್ನಡ	6	6	0.48	0.65
26	ವಿಜಯಪುರ	52	52	19.22	0.00
27	ಯಾದಗಿರಿ	23	23	10.52	4.81
	ಒಟ್ಟು ಮೊತ್ತ	**2417**	**2417**	**880.73**	**863.33**
	ಒಟ್ಟು ಮೊತ್ತ ಆಕ್ಷೇಪಣೆ+ವಸೂಲಾತಿ			**1744.06**	

3.3 ಗ್ರಾಮ ಪಂಚಾಯತಿಗಳು ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ, ಮಾರಾಟ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ರಾಜಧನ, ಆದಾಯ ತೆರಿಗೆ, ಕಾರ್ಮಿಕ ಕಲ್ಯಾಣ ನಿಧಿ ಹಾಗೂ ಗುತ್ತಿಗೆದಾರರ ಕ್ಷೇಮಾಭಿವೃದ್ಧಿ ನಿಧಿಗಳನ್ನು ಸರ್ಕಾರ/ಮಂಡಳಿಗೆ ಜಮಾ ಮಾಡದೇ, ಗ್ರಾಮ ಪಂಚಾಯತಿಯ ನಿಧಿಯಲ್ಲಿಯೇ ಉಳಿಸಿಕೊಂಡಿರುವುದು.

ಗ್ರಾಮ ಪಂಚಾಯತಿಗಳು ನಿರ್ವಹಿಸಿರುವ ಕಾಮಗಾರಿಗಳ ಮೂಲ ಬಿಲ್ಲುಗಳಲ್ಲಿ ಮಾರಾಟ ತೆರಿಗೆ (ಮಾರಾಟ ತೆರಿಗೆ ಅಧಿನಿಯಮ-2003), ರಾಜಧನ (ಸರ್ಕಾರದ ಗಣಿ ಮತ್ತು ಭೂಗರ್ಭ ಇಲಾಖೆಯು ಕಾಲ ಕಾಲಕ್ಕೆ ನಿಗದಿಪಡಿಸಿರುವ ದರಗಳನ್ವಯ), ಆದಾಯ ತೆರಿಗೆ (ಆದಾಯ ತೆರಿಗೆ ಅಧಿನಿಯಮ-1961ರ ಕಲಂ 194ಸಿ) ಹಾಗೂ ಕಾರ್ಮಿಕ ಕಲ್ಯಾಣ ಉಪಕರ (ಸರ್ಕಾರದ ಕಾರ್ಮಿಕ ಇಲಾಖೆಯ ಆದೇಶ ಸಂ:ಎಲ್‌ಡಿ 300 ಎಲ್‌ಇಟಿ 2006, ದಿನಾಂಕ:18.01.2007)ಗಳನ್ನು ಕಟಾಯಿಸಿ ಸರ್ಕಾರದ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಬೇಕಾಗಿರುತ್ತದೆ. ಆದರೆ ಗ್ರಾಮ ಪಂಚಾಯತಿಗಳಲ್ಲಿ ಈಗಾಗಲೇ ಕಟಾಯಿಸಿರುವ ಒಟ್ಟು ಮೊತ್ತ ರೂ.2748.28ಲಕ್ಷಗಳನ್ನು ಸರ್ಕಾರ/ ಮಂಡಳಿಗೆ ಜಮಾ ಮಾಡದೇ ಗ್ರಾಮಪಂಚಾಯತಿಯ ನಿಧಿಯಲ್ಲಿಯೇ ಉಳಿಸಿಕೊಂಡು ಕೇಂದ್ರ/ರಾಜ್ಯದ ಸಂಚಿತ ನಿಧಿಯಿಂದ ಹೊರಗಿಟ್ಟಿರುವುದು ಕಂಡುಬಂದಿದ್ದು ಇದು ನಿಯಮ ಬಾಹಿರವಾಗಿರುತ್ತದೆ. ವಿವರಗಳು ಈ ಕೆಳಗಿನಂತಿರುತ್ತವೆ.

(ರೂ. ಲಕ್ಷಗಳಲ್ಲಿ)

ಕ್ರ ಸಂ	ಮಾರಾಟ ತೆರಿಗೆ	ಸರಕು ಮತ್ತು ಸೇವಾ ತೆರಿಗೆ	ರಾಜಧನ	ಆದಾಯ ತೆರಿಗೆ	ಕಾರ್ಮಿಕ ಕಲ್ಯಾಣ ನಿಧಿ	ಗುತ್ತಿಗದಾರರ ಕ್ಷೇಮಾಭಿವೃದ್ಧಿ ನಿಧಿ	ಒಟ್ಟು
1	876.84	24.80	673.01	840.23	290.82	42.59	2748.28

ಜಿಲ್ಲಾವಾರು ವಿವರಗಳನ್ನು ಅನುಬಂಧ-10 ಹಾಗೂ ಗ್ರಾಮ ಪಂಚಾಯಿತಿವಾರು ವಿವರಗಳನ್ನು ಅನುಬಂಧ-10ಎ ನಲ್ಲಿ ನೀಡಲಾಗಿದೆ.

3.4 ಗ್ರಾಮ ಪಂಚಾಯತಿಗಳು ನಿರ್ವಹಿಸಿರುವ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾಗಿರುವ ಮಾರಾಟ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ರಾಜಧನ, ಆದಾಯ ತೆರಿಗೆ, ಕಾರ್ಮಿಕ ಕಲ್ಯಾಣ ನಿಧಿ ಹಾಗೂ ಗುತ್ತಿಗೆದಾರರ ಕ್ಷೇಮಾಭಿವೃದ್ಧಿ ನಿಧಿಗಳನ್ನು ಸರ್ಕಾರ / ಮಂಡಳಿಗೆ ಜಮಾ ಮಾಡುವ ಸಲುವಾಗಿ ಗ್ರಾಮ ಪಂಚಾಯತಿ ನಿಧಿಯಿಂದ ಡ್ರಾ ಮಾಡಿ ಸರ್ಕಾರಕ್ಕೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವ ಬಗ್ಗೆ.

ಲೆಕ್ಕಪರಿಶೋಧನೆ ಕೈಗೊಂಡು ವರದಿಗಳನ್ನು ಬಿಡುಗಡೆಗೊಳಿಸಿರುವ ಗ್ರಾಮಪಂಚಾಯತಿಗಳ ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಲಾಗಿರುವ ಮಾರಾಟ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ರಾಜಧನ ಹಾಗೂ ಆದಾಯ ತೆರಿಗೆ ಮೊಬಲಗು ಒಟ್ಟು ರೂ.243.22ಲಕ್ಷಗಳನ್ನು ಸರ್ಕಾರ /ಮಂಡಳಿಗೆ ಜಮಾ ಮಾಡುವ ಸಲುವಾಗಿ ಗ್ರಾಮಪಂಚಾಯತಿಗಳ ನಿಧಿಯಿಂದ ಡ್ರಾ ಮಾಡಿದ್ದರೂ ಸರ್ಕಾರದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡದೇ ಹಣ ದುರುಪಯೋಗಪಡಿಸಿಕೊಂಡಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ. ವಿವರಗಳು ಈ ಕೆಳಗಿನಂತಿರುತ್ತವೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ	ಮಾರಾಟ ತೆರಿಗೆ	ಸರಕು ಮತ್ತು ಸೇವಾ ತೆರಿಗೆ	ರಾಜಧನ	ಆದಾಯ ತೆರಿಗೆ	ಕಾರ್ಮಿಕ ಕಲ್ಯಾಣ ನಿಧಿ	ಗುತ್ತಿಗದಾರರ ಕ್ಷೇಮಾಭಿವೃದ್ಧಿ ನಿಧಿ	ಒಟ್ಟು
1	16.03	0.02	226.80	0.20	0.17	0.00	243.22

ಜಿಲ್ಲಾವಾರು ವಿವರಗಳನ್ನು ಅನುಬಂಧ-10ರಲ್ಲಿ ಹಾಗೂ ಗ್ರಾಮ ಪಂಚಾಯಿತಿವಾರು ವಿವರಗಳನ್ನು ಅನುಬಂಧ-10ಎ ನಲ್ಲಿ ನೀಡಲಾಗಿದೆ.

ಇಂತಹ ಲೋಪದೋಷಗಳಿಗೆ ಕಾರಣರಾದ ಸಂಬಂಧಿಸಿದ ಕಾರ್ಯದರ್ಶಿಗಳ/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ನಿಯಮಾನುಸಾರ ಸೂಕ್ತ ಶಿಸ್ತು ಕ್ರಮ ಜರುಗಿಸಿ ಹಣದುರುಪಯೋಗದ ಮೊತ್ತದೊಂದಿಗೆ ನಿಗದಿತ ಬಡ್ಡಿಯನ್ನು ಸಹ ವಸೂಲಿ ಮಾಡಿ ಸರ್ಕಾರ/ಇಲಾಖೆ/ಮಂಡಳಿಗೆ ಜಮಾ ಮಾಡಲು ಲೆಕ್ಕಪರಿಶೋಧನೆಯಲ್ಲಿ ಸೂಚಿಸಲಾಗಿದೆ.

3.4(ಎ) ಕಾಮಗಾರಿ ಬಿಲ್ಲುಗಳಲ್ಲಿ ಕಟಾಯಿಸಿದ ತೆರಿಗೆಗಳನ್ನು ಪಾವತಿಸಲು ಡ್ರಾ ಮಾಡಿ ಪೂರ್ತಿಯಾಗಿ ಸರ್ಕಾರಕ್ಕೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವುದು.

ಲೆಕ್ಕಪರಿಶೋಧನೆ ಕೈಗೊಂಡ 11 ಜಿಲ್ಲೆಗಳ 550 ಗ್ರಾಮ ಪಂಚಾಯಿತಿಗಳಲ್ಲಿ ವಸೂಲಿಸಲಾದ ರಾಜಸ್ವ ಸ್ವೀಕೃತಿಯ ಮೊತ್ತವನ್ನು ಪಂಚಾಯತಿ ನಿಧಿಗೆ ಕಡಿಮೆ ಜಮಾ ಮಾಡಿರುವುದು/ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವುದು ಕಂಡು ಬಂದಿದ್ದು, ರೂ.686.48ಲಕ್ಷಗಳನ್ನು ಆಕ್ಷೇಪಣೆಯಲ್ಲಿಟ್ಟಿದ್ದು, ರೂ.30.86ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2ರ 3.4ಎರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	142	142	285.63	13.28
2	ಬೆಳಗಾವಿ	30	30	10.49	0.00
3	ಚಾಮರಾಜನಗರ	31	31	3.20	1.55
4	ಚಿಕ್ಕಮಗಳೂರು	82	82	7.33	5.17
5	ಚಿಕ್ಕಬಳ್ಳಾಪುರ	133	133	100.93	0.00
6	ಚಿತ್ರದುರ್ಗ	28	28	7.12	5.15
7	ದಾವಣಗೆರೆ	44	44	6.84	0.84
8	ಮಂಡ್ಯ	20	20	0.04	4.44
9	ಮೈಸೂರು	33	33	264.05	0.27
10	ತುಮಕೂರು	1	1	0.12	0.00
11	ಉತ್ತರ ಕನ್ನಡ	6	6	0.73	0.16
ಒಟ್ಟು ಮೊತ್ತ		**550**	**550**	**686.48**	**30.86**
ಒಟ್ಟು ಮೊತ್ತ ಆಕ್ಷೇಪಣೆ+ವಸೂಲಾತಿ				**717.34**	

3.5 ವಸೂಲಿ ಮಾಡಿದ ಉಪಕರಗಳನ್ನು ಸರ್ಕಾರದ ವಿವಿಧ ಇಲಾಖೆಗಳ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡದೇ ಗ್ರಾಮಪಂಚಾಯತಿಯ ನಿಧಿಯಲ್ಲಿಯೇ ಉಳಿಸಿಕೊಂಡಿರುವುದು.

ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ 2011, ಅಧ್ಯಾಯ-5 (ತೆರಿಗೆ ಸಂಗ್ರಹ ಮತ್ತು ಇರಸಾಲು) ನಿಯಮ 44ರ ಪ್ರಕಾರ ಸರ್ಕಾರದ ಪರವಾಗಿ ವಸೂಲಿ ಮಾಡಲ್ಪಟ್ಟ ಉಪಕರಗಳನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ವಿಳಂಬವಿಲ್ಲದೇ ಜಮಾ ಮಾಡಬೇಕಾಗಿರುತ್ತದೆ. ರಾಜ್ಯದ ಗ್ರಾಮ ಪಂಚಾಯತಿಗಳು ಸರ್ಕಾರದ

ಪರವಾಗಿ ವಸೂಲಿ ಮಾಡಿರುವ ಆರೋಗ್ಯ ಕರ, ಶಿಕ್ಷಣ ಕರ, ಗ್ರಂಥಾಲಯ ಕರ ಹಾಗೂ ಭಿಕ್ಷುಕರ ಕರಗಳನ್ನು ಸರ್ಕಾರದ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡದೇ ಹಿಂದಿನ ಸಾಲಿನಿಂದಲೂ ಗ್ರಾಮ ಪಂಚಾಯತಿಯ ನಿಧಿಯಲ್ಲಿಯೇ ಉಳಿಸಿಕೊಂಡಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿದೆ. ಈ ರೀತಿ ಜಮಾ ಮಾಡದೇ ಗ್ರಾಮಪಂಚಾಯತಿಯ ನಿಧಿಯಲ್ಲಿಯೇ ಉಳಿಸಿ ಕೊಂಡಿರುವುದು ಸಂಬಂಧಿಸಿದ ಕಾರ್ಯದರ್ಶಿ/ಪಂಚಾಯತಿ ಅಭಿವೃದ್ಧಿ ಅಧಿಕಾರಿಯ ಕರ್ತವ್ಯಲೋಪವಾಗಿರುತ್ತದೆ.

2018-19ನೇ ಸಾಲಿನ ಪ್ರಾರಂಭಿಕ ಶಿಲ್ಕು ರೂ.48845.12ಲಕ್ಷಗಳಿದ್ದು, ವರದಿ ಸಾಲಿನಲ್ಲಿ ರೂ.10670.53ಲಕ್ಷ ವಸೂಲಿಯಾಗಿ ಒಟ್ಟು ರೂ.59515.65ಲಕ್ಷಗಳಾಗಿದ್ದು, ಸರ್ಕಾರದ ಲೆಕ್ಕಶೀರ್ಷಿಕೆಗೆ ಜಮಾ ಮಾಡಲಾದ ಮೊತ್ತ ರೂ.4014.90ಲಕ್ಷಗಳಾಗಿರುತ್ತವೆ. ವಿವಿಧ ಇಲಾಖೆಗಳ ಲೆಕ್ಕಶೀರ್ಷಿಕೆಗಳಿಗೆ ಜಮಾ ಮಾಡದೆ ರೂ.55500.74ಲಕ್ಷಗಳನ್ನು ಗ್ರಾಮಪಂಚಾಯಿತಿ ನಿಧಿಗೆ ಜಮಾ ಮಾಡದೇ ಉಳಿಸಿಕೊಳ್ಳಲಾಗಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ-11 ಹಾಗೂ ಗ್ರಾಮ ಪಂಚಾಯಿತಿವಾರು ವಿವರಗಳನ್ನು 11(ಎ) ನೀಡಲಾಗಿದೆ.

3.5(i) ಮನೆ ಮತ್ತು ಕಂದಾಯಗಳ ಮೇಲೆ ವಸೂಲಿಸಿರುವ ಉಪಕರಗಳನ್ನು ಸರ್ಕಾರಕ್ಕೆ ಜಮಾ ಮಾಡದೆ ಇರುವುದು.

ಲೆಕ್ಕಪರಿಶೋಧನೆ ಕೈಗೊಂಡ 28 ಜಿಲ್ಲೆಗಳ 4347 ಗ್ರಾಮ ಪಂಚಾಯಿತಿಗಳಲ್ಲಿ ಮನೆ ಮತ್ತು ಕಂದಾಯಗಳ ಮೇಲೆ ವಸೂಲಿಸಿರುವ ಉಪಕರಗಳನ್ನು ಸರ್ಕಾರಕ್ಕೆ ಜಮಾ ಮಾಡದೆ ಇರುವ ಪ್ರಕರಣಗಳು ಕಂಡು ಬಂದಿದ್ದು ರೂ.9182.28ಲಕ್ಷಗಳನ್ನು ಆಕ್ಷೇಪಣೆಯಲ್ಲಿಟ್ಟಿದ್ದು, ರೂ.415.48ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 3.5(I)ಎರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	175	175	3139.74	1.64
2	ಬಾಗಲಕೋಟೆ	1	1	2.08	0.00
3	ಬೆಳಗಾವಿ	363	363	203.63	0.00
4	ಬಳ್ಳಾರಿ	226	226	154.38	0.00
5	ಬೀದರ	127	127	193.23	0.00
6	ಚಾಮರಾಜನಗರ	112	112	60.29	1.42
7	ಚಿಕ್ಕಮಗಳೂರು	121	121	69.77	0.00
8	ಚಿಕ್ಕಬಳ್ಳಾಪುರ	33	33	22.15	0.00
9	ಚಿತ್ರದುರ್ಗ	168	168	221.10	0.58
10	ದಕ್ಷಿಣ ಕನ್ನಡ	65	65	180.70	0.00
11	ದಾವಣಗೆರೆ	178	178	113.93	0.32
12	ಧಾರವಾಡ	131	131	49.29	0.00
13	ಗದಗ	113	113	43.90	0.00
14	ಹಾಸನ	367	367	2261.35	0.00
15	ಹಾವೇರಿ	214	214	109.46	0.27

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
16	ಕಲಬುರಗಿ	154	154	204.71	0.00
17	ಕೋಲಾರ	155	155	222.54	0.00
18	ಕೊಪ್ಪಳ	160	160	88.84	4.17
19	ಮಂಡ್ಯ	226	226	266.57	0.00
20	ಮೈಸೂರು	243	243	435.84	0.02
21	ರಾಯಚೂರು	83	83	188.98	0.00
22	ರಾಮನಗರ	127	127	417.72	0.00
23	ಶಿವಮೊಗ್ಗ	165	165	45.12	0.00
24	ತುಮಕೂರು	311	311	371.95	28.28
25	ಉಡುಪಿ	84	84	0.00	376.02
26	ಉತ್ತರ ಕನ್ನಡ	32	32	7.54	0.00
27	ವಿಜಯಪುರ	96	96	60.44	0.00
28	ಯಾದಗಿರಿ	117	117	47.01	2.76
ಒಟ್ಟು ಮೊತ್ತ		**4347**	**4347**	**9182.28**	**415.48**
ಒಟ್ಟು ಮೊತ್ತ ಆಕ್ಷೇಪಣೆ+ವಸೂಲಾತಿ				**9597.76**	

3.5(ii) ಸರ್ಕಾರದ ಪರವಾಗಿ ವಸೂಲಿ ಮಾಡಿದ ಉಪಕರಗಳನ್ನು ಗ್ರಾಮ ಪಂಚಾಯತಿ ನಿಧಿಯಿಂದ ಡ್ರಾ ಮಾಡಿ ಸರ್ಕಾರಕ್ಕೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವುದು.

ಲೆಕ್ಕಪರಿಶೋಧನೆ ಕೈಗೊಂಡ 05 ಜಿಲ್ಲೆಗಳ 140 ಗ್ರಾಮ ಪಂಚಾಯಿತಿಗಳಲ್ಲಿ ಸರ್ಕಾರದ ಪರವಾಗಿ ವಸೂಲಿ ಮಾಡಿದ ಉಪಕರಗಳನ್ನು ಗ್ರಾಮಪಂಚಾಯತಿ ನಿಧಿಯಿಂದ ಡ್ರಾ ಮಾಡಿ ಸರ್ಕಾರಕ್ಕೆ ಜಮಾ ಮಾಡದೆ ದುರುಪಯೋಗಪಡಿಸಿಕೊಂಡಿರುವುದು ಕಂಡು ಬಂದಿದ್ದು ರೂ.434.58ಲಕ್ಷಗಳನ್ನು ಆಕ್ಷೇಪಣೆಯಲ್ಲಿಟ್ಟಿದ್ದು, ರೂ.27.15ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2 ರ 3.5(ii)ರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಚಾಮರಾಜನಗರ	1	1	0.00	0.01
2	ಚಿಕ್ಕಮಗಳೂರು	1	1	0.00	0.04
3	ಕಲಬುರಗಿ	103	103	170.53	26.41
4	ಮೈಸೂರು	32	32	264.05	0.00
5	ಉತ್ತರ ಕನ್ನಡ	3	3	0.00	0.70
	ಒಟ್ಟು	**140**	**140**	**434.58**	**27.15**
ಒಟ್ಟು ಮೊತ್ತ ಆಕ್ಷೇಪಣೆ+ವಸೂಲಾತಿ				**461.73**	

3.5(iii) ಉಪಕರಗಳನ್ನು ಕಟಾಯಿಸದಿರುವ/ವಸೂಲಿಸದಿರುವ ಪ್ರಕರಣಗಳು

ಲೆಕ್ಕಪರಿಶೋಧನೆ ಕೈಗೊಂಡ 04 ಜಿಲ್ಲೆಗಳ 06 ಗ್ರಾಮ ಪಂಚಾಯಿತಿಗಳಲ್ಲಿ ಉಪಕರಗಳನ್ನು ಕಟಾಯಿಸದಿರುವ/ ವಸೂಲಿಸದಿರುವ ಪ್ರಕರಣಗಳು ಕಂಡು ಬಂದಿದ್ದು ರೂ.2.72ಲಕ್ಷಗಳನ್ನು ಅಕ್ಷೇಪಣೆಯಲ್ಲಿಟ್ಟಿದ್ದು, ರೂ.1.40ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಗ್ರಾಮಪಂಚಾಯತಿ ವಿವರಗಳು ಈ ಕೆಳಕಂಡಂತಿರುತ್ತದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಚಿಕ್ಕಮಗಳೂರು	ಹರಂದೂರು	32	0.06	0.00
		ಬಾಳೂರು	31	0.01	0.00
2	ದಾವಣಗೆರೆ	ಬೆಳ್ಳೂಡಿ	35	1.66	0.00
		ಗುತ್ತಿದುರ್ಗ	44	0.60	0.00
3	ಹಾವೇರಿ	ಚಿಕ್ಕೇರೂರ	36	0.00	1.40
4	ಮಂಡ್ಯ	ಸೂನಗನಹಳ್ಳಿ	31	0.39	0.00
ಒಟ್ಟು ಮೊತ್ತ		**6**	**6**	**2.72**	**1.40**
ಒಟ್ಟು ಮೊತ್ತ ಆಕ್ಷೇಪಣೆ+ವಸೂಲಾತಿ				**4.12**	

3.6 ಗ್ರಾಮ ಪಂಚಾಯತಿಗಳಿಂದ ಭರಿಸಲಾದ ವೆಚ್ಚಗಳಿಗೆ ಸಂಬಂಧಿಸಿದಂತೆ ಓಚರುಗಳನ್ನು ಹಾಜರುಪಡಿಸದೇ ಇರುವ ಪ್ರಕರಣಗಳು.

ಲೆಕ್ಕಪರಿಶೋಧನೆ ಕೈಗೊಂಡ 26 ಜಿಲ್ಲೆಗಳ 1165 ಗ್ರಾಮ ಪಂಚಾಯಿತಿಗಳಿಂದ ಭರಿಸಲಾದ ವೆಚ್ಚಗಳಿಗೆ ಓಚರುಗಳನ್ನು ಹಾಜರುಪಡಿಸದಿರುವ ಪ್ರಕರಣಗಳು ಕಂಡು ಬಂದಿದ್ದು, ರೂ.17525.76ಲಕ್ಷಗಳನ್ನು ಆಕ್ಷೇಪಣೆಗೆ ಹಾಗೂ ರೂ.828.79ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 3.6ಎ ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	15	15	131.76	0.00
2	ಬಾಗಲಕೋಟೆ	46	46	500.98	0.00
3	ಬೆಳಗಾವಿ	77	77	231.14	0.00
4	ಬಳ್ಳಾರಿ	188	188	2370.52	18.80
5	ಬೀದರ್	55	55	616.07	0.00
6	ಚಾಮರಾಜನಗರ	46	46	111.23	0.00
7	ಚಿಕ್ಕಮಗಳೂರು	4	4	4.65	0.33

ಕ್ರಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
8	ಚಿಕ್ಕಬಳ್ಳಾಪುರ	36	36	104.07	14.21
9	ಚಿತ್ರದುರ್ಗ	25	25	1532.42	0.00
10	ದಾವಣಗೆರೆ	26	26	12.38	223.38
11	ಧಾರವಾಡ	5	5	32.64	0.00
12	ಹಾಸನ	103	103	253.06	185.12
13	ಹಾವೇರಿ	25	25	54.17	0.00
14	ಕಲ್ಬುರ್ಗಿ	34	34	1385.45	31.02
15	ಕೋಲಾರ	7	7	47.90	0.00
16	ಕೊಪ್ಪಳ	45	45	268.85	0.10
17	ಕೊಡಗು	7	7	39.19	0.00
18	ಮಂಡ್ಯ	41	41	97.21	1.53
19	ಮೈಸೂರು	38	38	86.95	58.12
20	ರಾಯಚೂರು	53	53	8652.65	0.00
21	ಶಿವಮೊಗ್ಗ	34	34	37.08	0.00
22	ತುಮಕೂರು	31	31	80.26	5.41
23	ಉಡುಪಿ	37	37	56.30	11.07
24	ಉತ್ತರಕನ್ನಡ	63	63	75.17	61.14
25	ವಿಜಯಪುರ	115	115	708.45	218.55
26	ಯಾದಗಿರಿ	9	9	35.19	0.00
ಒಟ್ಟು ಮೊತ್ತ		**1165**	**1165**	**17525.76**	**828.79**
ಒಟ್ಟು ಮೊತ್ತ ಆಕ್ಷೇಪಣೆ+ವಸೂಲಾತಿ				**18354.54**	

3.7 ಹಣದುರುಪಯೋಗ ಪ್ರಕರಣಗಳೆಂದು ಶಂಕಿಸಿರುವ ಕಂಡಿಕೆಗಳು.

ಲೆಕ್ಕಪರಿಶೋಧನೆ ಕೈಗೊಂಡ 24 ಜಿಲ್ಲೆಗಳ 774 ಗ್ರಾಮ ಪಂಚಾಯಿತಿಗಳಿಂದ ಭರಿಸಲಾದ ವೆಚ್ಚಗಳಿಗೆ ಓಚರುಗಳನ್ನು ಹಾಜರುಪಡಿಸದಿರುವ ಪ್ರಕರಣಗಳು ಕಂಡು ಬಂದಿದ್ದು, ರೂ.24.43ಲಕ್ಷಗಳನ್ನು ಆಕ್ಷೇಪಣೆಗೆ ಹಾಗೂ ರೂ.310.84ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಜಿಲ್ಲಾವಾರು ವಿವರಗಳು ಈ ಕೆಳಕಂಡಂತಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 3.7ಎರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	34	34	3.40	40.10
2	ಬೆಳಗಾವಿ	8	8	0.00	1.79
3	ಬಳ್ಳಾರಿ	87	87	0.00	34.77

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
4	ಚಾಮರಾಜನಗರ	21	21	0.00	4.54
5	ಚಿಕ್ಕಮಗಳೂರು	13	13	0.06	1.26
6	ಚಿಕ್ಕಬಳ್ಳಾಪುರ	52	52	0.00	13.49
7	ಚಿತ್ರದುರ್ಗ	2	2	0.00	0.31
8	ದಾವಣಗೆರೆ	80	80	0.00	7.70
9	ಧಾರವಾಡ	81	81	1.75	26.54
10	ಗದಗ	9	9	0.00	2.42
11	ಹಾವೇರಿ	15	15	14.22	9.01
12	ಕಲ್ಬುರ್ಗಿ	40	40	1.11	11.77
13	ಕೋಲಾರ	5	5	0.00	4.54
14	ಕೊಪ್ಪಳ	43	43	0.00	15.08
15	ಕೊಡಗು	12	12	0.00	0.80
16	ಮಂಡ್ಯ	100	100	0.00	18.41
17	ಮೈಸೂರು	17	17	0.82	1.62
18	ರಾಮನಗರ	22	22	3.07	21.66
19	ಶಿವಮೊಗ್ಗ	40	40	0.00	1.72
20	ತುಮಕೂರು	30	30	0.00	28.62
21	ಉಡುಪಿ	16	16	0.00	35.79
22	ಉತ್ತರಕನ್ನಡ	5	5	0.00	3.25
23	ವಿಜಯಪುರ	30	30	0.00	10.08
24	ಯಾದಗಿರಿ	12	12	0.00	15.57
ಒಟ್ಟು ಮೊತ್ತ		**774**	**774**	**24.43**	**310.84**
ಒಟ್ಟು ಮೊತ್ತ ಆಕ್ಷೇಪಣೆ+ವಸೂಲಾತಿ				**335.27**	

3.8 ಅನುಮೋದನೆ ಪಟ್ಟಿ ದರಕ್ಕಿಂತ ಹೆಚ್ಚಿನ ದರ ಪಾವತಿಸಿರುವುದು

ಲೆಕ್ಕಪರಿಶೋಧನೆ ಕೈಗೊಂಡ 11 ಜಿಲ್ಲೆಗಳ 20 ಗ್ರಾಮ ಪಂಚಾಯಿತಿಗಳಲ್ಲಿ ಅನುಮೋದನೆ ಪಟ್ಟಿ ದರಕ್ಕಿಂತ ಹೆಚ್ಚಿನ ದರ ಪಾವತಿಸಿರುವ ಪ್ರಕರಣಗಳು ಕಂಡು ಬಂದಿದ್ದು ರೂ.34.57ಲಕ್ಷಗಳನ್ನು ಆಕ್ಷೇಪಣೆಗೆ ಹಾಗೂ ರೂ.0.28ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಗ್ರಾಮ ಪಂಚಾಯಿತಿ ವಿವರಗಳು ಈ ಕೆಳಕಂಡಂತಿರುತ್ತದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಹೆಸರು	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	ಟಿ.ಬೇಗೂರು	32(4)	6.20	0.00
2	ಚಾಮರಾಜನಗರ	ಕಣ್ಣೂರು	36	0.35	0.00
3	ಚಿಕ್ಕಮಗಳೂರು	ಬೈಗೂರು	49(ಎ)	0.00	0.03
		ಕಳಸಾಪುರ	44	0.00	0.03
4	ಚಿಕ್ಕಬಳ್ಳಾಪುರ	ನಂದಿಗಾನಹಳ್ಳಿ	40 (ಡಿ) (2)	0.25	0.00
5	ದಕ್ಷಿಣ ಕನ್ನಡ	ಬಳಂಜ	25(1)	0.00	0.08
6	ಧಾರವಾಡ	ಇಂಗಳಗಿ	34	2.46	0.00
		ಕೂಬಿಹಾಳ	33	7.10	0.00
		ಮತ್ತಿಗಟ್ಟಿ	33	1.24	0.00
		ರಾಮನಕೊಪ್ಪ	33	3.76	0.00
		ಯಲಿವಾಳ	33(11)	4.41	0.00
7	ಕೊಡಗು	ಬೆಸೂರು	38ಆ	0.48	0.00
		ಹಂಡ್ಲಿ	39ಅ	0.81	0.00
		ಹೆಬ್ಬಾಲೆ	59	0.00	0.06
		ಕೂಡ್ಲಿಪೇಟೆ	58	0.00	0.004
8	ಮಂಡ್ಯ	ಐಕನಹಳ್ಳಿ	54	2.57	0.00
		ಮಿಕ್ಕೆರೆ	55	4.91	0.00
9	ಶಿವಮೊಗ್ಗ	ಅಮಟೇಕೊಪ್ಪ	59	0.00	0.03
10	ಉತ್ತರಕನ್ನಡ	ಸಗಡಗೇರಿ	–	0.00	0.04
11	ವಿಜಯಪುರ	ನಾಗಠಾಣ	33	0.00	0.01
		20	20	34.57	0.28
ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)				34.85	

3.9 ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದ ಕಾರಣ ನಷ್ಟವಾಗಿರುವ ಮಾನವ ದಿನಗಳು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 112(1)ರ ಪ್ರಕಾರ ಗ್ರಾಮ ಪಂಚಾಯತಿಯ ಕಾರ್ಯದರ್ಶಿಗಳು ಗ್ರಾಮ ಪಂಚಾಯತಿಯ ಜಮೆ ಮತ್ತು ಪಾವತಿ ಲೆಕ್ಕಗಳು, ಆದಾಯ ಮತ್ತು ವೆಚ್ಚ ಲೆಕ್ಕಗಳು ಹಾಗೂ ಆಸ್ತಿ ಮತ್ತು ಹೊಣೆಗಾರಿಕೆ ತಃಖ್ತೆಗಳನ್ನು ಲೆಕ್ಕಪರಿಶೋಧಕರಿಗೆ ಒದಗಿಸಿ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧನೆಗೆ ಹಾಜರು ಪಡಿಸಬೇಕೆಂದು ತಿಳಿಸಿದೆ. ಆದರೆ 06 ಜಿಲ್ಲೆಯ 12 ಗ್ರಾಮಪಂಚಾಯತಿಗಳ, ಗ್ರಾಮಪಂಚಾಯತಿ ಅಭಿವೃದ್ಧಿ

ಅಧಿಕಾರಿ/ಕಾರ್ಯದರ್ಶಿಗಳು ಸಂಬಂಧಿಸಿದ ಲೆಕ್ಕಪತ್ರಗಳನ್ನು 2018-19ನೇ ಸಾಲಿನ ಲೆಕ್ಕ ಪರಿಶೋಧನೆಗೆ ಸಲ್ಲಿಸದಿರುವುದು, ಲೆಕ್ಕ ಪರಿಶೋಧನೆಗೆ ನಿಗದಿಪಡಿಸಿದ ದಿನದಂದು ಗ್ರಾಮ ಪಂಚಾಯತಿಗಳಲ್ಲಿ ಹಾಜರಿಲ್ಲದೇ ಇರುವುದು ಇತ್ಯಾದಿ ಕಾರಣಗಳಿಂದ ಲೆಕ್ಕ ಪರಿಶೋಧನೆಯಲ್ಲಿ ಪೂರ್ಣ ಪ್ರಮಾಣದ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಿರುವುದಿಲ್ಲ. ಲೆಕ್ಕಪರಿಶೋಧನೆಗೆ ಲೆಕ್ಕಪತ್ರಗಳನ್ನು ಹಾಜರುಪಡಿಸದಿದ್ದ ಸಂದರ್ಭದಲ್ಲಿ, ಕೆಲವೊಮ್ಮೆ ಆ ಗ್ರಾಮ ಪಂಚಾಯತಿಗಳಿಗೆ ಬದಲಿ ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನೆಯನ್ನು ಸಹ ಕೈಗೊಳ್ಳಲಾಗಿದೆ. ಆದರೂ ಸಹ 2018-19ನೇ ಸಾಲಿಗೆ ಲೆಕ್ಕಪರಿಶೋಧನೆಗೆ ಲೆಕ್ಕಪತ್ರಗಳನ್ನು ಹಾಜರು ಪಡಿಸದಿರುವ ಕಾರಣದಿಂದಾಗಿ 06 ಜಿಲ್ಲೆಗಳಲ್ಲಿ ಒಟ್ಟು 106 ಮಾನವ ದಿನಗಳು ನಷ್ಟವಾಗಿರುತ್ತವೆ.

ಲೆಕ್ಕಪರಿಶೋಧನೆಗೆ ದಾಖಲಾತಿಗಳನ್ನು ಒದಗಿಸದಿರುವ ವಿಷಯದ ಕುರಿತು ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 29 ಲೆಪಬಿ 2006, ದಿನಾಂಕ:18.04.2007ದಲ್ಲಿ ಕ್ರಮಜರುಗಿಸಲು ಸೂಚಿಸಲಾಗಿದೆ. ಸದರಿ ಆದೇಶದ ಕ್ರಮ ಸಂಖ್ಯೆ:(6)ರ ಪ್ರಕಾರ ಲೆಕ್ಕಪರಿಶೋಧನೆಗೆ ಲೆಕ್ಕಪತ್ರ ದಾಖಲಾತಿಗಳನ್ನು ಹಾಜರುಪಡಿಸದೇ ಇರುವುದರಿಂದ ಉಂಟಾದ ಮಾನವ ದಿನಗಳ ನಷ್ಟದ ಮೊತ್ತವನ್ನು ಸಂಬಂಧಿಸಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿ/ಕಾರ್ಯದರ್ಶಿಗಳಿಂದ ವಸೂಲಿ ಮಾಡಲು ಅವಕಾಶವಿರುತ್ತದೆ. ಈ ಅಂಶವನ್ನು ಪತ್ರಗಳ ಮೂಲಕ ಸಂಬಂಧಿಸಿದ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ರವರ ಗಮನಕ್ಕೆ ಹಾಗೂ ಸಂಬಂಧಿಸಿದ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ರವರ ಗಮನಕ್ಕೆ ತರಲಾಗಿದೆ. ಈ ಕುರಿತು ಅನುಬಂಧ-12ರಲ್ಲಿ ಜಿಲ್ಲಾವಾರು ವಿವರವನ್ನು ಮತ್ತು ಗ್ರಾಮಪಂಚಾಯಿತಿವಾರು ವಿವರಗಳನ್ನು ಅನುಬಂಧ-12ಎರಲ್ಲಿ ನೀಡಲಾಗಿದೆ.

3.10 ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ತೀರುವಳಿಯಾಗದೇ ಬಾಕಿಯಿರುವ ಪ್ರಕರಣಗಳು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ-113ರ ಪ್ರಕಾರ ಸೂಕ್ತ ಅನುಪಾಲನಾ ವರದಿಗಳನ್ನು ಸಲ್ಲಿಸಬೇಕಾಗಿರುತ್ತದೆ. ಆಯಾ ವರ್ಷಗಳಲ್ಲಿ ಸೇರ್ಪಡೆಗೊಳ್ಳುವ ಆಕ್ಷೇಪಣೆಗಳು ವರದಿಯಲ್ಲಿ ಕ್ರೋಢೀಕೃತಗೊಂಡು, ನಿಗಧಿತ ಅವಧಿಯಲ್ಲಿ ಅನುಪಾಲನಾ ವರದಿಗಳನ್ನು ಸಲ್ಲಿಸದೇ ಇರುವುದರಿಂದ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ಸಂಖ್ಯೆ ಮತ್ತು ಮೊತ್ತಗಳನ್ನು ಹೆಚ್ಚಾಗಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ಅಡ್-ಹಾಕ್ ಸಭೆಗಳನ್ನು ಕೈಗೊಳ್ಳುವ ಕುರಿತಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸಲಾದ ಆದೇಶ ಮತ್ತು ಸುತ್ತೋಲೆಗಳನ್ವಯ ಕ್ರಮ ಜರುಗಿಸಿದ್ದಲ್ಲಿ ಸಂಭನೀಯ ನಷ್ಟವನ್ನು ತಡೆಗಟ್ಟಬಹುದಾಗಿದೆ. ಈ ಕುರಿತಂತೆ ಆಡಳಿತ ಇಲಾಖೆಯವರು ಸೂಕ್ತ ಕ್ರಮ ಕೈಗೊಳ್ಳುವುದು ಅವಶ್ಯಕವಾಗಿರುವುದು. ಆಕ್ಷೇಪಣೆ, ತೀರುವಳಿ ಮತ್ತು ಬಾಕಿ ಮೊತ್ತದ ಜಿಲ್ಲಾವಾರು ವಿವರಗಳನ್ನು ಅನುಬಂಧ-13ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು ಅನುಬಂಧ-13ಎರಲ್ಲಿ ನೀಡಲಾಗಿದೆ.

ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ನಮೂದಿಸಲಾದ ಒಟ್ಟು ಆಕ್ಷೇಪಣೆ, ತೀರುವಳಿ, ವಸೂಲಾತಿಗೆ ಸೂಚಿಸಿದ ಮೊತ್ತದ ಘೋಷ್ವಾರೆಯನ್ನು ಈ ಕೆಳಗೆ ನೀಡಲಾಗಿದೆ.

(ರೂ. ಲಕ್ಷಗಳಲ್ಲಿ)

ಕ್ರ ಸಂ	ವಿವರ	ಆಕ್ಷೇಪಣೆಗಳು		ವಸೂಲಾತಿಗಳು	
		ಕಂಡಿಕೆ ಸಂಖ್ಯೆಗಳು	ಮೊಬಲಗು	ಕಂಡಿಕೆ ಸಂಖ್ಯೆಗಳು	ಮೊಬಲಗು
1.	ದಿನಾಂಕ: 01.04.2018ರ ಆರಂಭ ಶಿಲ್ಕು	405729	509457.26	198353	47236.32
2.	2018-19ರ ಲೆಕ್ಕ ತಪಾಸಣಾ ವರದಿಗಳಲ್ಲಿ ಸೇರ್ಪಡೆ	19996	53150.82	8447	5290.61
3.	ಒಟ್ಟು	425725	562608.07	206800	52526.93
4.	2018-19ರಲ್ಲಿ ಆದ ತೀರುವಳಿ	1777	1475.95	1410	258.22
5.	ದಿನಾಂಕ:31.03.2019 ರ ಅಂತಿಮ ಶಿಲ್ಕು	423948	561132.13	205390	52268.71

3.11 ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಪಾಲನಾ ವರದಿಗಳನ್ನು ಸಲ್ಲಿಸಿರುವುದಿಲ್ಲ.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 114ರಲ್ಲಿ ತಿಳಿಸಿರುವಂತೆ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಕಲಂ 61-ಎ ಅಡಿಯಲ್ಲಿ ಗ್ರಾಮ ಪಂಚಾಯತಿಗಳು ಲೆಕ್ಕಪರಿಶೋಧನಾ ಸಮಿತಿಯನ್ನು ರಚಿಸಬೇಕಿದೆ. ಈ ರೀತಿ ರಚನೆಯಾಗಿರುವ ಲೆಕ್ಕಪರಿಶೋಧನಾ ಸಮಿತಿಯು 03 ತಿಂಗಳಿಗೊಮ್ಮೆ ಸಭೆ ಸೇರಿ ವಾರ್ಷಿಕ ಲೆಕ್ಕಪರಿಶೋಧನೆ ಮತ್ತು ಅಂತರಿಕ ಲೆಕ್ಕಪರಿಶೋಧನಾ ವರದಿಯ ಮೇಲೆ ಕೈಗೊಂಡ ಕ್ರಮಗಳ ಪರಿಶೀಲನೆ ಹಾಗೂ ಹಿಂದಿನ ವರದಿಗಳಲ್ಲಿ ತೀರುವಳಿಗೆ ಬಾಕಿ ಉಳಿದಿರುವ ಕಂಡಿಕೆಗಳ ಬಗ್ಗೆ ಹಾಗೂ ಸಂದೇಹಾಸ್ಪದ, ಮೋಸ/ವಂಚನೆ ಅಥವಾ ಅಕ್ರಮ, ಅಂತರಿಕ ನಿಯಂತ್ರಣ ವ್ಯವಸ್ಥೆಯಲ್ಲಿನ ವೈಫಲ್ಯಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರಾಮರ್ಶಿಸಿ ಗ್ರಾಮ ಪಂಚಾಯತಿಗೆ ವರದಿ ಮಾಡಬೇಕಾಗಿರುತ್ತದೆ. ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಗಳಿಗೆ ಬಹಳಷ್ಟು ಗ್ರಾಮ ಪಂಚಾಯತಿಗಳು ಅನುಪಾಲನಾ ವರದಿಯನ್ನು ಸಲ್ಲಿಸಿರುವುದಿಲ್ಲ.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು ಮತ್ತು ಆಯವ್ಯಯ) ನಿಯಮಗಳು 2006ರ, ನಿಯಮ 113ರ ಪ್ರಕಾರ ಕಾರ್ಯದರ್ಶಿಗಳು ವಾರ್ಷಿಕ ಲೆಕ್ಕಪರಿಶೋಧನಾ ವರದಿ ಸ್ವೀಕೃತವಾದ ಕೂಡಲೇ ವಸೂಲಾತಿಗೆ ಸೂಚಿಸಿರುವ ಮತ್ತು ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತದ ವಿವರವನ್ನು ನಮೂನೆ 58ರಲ್ಲಿ ನಿಗಧಿಪಡಿಸಿದ ರಿಜಿಸ್ಟರ್‌ನಲ್ಲಿ ದಾಖಲಿಸಿ, ವರದಿಯಲ್ಲಿ ಎತ್ತಿ ತೋರಿಸಲಾದ ಲೋಪದೋಷಗಳು ಅಥವಾ ಅಕ್ರಮಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳತಕ್ಕದೆಂದು ಮತ್ತು ನಷ್ಟಕ್ಕೆ ಹೊಣೆಗಾರರಾಗಿರುವುದರಿಂದ ನಷ್ಟದ ಮೊತ್ತವನ್ನು, ಬಡ್ಡಿ ಸಹಿತ ವಸೂಲಿ ಮಾಡಲು ಕ್ರಮ ಕೈಗೊಳ್ಳಬೇಕಾಗುತ್ತದೆ. ಆಕ್ಷೇಪಣೆಗೊಳಗಾಗಿರುವ ವೆಚ್ಚಗಳ ಕುರಿತಂತೆ ಸಮರ್ಪಕ ದಾಖಲೆ ಮತ್ತು ವಿವರಣೆಯನ್ನು ಒದಗಿಸಲು ಕ್ರಮ ಕೈಗೊಂಡು 03 ತಿಂಗಳ ಒಳಗಾಗಿ ಲೆಕ್ಕ ಪರಿಶೋಧನಾ ಸಮಿತಿಯ ಮೂಲಕ ಅನುಪಾಲನಾ ವರದಿಯನ್ನು ಗ್ರಾಮ ಪಂಚಾಯತಿಯ ಸಭೆಯ ಮುಂದೆ ಮಂಡಿಸಿ ನಂತರ ಸಂಬಂಧಿಸಿದ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳುರವರಿಗೆ ಸಲ್ಲಿಸಬೇಕಾಗಿರುತ್ತದೆ. ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು, ತನ್ನ ಷರಾದೊಂದಿಗೆ ಅನುಪಾಲನಾ ವರದಿಯನ್ನು ಸಂಬಂಧಿಸಿದ ಸಹಾಯಕ ನಿಯಂತ್ರಕರು, ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಚೇರಿಗೆ ಕಳುಹಿಸಿಕೊಡಬೇಕು. ಯಾವುದೇ ವಸೂಲಾತಿ ಅಥವಾ ಬಾಕಿ ಉಳಿದುಕೊಂಡಿರುವ ಆಕ್ಷೇಪಣೆಗಳಿಗೆ ಗ್ರಾಮ ಪಂಚಾಯತಿಯು ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ, ಕಾರ್ಯನಿರ್ವಾಹಕ ಅಧಿಕಾರಿಯವರು ಅಂತಹ ವ್ಯಕ್ತಿಯ ಋಣಭಾರದ ಮೊಬಲಗನ್ನು ಬಾಕಿಯಾದ ದಿನಾಂಕದಿಂದ ಬಾಕಿ ಇರುವ ಮೊಬಲಗಿನ ಮೇಲೆ ಶೇ.15ರಂತೆ, ಬಡ್ಡಿ ಸಹಿತ ಗ್ರಾಮ ಪಂಚಾಯತಿಗೆ ಸಂದಾಯ ಮಾಡತಕ್ಕದೆಂದು ಆದೇಶದ ಮೂಲಕ ನಿರ್ದೇಶಿಸಬಹುದು. 02 ತಿಂಗಳ ಒಳಗಾಗಿ ಆ ಮೊಬಲಗನ್ನು ಸಂದಾಯ ಮಾಡದಿದ್ದಲ್ಲಿ, ಕಾರ್ಯನಿರ್ವಾಹಕ ಅಧಿಕಾರಿಯವರು ಅದನ್ನು ಭೂಕಂದಾಯದ ಬಾಕಿಯಂತೆ ವಸೂಲಿ ಮಾಡುವ ಕುರಿತಂತೆ ಕ್ರಮಜರುಗಿಸಲು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ-1993ರ ಕಲಂ 246(8)ರಲ್ಲಿ ಅವಕಾಶವಿರುತ್ತದೆ. ಆದರೆ ಕಾರ್ಯನಿರ್ವಾಹಕ ಅಧಿಕಾರಿಗಳು ಈ ರೀತಿ ಯಾವುದೇ ಕ್ರಮ ಜರುಗಿಸದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

3.12 ಲೆಕ್ಕ ಪರಿಶೋಧನಾ ಶುಲ್ಕವನ್ನು ಸರ್ಕಾರಕ್ಕೆ ಜಮಾ ಮಾಡಿರುವುದಿಲ್ಲ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾ.ಅ.ಪ 73 ಜಿ.ಪ.ಸ:2004 ದಿನಾಂಕ:9.11.05ರಿಂದ ಜಾರಿಗೆ ಬಂದಿರುವಂತೆ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಲೆಕ್ಕಪತ್ರಗಳು ಮತ್ತು ಆಯವ್ಯಯ) ನಿಯಮಗಳು 2006ರ, ನಿಯಮ 115ರ ಪ್ರಕಾರ ಗ್ರಾಮ ಪಂಚಾಯಿತಿಯ ಲೆಕ್ಕ ಪರಿಶೋಧನಾ ಶುಲ್ಕವನ್ನು ಸರ್ಕಾರವು ನಿಗಧಿಪಡಿಸಿದ ದರದಲ್ಲಿ (ವಾರ್ಷಿಕ ರೂ.1000/-) ಚೆಕ್/ಡಿಮಾಂಡ್ ಡ್ರಾಫ್ಟ್

ಮುಖಾಂತರ ಆಯಾ ವರ್ಷದ ಲೆಕ್ಕ ಪರಿಶೋಧನಾ ಕಾರ್ಯದ ನಂತರ ಸದರಿ ಮೊಬಲಗನ್ನು ರಾಜ್ಯ ಲೆಕ್ಕ ಪತ್ರ ಇಲಾಖೆಯ ಲೆಕ್ಕಶೀರ್ಷಿಕೆ 0070-60-110-0-01-000ಕ್ಕೆ ಜಮಾ ಮಾಡಲು ಸೂಚಿಸಿದೆ. ಆದರೆ 27 ಜಿಲ್ಲೆಗಳ 3740 ಗ್ರಾಮಪಂಚಾಯಿತಿಗಳಲ್ಲಿ ಒಟ್ಟು ಲೆಕ್ಕ ಪರಿಶೋಧನಾ ಶುಲ್ಕ ಆಕ್ಷೇಪಣೆ ಮೊತ್ತ ರೂ.70.72ಲಕ್ಷಗಳು ಮತ್ತು ವಸೂಲಾತಿ ಮೊತ್ತ ರೂ.71.01ಲಕ್ಷಗಳು ಪಾವತಿಸದಿರುವುದು ಕಂಡು ಬಂದಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 3.12ಎರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	200	200	2.00	0.00
2	ಬಾಗಲಕೋಟೆ	6	6	0.00	0.39
3	ಬೆಳಗಾವಿ	452	452	4.22	0.35
4	ಬಳ್ಳಾರಿ	216	216	2.18	0.00
5	ಬೀದರ	185	185	18.5	0.00
6	ಚಾಮರಾಜನಗರ	126	126	1.36	0.01
7	ಚಿಕ್ಕಬಳ್ಳಾಪುರ	42	42	3.54	0.00
8	ಚಿತ್ರದುರ್ಗ	144	144	0.03	2.53
9	ದಕ್ಷಿಣ ಕನ್ನಡ	66	13	0.29	0.00
10	ದಾವಣಗೆರೆ	130	130	1.28	0.02
11	ಧಾರವಾಡ	129	129	1.26	0.03
12	ಗದಗ	123	123	1.18	0.00
13	ಹಾಸನ	119	119	0.00	24.10
14	ಹಾವೇರಿ	42	42	0.42	0.00
15	ಕಲಬುರಗಿ	260	260	18.06	15.93
16	ಕೋಲಾರ	157	157	1.58	0.00
17	ಕೊಪ್ಪಳ	136	136	0.24	2.13
18	ಕೊಡಗು	1	1	0.10	0.00
19	ಮಂಡ್ಯ	157	157	0.00	12.27
20	ಮೈಸೂರು	129	129	1.29	0.00
21	ರಾಯಚೂರು	72	72	2.97	1.19
22	ಶಿವಮೊಗ್ಗ	179	179	1.82	0.00
23	ತುಮಕೂರು	279	279	3.16	3.83
24	ಉಡುಪಿ	78	78	0.00	4.49
25	ಉತ್ತರಕನ್ನಡ	79	79	3.28	0.11
26	ವಿಜಯಪುರ	108	108	1.68	0.32
27	ಯಾದಗಿರಿ	27	27	0.28	3.32
ಒಟ್ಟು		**3740**	**3740**	**70.72**	**71.01**
ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)				**141.73**	

3.13 ಅಡ್‌ಹಾಕ್ ಸಮಿತಿ ಸಭೆಗಳನ್ನು 17 ಜಿಲ್ಲೆಗಳಲ್ಲಿ ನಡೆಸಿರುವುದಿಲ್ಲ.

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಗ್ರಾಅಪ 80 ಎಎಆರ್ 2000, ದಿನಾಂಕ:14.05.2001 ರಲ್ಲಿ ಗ್ರಾಮ ಪಂಚಾಯತಿಗಳ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆಗಳನ್ನು ತ್ವರಿತವಾಗಿ ತೀರುವಳಿ ಮಾಡುವ ಉದ್ದೇಶದಿಂದ ಪ್ರತಿ ತಾಲ್ಲೂಕಿನಲ್ಲಿ ತಾಲ್ಲೂಕು ಪಂಚಾಯತಿ ಮತ್ತು ಲೆಕ್ಕಪರಿಶೋಧನಾ ಇಲಾಖೆಗಳ ಪ್ರತಿನಿಧಿಗಳನ್ನೊಳಗೊಂಡ ಅಡ್‌ಹಾಕ್ ಸಮಿತಿ ರಚಿಸಲಾಗಿದೆ. ಈ ಸಮಿತಿಯು ಕನಿಷ್ಠ 3 ತಿಂಗಳಿಗೊಮ್ಮೆ ಸಭೆ ಸೇರಿ ಲೆಕ್ಕಪರಿಶೋಧನಾ ಕಂಡಿಕೆಗಳಿಗೆ ಸಲ್ಲಿಸಿರುವ ಉತ್ತರಗಳನ್ನು ಪರಿಶೀಲಿಸಿ, ತೀರುವಳಿಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. 2018-19ನೇ ಸಾಲಿನಲ್ಲಿ ಕೇವಲ 12 ಜಿಲ್ಲೆಗಳು ಮಾತ್ರ ಅಡ್‌ಹಾಕ್ ಸಮಿತಿ ಸಭೆಗಳನ್ನು ನಡೆಸಿದ್ದು, ಉಳಿದ 17 ಜಿಲ್ಲೆಗಳಿಗೆ ಸಂಬಂಧಿಸಿದಂತೆ ಅಡ್‌ಹಾಕ್ ಸಮಿತಿ ಸಭೆಗಳು ನಡೆದಿರುವುದಿಲ್ಲ. ವಿವರಗಳು ಈ ಕೆಳಕಂಡಂತಿವೆ.

ಕ್ರ ಸಂ.	ಜಿಲ್ಲೆಯ ಹೆಸರು	ಪ್ರಸ್ತುತ ಲೆಕ್ಕ ತನಿಖಾ ವರ್ಷದಲ್ಲಿಜರುಗಿದ ಅಡ್ ಹಾಕ್ ಸಮಿತಿಗಳ ಸಂಖ್ಯೆ
1	2	3
1	ಬೆಳಗಾವಿ	5
2	ಚಾಮರಾಜನಗರ	14
3	ಚಿಕ್ಕಮಗಳೂರು	9
4	ದಕ್ಷಿಣಕನ್ನಡ	32
5	ಗದಗ	4
6	ಹಾಸನ	12
7	ಹಾವೇರಿ	6
8	ಕೊಡಗು	2
9	ಮಂಡ್ಯ	12
10	ಮೈಸೂರು	3
11	ಉಡುಪಿ	3
12	ಉತ್ತರಕನ್ನಡ	6
	ಒಟ್ಟು ಮೊತ್ತ	**108**

ಸರ್ಕಾರದ ಅಧಿಕೃತ ಜ್ಞಾಪನದಂತೆ ತಾಲ್ಲೂಕು ಪಂಚಾಯಿತಿಗಳು ನಿಗದಿತ ಅವಧಿಯಲ್ಲಿ ಅಡಹಾಕ್ ಸಮಿತಿ ಸಭೆಯನ್ನು ಕೈಗೊಂಡು ತ್ವರಿತವಾಗಿ ತೀರುವಳಿಯ ಕ್ರಮ ಜರುಗಿಸಿ ಆಕ್ಷೆಪಣೆ ಮತ್ತು ವಸೂಲಾತಿ ಕಂಡಿಕೆಗಳನ್ನು ಹಾಗೂ ಮೊತ್ತವನ್ನು ಕಡಿಮೆಗೊಳಿಸಬಹುದಾಗಿದೆ. ಈ ಕುರಿತಂತೆ ಆಡಳಿತ ಇಲಾಖೆಯವರು ಅಗತ್ಯ ಕ್ರಮಕೈಗೊಳ್ಳಬೇಕಾಗುತ್ತದೆ

3.14 ಪಂಚಾಯತಿ ಜಮಾಬಂಧಿ 2276 ಗ್ರಾಮ ಪಂಚಾಯಿತಿಗಳಲ್ಲಿ ನಡೆಸಿರುವುದಿಲ್ಲ.

ಗ್ರಾಮ ಪಂಚಾಯತಿಗಳು ನಿರ್ವಹಿಸಿದ ಲೆಕ್ಕಗಳು ಮತ್ತು ರಿಜಿಸ್ಟರುಗಳ ಮತ್ತು ಕಾರ್ಯಗತಗೊಳಿಸಿದ ಕಾಮಗಾರಿಗಳ ವಾರ್ಷಿಕ ತನಿಖೆಗಾಗಿ, ಸರ್ಕಾರವು ಕರ್ನಾಟಕ ಪಂಚಾಯತ್‌ರಾಜ್ (ಪಂಚಾಯತ್ ಜಮಾಬಂದಿ ನಿರ್ವಹಣೆ) ನಿಯಮಗಳು 2004ನ್ನು ಹೊರಡಿಸಿದೆ. ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ, ಜನತೆಯ ಪಾಲ್ಗೊಳ್ಳುವಿಕೆಯನ್ನು ಖಾತರಿ ಪಡಿಸಿಕೊಳ್ಳುವುದು ಮತ್ತು ಪ್ರೋತ್ಸಾಹಿಸುವುದು, ಪಾರದರ್ಶಕತೆ ಖಚಿತಪಡಿಸುವುದು, ನಾಗರೀಕರಿಗೆ ಮಾಹಿತಿ ದೊರಕುವಂತೆ ಮಾಡುವುದು, ಸಾರ್ವಜನಿಕ ಕುಂದುಕೊರತೆ ಪರಿಹಾರ ಹಾಗೂ ಗ್ರಾಮ ಪಂಚಾಯತಿಗಳ ಸ್ಪಂದನಶೀಲ ಆಡಳಿತವನ್ನು ಪ್ರೋತ್ಸಾಹಿಸುವ

ಉದ್ದೇಶಕ್ಕೆ ಅವಶ್ಯವೆಂದು ಕಂಡು ಬರುವ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಪಂಚಾಯತ್ ಜಮಾಬಂದಿಯ ಉದ್ದೇಶವಾಗಿರುತ್ತದೆ. ಪ್ರತಿ ವರ್ಷದ ಆಗಸ್ಟ್ 16 ರಿಂದ ಸೆಪ್ಟೆಂಬರ್ 15ನೇ ದಿನಾಂಕದೊಳಗಿನ ಅವಧಿಯಲ್ಲಿ ಪಂಚಾಯತ್ ಜಮಾಬಂದಿಯನ್ನು ನಡೆಸಬೇಕಾಗುತ್ತದೆ. ಪಂಚಾಯತ್ ಜಮಾಬಂದಿ ನಿರ್ವಹಣೆಯನ್ನು ನಿರ್ವಹಿಸಲು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯವರು ಪ್ರತಿ ವರ್ಷ ಪಂಚಾಯತ್ ಜಮಾಬಂದಿ ನಿರ್ವಹಣೆ ತಂಡವನ್ನು ರಚಿಸಬೇಕಾಗಿರುತ್ತದೆ. ಸದರಿ ತಂಡವು ಒಬ್ಬ ತಾಲ್ಲೂಕು ಮಟ್ಟದ ಅಧಿಕಾರಿಯನ್ನು ಮುಖ್ಯಸ್ಥನನ್ನಾಗಿ ಮತ್ತು ಇಬ್ಬರು ಅಧಿಕಾರಿಗಳನ್ನು ಹೊಂದಿರುತ್ತದೆ.

ಪಂಚಾಯತ್ ಜಮಾಬಂದಿ ನಿರ್ವಹಣಾ ಅವಧಿಯಲ್ಲಿ ಪಂಚಾಯತ್ ಜಮಾಬಂದಿ ನಿರ್ವಹಣಾ ಅಧಿಕಾರಿಯವರು ಈ ಕೆಳಕಂಡ ಅಂಶಗಳನ್ನು ಪರಿಶೀಲಿಸಬೇಕಾಗಿರುತ್ತದೆ.

ಕರ್ನಾಟಕ ಪಂಚಾಯತ್ ರಾಜ್ (ಪಂಚಾಯತ್ ಜಮಾಬಂದಿ ನಿರ್ವಹಣೆ) ನಿಯಮಗಳು-2004ರ ನಿಯಮ 8(ಎ) ರಲ್ಲಿ ಸೂಚಿಸಿರುವಂತೆ ಲೆಕ್ಕಪರಿಶೋಧನಾ ವರದಿಗಳು ಹಾಗೂ ಲೆಕ್ಕಪರಿಶೋಧನಾ ಆಕ್ಷೇಪಣೆಗಳ ಅನುಸರಣೆಗಳನ್ನು ಪರಿಶೀಲಿಸುವುದು ಪಂಚಾಯತ್ ಜಮಾಬಂದಿ ನಿರ್ವಹಣಾಧಿಕಾರಿಯವರ ಕರ್ತವ್ಯ ಹಾಗೂ ಜವಾಬ್ದಾರಿಯಾಗಿರುತ್ತದೆ.

1. ಲೆಕ್ಕಗಳ ಪುಸ್ತಕಗಳು, ರಿಜಿಸ್ಟರುಗಳು ಮತ್ತು ದಾಖಲೆಗಳು, ವೆಚ್ಚದ ಇತರ ಬಾಬ್ತುಗಳಾದಂತಹ ವೇತನ, ನೀರು ಪೂರೈಕೆ ಕಾರ್ಯಗಳಿಗೆ ಮಾಡಿದ ದುರಸ್ತಿ ಮತ್ತು ವಿದ್ಯುತ್ ಬಿಲ್ಲುಗಳೂ ಸೇರಿದಂತೆ ಎಲ್ಲಾ ದಾಖಲೆಗಳು ಮತ್ತು ವೋಚರುಗಳನ್ನು ಪರಿಶೀಲಿಸುವುದು.
2. ಲೆಕ್ಕಪರಿಶೋಧನಾ ವರದಿಗಳು ಮತ್ತು ಲೆಕ್ಕಪರಿಶೋಧನಾ ವರದಿಯಲ್ಲಿ ಕಾಣಿಸಲಾದ ಆಕ್ಷೇಪಣೆಗಳಿಗೆ ಅನುಸರಣೆಗಳನ್ನು ಪರೀಕ್ಷಿಸುವುದು.
3. ಹಣಕಾಸು ಅಕ್ರಮಗಳ ಮತ್ತು ಆಪಾದನೆಗಳ ಕುರಿತು ವಿಚಾರಣೆ ಮಾಡುವುದು.
4. ಮಾಸಿಕ ಲೆಕ್ಕಪತ್ರಗಳನ್ನು ಪರೀಕ್ಷಿಸುವುದು.
5. ನಿಯತಕಾಲಿಕ ಸಲ್ಲಿಕೆಗಳನ್ನು ಸಕಾಲದಲ್ಲಿ ಸಲ್ಲಿಸಿರುವುದನ್ನು ಪರೀಕ್ಷಿಸುವುದು.

ಪಂಚಾಯತಿಯ ಜಮಾಬಂದಿ ನಿರ್ವಹಿಸಿದ ನಂತರ ಪಂಚಾಯತಿ ಜಮಾಬಂದಿ ನಿರ್ವಹಣಾ ಅಧಿಕಾರಿಯವರು ಎರಡು ಕೆಲಸದ ದಿನಗಳ ಅವಧಿಯೊಳಗೆ ಗ್ರಾಮ ಪಂಚಾಯತಿಗೆ ಸಂಬಂಧಿಸಿದಂತೆ ಯಾವುದೇ ಋಣಾತ್ಮಕ ಅಂಶಗಳು, ಅಕ್ರಮಗಳು ಮತ್ತು ಹಣಕಾಸು ದುರುಪಯೋಗಗಳನ್ನು ಗುರುತಿಸಿ ಗ್ರಾಮ ಪಂಚಾಯತಿ ಕಾರ್ಯದ ಸುಧಾರಣೆಗೆ ರಚನಾತ್ಮಕ ಸಲಹೆಗಳನ್ನೊಳಗೊಂಡ ವಿವರವಾದ ವರದಿಯನ್ನು ಸಲ್ಲಿಸತಕ್ಕದ್ದು. ಅಲ್ಲದೆ ಪಂಚಾಯತಿ ಜಮಾಬಂದಿಯ ಕಾರ್ಯ ಸಾರಾಂಶವನ್ನು ಸಿದ್ಧಪಡಿಸತಕ್ಕದ್ದು.

ಜಮಾಬಂಧಿ ಅಧಿಕಾರಿ ಮತ್ತು ಅವರ ಸಹಾಯಕ ಅಧಿಕಾರಿಗಳ ತಂಡ ಮೇಲ್ಕಂಡ ಅಂಶಗಳ ಬಗ್ಗೆ, ಕೂಲಂಕಷವಾಗಿ ಪರಿಶೀಲಿಸಿ ವರದಿ ನೀಡಿದಲ್ಲಿ, ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಹಣದುರುಪಯೋಗದ ಮೊತ್ತಗಳ ವಸೂಲಿ, ಮಾಸಿಕ/ವಾರ್ಷಿಕ ಲೆಕ್ಕಪತ್ರಗಳ ಸಮರ್ಪಕ ನಿರ್ವಹಣೆ ಹಾಗೂ ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣಾ ವರದಿಗಳನ್ನು ಸಲ್ಲಿಸುವುದು ಇತ್ಯಾದಿ ಕ್ರಮಗಳ ಅನುಸರಣೆಯಿಂದ ಗ್ರಾಮ ಪಂಚಾಯತಿಗಳ ಕಾರ್ಯನಿರ್ವಹಣೆಯಲ್ಲಿ ಹೆಚ್ಚಿನ ಸುಧಾರಣೆ ತರಬಹುದಾಗಿರುತ್ತದೆ. ಅಲ್ಲದೇ ಇದರಿಂದ ಲೆಕ್ಕಪರಿಶೋಧನೆಯ ಉದ್ದೇಶವೂ ಸಹ ಸಫಲವಾಗುತ್ತದೆ. ಆದರೆ ಈ ವರದಿಯ ಕಂಡಿಕೆ ಸಂಖ್ಯೆ 2.7ರಲ್ಲಿ ವಿವರಿಸಿರುವಂತೆ, ಗ್ರಾಮ ಪಂಚಾಯಿತಿಗಳು ತಮ್ಮ ಮಾಸಿಕ/ಅರ್ಧ ವಾರ್ಷಿಕ/ ವಾರ್ಷಿಕ ಲೆಕ್ಕಪತ್ರಗಳನ್ನು ಗ್ರಾವ ಾಪಂಚಾಯಿತಿಯ ಸಾಮಾನ್ಯ ಸಭೆಯಲ್ಲಿ ಅನುಮೋದನೆ ಪಡೆದುಕೊಂಡು ನಿಗದಿತ ಸಮಯದಲ್ಲಿ ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಚೇರಿಗಳಿಗೆ ಸಲ್ಲಿಸದೇ ಇರುವುದರಿಂದ ಗ್ರಾಮ ಪಂಚಾಯಿತಿಯ ಸಂಪನ್ಮೂಲ ಸಂಗ್ರಹಣೆಯಲ್ಲಿನ ಲೋಪದೋಷ ಮತ್ತು ದುರುಪಯೋಗ ಪ್ರಕರಣಗಳು, ಅಭಿವೃದ್ಧಿ ಕಾರ್ಯಗಳ ವೆಚ್ಚದ ಪ್ರಗತಿ ಹಾಗೂ ಲೆಕ್ಕಪತ್ರ ನಿರ್ವಹಣೆಗಳಲ್ಲಿರುವ ನ್ಯೂನತೆಗಳ ಬಗ್ಗೆ ಸಕಾಲದಲ್ಲಿ ಗ್ರಾಮ ಪಂಚಾಯಿತಿಗಳ ಗಮನಕ್ಕೆ ತರಲು

ಸಾಧ್ಯವಾಗಿರುವುದಿಲ್ಲ. ಜಮಾಬಂದಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸದೇ ಇರುವುದರಿಂದ ಈ ನ್ಯೂನತೆಗಳು ಮರುಕಳಿಸುತ್ತಿದ್ದು, ಜಮಾಬಂದಿಯನ್ನು ನಿಯಮಾನುಸಾರ ಪರಿಣಾಮಕಾರಿಯಾಗಿ ನಿರ್ವಹಿಸುವುದು ಅಗತ್ಯವಾಗಿರುತ್ತದೆ. 2018-19ನೇ ಸಾಲಿನಲ್ಲಿ 2276 ಗ್ರಾಮ ಪಂಚಾಯತಿಗಳಲ್ಲಿ ಜಮಾಬಂದಿ ನಡೆಸಿರುವುದಿಲ್ಲ.

ಜಿಲ್ಲಾವಾರು ವಿವರಗಳನ್ನು ಅನುಬಂಧ-8 ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು ಅನುಬಂಧ-8ಎ ರಲ್ಲಿ ನೀಡಲಾಗಿದೆ.

3.15 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 (ಏಖಿಕಿ) ಉಲ್ಲಂಘನೆಯ ಪ್ರಕರಣಗಳು.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಕಲಂ 4(ee)(II)ರಲ್ಲಿ ಗ್ರಾಮ ಪಂಚಾಯತಿಯು 1.00ಲಕ್ಷಕ್ಕಿಂತ ಹೆಚ್ಚು ಮೌಲ್ಯದ ಇತರೆ ಎಲ್ಲಾ ಸಂಗ್ರಹಣೆಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮದ ಅನುಸಾರ ಕಡ್ಡಾಯವಾಗಿ ಟೆಂಡರ್ ಪ್ರಕ್ರಿಯೆ ಪಾಲಿಸಬೇಕಾಗಿರುತ್ತದೆ. 5.00ಲಕ್ಷ ಮೀರಿದ ಪ್ರಕರಣಗಳಲ್ಲಿ ವಿದ್ಯುನ್ಮಾನ ವೇದಿಕೆ (e-Procurement Platform) ಬಳಸಿ ಟೆಂಡರ್ ಕರೆಯಬೇಕಾಗುತ್ತದೆ. ಆದರೆ 2018-19ನೇ ಸಾಲಿನಲ್ಲಿ 24 ಜಿಲ್ಲೆಗಳಲ್ಲಿನ 877 ಗ್ರಾಮ ಪಂಚಾಯಿತಿಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 (ಏಖಿಕಿ) ಪಾಲಿಸದಿರುವುದು ಕಂಡುಬಂದಿರುತ್ತದೆ. ಬೀದಿ ದೀಪ ಖರೀದಿಯಲ್ಲಿ ಟೆಂಡರ್ ಕರೆಯದೇ ಇರುವುದು, ನೀರು ಸರಬರಾಜು ಸಾಮಗ್ರಿಗಳ ಖರೀದಿಯಲ್ಲಿ ಟೆಂಡರ್ ಕರೆಯದೇ ಇರುವುದು ಹಾಗೂ ಕೊಟೇಶನ್‌ಗಳನ್ನು ಕರೆಯದೇ ಇರುವುದು, ಕೊಟೇಶನ್‌ಗಳಿಗೆ ಸಹಿ ಇಲ್ಲದೇ ಇರುವುದು ಇತ್ಯಾದಿ ನ್ಯೂನತೆಗಳಿರುವುದು ಕಂಡುಬಂದಿದ್ದು ರೂ.4464.97ಲಕ್ಷಗಳನ್ನು ಆಕ್ಷೇಪಿಸಿ ಹಾಗೂ ರೂ.13.68ಲಕ್ಷಗಳನ್ನು ವಸೂಲಾತಿಗೆ ಸೂಚಿಸಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 3.15ಎರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	32	32	229.63	1.22
2	ಬಾಗಲಕೋಟೆ	1	1	4.63	0.00
3	ಬೆಳಗಾವಿ	3	3	15.75	0.00
4	ಬಳ್ಳಾರಿ	91	91	458.56	0.00
5	ಚಾಮರಾಜನಗರ	7	7	13.91	0.00
6	ಚಿಕ್ಕಮಗಳೂರು	4	4	6.38	0.00
7	ಚಿಕ್ಕಬಳ್ಳಾಪುರ	51	51	204.61	0.00
8	ಚಿತ್ರದುರ್ಗ	1	1	38.86	0.00
9	ದಾವಣಗೆರೆ	222	222	2016.74	2.55
10	ಧಾರವಾಡ	15	15	59.32	0.00
11	ಗದಗ	109	109	300.74	0.00
12	ಹಾವೇರಿ	6	6	34.33	0.00

ಕ್ರಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
13	ಕೋಲಾರ	1	1	4.51	0.00
14	ಕೊಪ್ಪಳ	50	50	229.65	0.02
15	ಕೊಡಗು	5	5	9.75	0.00
16	ಮಂಡ್ಯ	43	43	154.80	0.30
17	ಮೈಸೂರು	9	9	15.42	0.00
18	ರಾಯಚೂರು	63	63	410.07	0.09
19	ಶಿವಮೊಗ್ಗ	6	6	7.93	0.00
20	ತುಮಕೂರು	5	5	39.00	5.49
21	ಉಡುಪಿ	15	15	61.54	2.90
22	ಉತ್ತರಕನ್ನಡ	32	32	13.57	1.10
23	ವಿಜಯಪುರ	15	15	19.74	0.00
24	ಯಾದಗಿರಿ	91	91	115.53	0.00
ಒಟ್ಟು		**877**	**877**	**4464.97**	**13.68**
ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)				**4478.64**	

3.16 ಸ್ವಂತ ಹೆಸರಿನ ಮೇಲೆ ಚೆಕ್‌ನ ಹಣ ಡ್ರಾ ಮಾಡಿರುವ ಪ್ರಕರಣಗಳು.

ಸರ್ಕಾರದ ಸುತ್ತೋಲೆ ಸಂಖ್ಯೆ:RDP 23 AFN/(2) 2000 ದಿನಾಂಕ:14.06.2000ರಂತೆ ಸ್ವಂತಕ್ಕಾಗಿ ಎಂಬುದಾಗಿ ನಮೂದಿಸಿ (Self Cheques) ಯಾವುದೇ ಧನಾದೇಶಗಳನ್ನು ಡ್ರಾ ಮಾಡಕೂಡದೆಂದು ಹಾಗೂ ಧನಾದೇಶಗಳನ್ನು ಕಡ್ಡಾಯವಾಗಿ ವ್ಯಕ್ತಿ, ಕಂಪನಿ, ಸಂಸ್ಥೆ, ನಿಗಮ ಇವರ ಹೆಸರಿಗೆ ಮಾತ್ರ ನೀಡಬಹುದಾಗಿದೆ ಎಂದು ಸೂಚನೆಯನ್ನು ಹೊರಡಿಸಲಾಗಿದೆ. ಆದರೆ 17 ಜಿಲ್ಲೆಗಳಲ್ಲಿನ 146 ಗ್ರಾಮಪಂಚಾಯಿತಿಗಳ 146 ಪ್ರಕರಣಗಳಲ್ಲಿ, ವಿವಿಧ ಯೋಜನೆಗಳಲ್ಲಿನ ಖರೀದಿ/ಕಾಮಗಾರಿ ವೆಚ್ಚಗಳಿಗೆಂದು ಸ್ವಂತ ಹೆಸರಿನ ಮೇಲೆ ಚೆಕ್‌ನ ಹಣ ಡ್ರಾ ಮಾಡಿ ವಿವರವನ್ನು ಪರಿಶೀಲನೆಗೆ ನೀಡಿಲ್ಲದಿರುವುದು ಕಂಡುಬಂದಿರುತ್ತದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2ರ 3.16ಎ ರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬಾಗಲಕೋಟೆ	10	10	5.27	0.00
2	ಬೆಳಗಾವಿ	37	37	29.44	7.28
3	ಚಿಕ್ಕಮಗಳೂರು	1	1	0.01	0.00
4	ಚಿಕ್ಕಬಳ್ಳಾಪುರ	2	2	0.66	0.00
5	ಚಿತ್ರದುರ್ಗ	1	1	0.00	0.55
6	ದಾವಣಗೆರೆ	8	8	1.16	4.04

ಕ್ರಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
7	ಧಾರವಾಡ	43	43	30.15	0.02
8	ಗದಗ	8	8	2.67	0.00
9	ಹಾವೇರಿ	6	6	4.47	0.00
10	ಕಲಬುರಗಿ	9	9	12.42	0.00
11	ಕೊಪ್ಪಳ	3	3	4.62	0.00
12	ಮಂಡ್ಯ	2	2	0.00	1.50
13	ಶಿವಮೊಗ್ಗ	3	3	1.88	0.00
14	ತುಮಕೂರು	1	1	0.47	0.00
15	ಉಡುಪಿ	1	1	0.00	1.30
16	ಉತ್ತರಕನ್ನಡ	10	10	3.06	1.53
17	ಯಾದಗಿರಿ	1	1	0.00	1.38
ಒಟ್ಟು		**146**	**146**	**96.28**	**17.60**
ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)				**113.88**	

3.17 ತಾಂತ್ರಿಕ ಮಂಜೂರಾತಿ ಪಡೆಯದೇ ಕಾಮಗಾರಿ ನಿರ್ವಹಿಸಿರುವ ಪ್ರಕರಣಗಳು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಅಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006, ನಿಯಮ 77 (ii) ಮತ್ತು (iv)ರ ಪ್ರಕಾರ ಅಂದಾಜು ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಪಡೆಯತಕ್ಕದ್ದು. ಆದರೆ 6 ಜಿಲ್ಲೆಗಳ 14 ಗ್ರಾಮ ಪಂಚಾಯತಿಗಳಲ್ಲಿ ಅಂದಾಜು ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿಯನ್ನು ಪಡೆಯದೇ ಕಾಮಗಾರಿ ನಿರ್ವಹಿಸಿರುವುದು ಕಂಡು ಬಂದಿರುತ್ತದೆ. ಇದರ ಒಟ್ಟು ಆಕ್ಷೇಪಿತ ಮೊತ್ತ ರೂ.18.17ಲಕ್ಷಗಳು. ಜಿಲ್ಲಾವಾರು ಹಾಗೂ ಗ್ರಾಮಪಂಚಾಯಿತಿವಾರು ವಿವರಗಳು ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ಕ್ರಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಹೆಸರು	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ
1	2	3	4	5
1	ಬೆಂಗಳೂರು	ಜಾಲಿಗೆ	31(4)	0.30
2	ಬೆಳಗಾವಿ	ಅಕ್ಕತಂಗೇರಹಾಳ	44	0.29
		ಗುಜನಟ್ಟಿ	43	0.47
		ಶಿವಾಪೂರ(ಹ)	44	0.29
3	ಗದಗ	ಬನ್ನಿಕೊಪ್ಪ	51	0.28
		ಚಿಕ್ಕಮಣ್ಣೂರು	54	0.56
		ಹೊಳೆಆಲೂರು	53	0.56
		ಹುನಗುಂಡಿ	55	0.90
4	ಹಾವೇರಿ	ದೇವಗಿರಿ	55	1.16
5	ಶಿವಮೊಗ್ಗ	ಅರಸಾಳು	49	0.15
6	ಉಡುಪಿ	ಹಟ್ಟಿಯಂಗಡಿ	23	0.49
		ಇರ್ವತ್ತೂರು	29	0.41
		ಕುಕ್ಕಂದೂರು	33	0.61
		ನಿಟ್ಟೆ	38	11.97
	ಒಟ್ಟು	**14**	**14**	**18.17**

3.18 ನಿಯಮ ಬಾಹಿರ ವೆಚ್ಚ ಭರಿಸಿರುವ ಪ್ರಕರಣಗಳು.

22 ಜಿಲ್ಲೆಗಳ 485 ಗ್ರಾಮ ಪಂಚಾಯತಿಗಳಲ್ಲಿ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಗಳ ಅಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006ರ ನಿಯಮ 68, 69, 70 ಹಾಗೂ ಕೆ.ಎಫ್.ಸಿ. 1958ರ ಅನುಚ್ಛೇದ 14, 128, 164, 169 ಹಾಗೂ ಕೆ.ಟಿ.ಪಿ.ಪಿ. ನಿಯಮ 1999 ಮತ್ತು 2000 ಉಲ್ಲಂಘಿಸಿ ಕಾಮಗಾರಿಗೆ ಮತ್ತು ಸಾಮಗ್ರಿ ಖರೀದಿಗೆ ಹಣ ಸಂದಾಯ ಮಾಡಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿದೆ. ಇದರಲ್ಲಿ ಮೊತ್ತ ರೂ.832.37ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ರೂ.65.32ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 3.18ಎ ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ.ಸಂ	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	65	65	171.73	7.09
2	ಬೆಳಗಾವಿ	52	52	76.55	1.80
3	ಚಾಮರಾಜನಗರ	5	5	6.12	0.00
4	ಚಿಕ್ಕಮಗಳೂರು	7	7	9.66	0.00
5	ಚಿಕ್ಕಬಳ್ಳಾಪುರ	15	15	28.09	0.50
6	ಚಿತ್ರದುರ್ಗ	16	16	0.00	0.41
7	ದಾವಣಗೆರೆ	71	71	201.12	2.85
8	ಧಾರವಾಡ	42	42	91.32	0.64
9	ಗದಗ	25	25	20.31	0.00
10	ಹಾವೇರಿ	2	2	0.37	0.42
11	ಕಲಬುರಗಿ	58	58	53.97	32.79
12	ಕೋಲಾರ	1	1	0.00	0.07
13	ಕೊಪ್ಪಳ	30	30	71.69	0.01
14	ಕೊಡಗು	1	1	0.10	0.00
15	ಮಂಡ್ಯ	24	24	9.99	0.75
16	ಮೈಸೂರು	10	10	12.02	3.38
17	ಶಿವಮೊಗ್ಗ	3	3	7.89	0.00
18	ತುಮಕೂರು	10	10	8.93	0.20
19	ಉಡುಪಿ	15	15	3.23	1.34
20	ಉತ್ತರಕನ್ನಡ	17	17	10.13	11.65
21	ವಿಜಯಪುರ	4	4	0.00	1.43
22	ಯಾದಗಿರಿ	13	13	49.15	0.00
ಒಟ್ಟು		**485**	**485**	**832.37**	**65.32**
ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)				**897.69**	

3.19 ಕಾಮಗಾರಿಗಳ ಅಳತೆಗಳನ್ನು ಅಳತೆ ಪುಸ್ತಕದಲ್ಲಿ ನಮೂದಿಸದೆ ಮತ್ತು ಅಳತೆ ಪುಸ್ತಕಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವ ಪ್ರಕರಣಗಳು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006, ನಿಯಮಗಳು 85 ಮತ್ತು 85(10) (11)ರ ಪ್ರಕಾರ ಅಳತೆಗಳನ್ನು ನಮೂನೆ-37ರಲ್ಲಿ ನಿಗದಿಪಡಿಸಿದ ಅಳತೆ ಪುಸ್ತಕದಲ್ಲಿ ದಾಖಲಿಸತಕ್ಕದ್ದು ಹಾಗೂ ಹಣ ಸಂದಾಯ ಮಾಡಬೇಕಾದ ಪ್ರತಿಯೊಂದು ಅಳತೆಯ ಕೊನೆಯ ಭಾಗದಲ್ಲಿ ಗುತ್ತಿಗೆದಾರನಿಂದ ಸ್ವೀಕೃತಿ ಪಡೆದುಕೊಳ್ಳತಕ್ಕದ್ದು ಮತ್ತು ಅಳತೆ ಪುಸ್ತಕದಲ್ಲಿ ಅಳತೆಯನ್ನು ನಮೂದಿಸುವ ಮೊದಲು ಕಾಮಗಾರಿ, ಗುತ್ತಿಗೆದಾರನ ವಿವರವನ್ನು ದಾಖಲಿಸತಕ್ಕದ್ದು. ಆದರೆ ಗ್ರಾಮ ಪಂಚಾಯಿತಿಗಳಲ್ಲಿ ವಿವಿಧ ಯೋಜನೆಗಳ ಕಾಮಗಾರಿಗಳ ಅನುಷ್ಠಾನದಲ್ಲಿ 12 ಜಿಲ್ಲೆಯ 81 ಗ್ರಾಮ ಪಂಚಾಯಿತಿಗಳಲ್ಲಿ ಕೆಳಕಂಡ 81 ಪ್ರಕರಣಗಳಲ್ಲಿ ಆಕ್ಷೇಪಿತ ಮೊತ್ತ ರೂ.300.82ಲಕ್ಷ ಹಾಗೂ ವಸೂಲಾತಿ ಮೊತ್ತ ರೂ.20.50ಲಕ್ಷಗಳಿಗೆ ಕಾಮಗಾರಿ ಅಳತೆ ಮತ್ತು ಬಿಲ್ಲುಗಳನ್ನು ಅಳತೆ ಪುಸ್ತಕದಲ್ಲಿ ನಮೂದಿಸದೇ ಹಣ ಪಾವತಿಸಿದ್ದು ಮತ್ತು ಅಳತೆ ಪುಸ್ತಕಗಳನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವುದು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ. ಜಿಲ್ಲಾವಾರು ವಿವರ ಕೆಳಕಂಡಂತಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು 3.19ಎರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	2	2	0.35	0.75
2	ಬೆಳಗಾವಿ	8	8	44.93	0.43
3	ಚಾಮರಾಜನಗರ	1	1	0.24	0.00
4	ದಾವಣಗೆರೆ	2	2	0.33	0.46
5	ಗದಗ	19	19	61.90	0.00
6	ಮಂಡ್ಯ	9	9	41.02	0.93
7	ಮೈಸೂರು	1	1	0.92	0.00
8	ಶಿವಮೊಗ್ಗ	2	2	5.39	0.00
9	ತುಮಕೂರು	12	12	21.51	2.29
10	ಉಡುಪಿ	21	21	123.29	15.58
11	ಉತ್ತರ ಕನ್ನಡ	3	3	0.96	0.00
12	ವಿಜಯಪುರ	1	1	0.00	0.06
	ಒಟ್ಟು ಮೊತ್ತ	**81**	**81**	**300.82**	**20.50**
	ಒಟ್ಟು ಮೊತ್ತ(ಆಕ್ಷೇಪಣೆ+ವಸೂಲಾತಿ)			**321.32**	

3.20 ಕಾಮಗಾರಿ ಅಳತೆಗಳನ್ನು ಇಲಾಖೆಯ ಅಭಿಯಂತರರಿಂದ ಪರಿಶೀಲನೆ ಮಾಡಿಸದೇ ಇರುವ (Check Measurement) ಪ್ರಕರಣಗಳು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕಪತ್ರಗಳು) 2006ರ ನಿಯಮ 86ರಂತೆ ಕಾಮಗಾರಿಯ ಅಂದಾಜು ಮೊತ್ತ ರೂ.25000ಕ್ಕಿಂತ ಕಡಿಮೆ ಇದ್ದಲ್ಲಿ ಗ್ರಾಮ ಪಂಚಾಯಿತಿ ಇಂಜಿನಿಯರ್ ಮತ್ತು ಅಧ್ಯಕ್ಷರು, ಕಾಮಗಾರಿಯ ಅಂದಾಜು ಮೊತ್ತ ರೂ.25000 ಮೀರಿದ್ದಲ್ಲಿ, ಕಾಮಗಾರಿ

ಅಳತೆಯನ್ನು ಅಧ್ಯಕ್ಷರು ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕಾಮಗಾರಿಯ ಅಂದಾಜು ಮೊತ್ತ ರೂ.4.00ಲಕ್ಷಗಳನ್ನು ಮೀರಿದ್ದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು ಹಾಗೂ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಅಭಿಯಂತರರು ಜಂಟಿಯಾಗಿ ಪರಿಶೀಲಿಸಿ ಅಳತೆ ಪುಸ್ತಕದಲ್ಲಿ ಅಳತೆ ಪರಶೀಲಿಸಿದ ಬಗ್ಗೆ ಧೃಡೀಕರಿಸಬೇಕಾಗಿರುತ್ತದೆ. ವಿವಿಧ ಯೋಜನೆಗಳಲ್ಲಿನ ಕಾಮಗಾರಿ ಅಳತೆಗಳನ್ನು ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದ ಇಂಜಿನಿಯರ್/ಸಹಾಯಕ ಕಾರ್ಯಪಾಲಕರ ಅಭಿಯಂತರ/ಕಾರ್ಯಪಾಲಕರ ಅಭಿಯಂತರರಿಂದ ಪರಿಶೀಲನೆ (ಳುಜಛಿಞ ಒಜಚಿಣಡಿಜಟಜಟಣ) ಮಾಡಿಸದೇ ಇರುವುದು ಕಂಡುಬಂದಿರುತ್ತದೆ. 11 ಜಿಲ್ಲೆಗಳಲ್ಲಿನ 458 ಗ್ರಾಮಪಂಚಾಯಿತಿಗಳಲ್ಲಿ ರೂ.1733.58ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2 ರ 3.20ಎ ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ
1	2	3	4	5
1	ಬೆಳಗಾವಿ	338	338	1462.78
2	ಚಿಕ್ಕಮಗಳೂರು	1	1	2.87
3	ದಾವಣಗೆರೆ	2	2	10.29
4	ಧಾರವಾಡ	65	65	120.06
5	ಗದಗ	37	37	73.13
6	ಕೊಡಗು	2	2	4.80
7	ಮೈಸೂರು	2	2	29.58
8	ಶಿವಮೊಗ್ಗ	7	7	25.28
9	ತುಮಕೂರು	1	1	1.00
10	ಉಡುಪಿ	2	2	3.50
11	ಉತ್ತರಕನ್ನಡ	1	1	0.30
	ಒಟ್ಟು ಮೊತ್ತ	**458**	**458**	**1733.58**

3.21 ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಳ್ಳದೇ ಸಾಮಗ್ರಿ/ಇತರೆ ಬಿಲ್ಲಿನ ಮೊತ್ತ ಪಾವತಿಸಿರುವುದು.

09 ಜಿಲ್ಲೆಗಳ 126 ಗ್ರಾಮ ಪಂಚಾಯತಿಗಳಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗದೇ ಸಾಮಗ್ರಿ/ವಿವಿಧ ಬಿಲ್ಲಿನಲ್ಲಿ ಪಾವತಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಇದರಲ್ಲಿ ರೂ.504.55ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ರೂ.7.66ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಜಿಲ್ಲಾವಾರು ವಿವರ ಈ ಕೆಳಕಂಡಂತೆ ನೀಡಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2 ರ 3.21ಎ ರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	3	3	33.02	0.00
2	ಚಾಮರಾಜನಗರ	1	1	0.00	7.55
3	ದಕ್ಷಿಣ ಕನ್ನಡ	4	4	3.77	0.00
4	ದಾವಣಗೆರೆ	1	1	0.60	0.00
5	ಕೊಡಗು	62	62	385.51	0.00
6	ಮಂಡ್ಯ	32	32	14.79	0.11
7	ಶಿವಮೊಗ್ಗ	6	6	11.63	0.00
8	ಉಡುಪಿ	12	12	44.08	0.00
9	ಉತ್ತರ ಕನ್ನಡ	2	2	1.16	0.00
ಒಟ್ಟು		**126**	**126**	**504.55**	**7.66**
ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)				**512.21**	

3.22 ಸಾಮಗ್ರಿಗಳನ್ನು ಖರೀದಿಸಿ ದಾಸ್ತಾನು ಲೆಕ್ಕಕ್ಕೆ ತೆಗೆದುಕೊಳ್ಳದೇ ಇರುವುದು ಹಾಗೂ ವಿತರಣೆಗೆ ದಾಖಲಾತಿಗಳು ಇರದೇ ಇರುವ ಪ್ರಕರಣಗಳು.

ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 164 (ಎ) ಪ್ರಕಾರ ದಾಸ್ತಾನು ಲೆಕ್ಕ ಹಾಗೂ ವಿತರಣೆ ದಾಖಲಾತಿಗಳನ್ನು ನಿರ್ವಹಿಸಬೇಕಾಗಿರುತ್ತದೆ ಹಾಗೂ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ಅಧಿನಿಯಮ 68ರಲ್ಲಿ ಸೂಚಿಸಿರುವಂತೆ ಖರೀದಿಸಿರುವ ಚರಾಸ್ತಿಗಳ ವಿವರವನ್ನು ನಮೂನೆ 28ರ ಖರೀದಿ ಪುಸ್ತಕದಲ್ಲಿ ನಮೂದಿಸಬೇಕು ಹಾಗೂ ನಮೂದಿಸಲಾದ ಪರಿಮಾಣವನ್ನು ನಮೂನೆ 29ರಲ್ಲಿನ ಚರಾಸ್ತಿ ರಿಜಿಸ್ಟರ್‌ನಲ್ಲಿ ದಾಖಲಿಸಬೇಕಾಗಿರುತ್ತದೆ. ಆದರೆ 14 ಜಿಲ್ಲೆಗಳಲ್ಲಿನ 352 ಪ್ರಕರಣಗಳಲ್ಲಿ ಖರೀದಿಸಿದ ಸಾಮಗ್ರಿಗಳನ್ನು ದಾಸ್ತಾನು ವಹಿಗೆ ದಾಖಲಿಸಿರುವುದಿಲ್ಲ. ಬೀದಿ ದೀಪದ ಸಾಮಗ್ರಿಗಳ ಖರೀದಿಗೆ ವಿವರಗಳನ್ನು ಒದಗಿಸದೇ ಇರುವುದು ಕಂಡುಬಂದಿದ್ದು ಇದು ನಿಯಮದ ಉಲ್ಲಂಘನೆಯಾಗಿರುತ್ತದೆ. ಸಾಮಗ್ರಿಗಳನ್ನು ಖರೀದಿಸಿ ದಾಸ್ತಾನು ಲೆಕ್ಕಕ್ಕೆ ತೆಗೆದುಕೊಳ್ಳದೇ ಇರುವುದು ಹಾಗೂ ಖರೀದಿಸಿರುವ ಸಾಮಗ್ರಿಗಳ ಬಿಲ್ಲುಗಳಲ್ಲಿ ದರಪಟ್ಟಿ/ತುಲನಾತ್ಮಕ ಪಟ್ಟಿ ಇಲ್ಲದಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. 352 ಪ್ರಕರಣಗಳಲ್ಲಿ ರೂ.699.49ಲಕ್ಷಗಳನ್ನು ಅಕ್ಷೇಪಣೆಯಲ್ಲಿಡಲಾಗಿದೆ ಹಾಗೂ ರೂ.8.56ಲಕ್ಷಗಳನ್ನು ವಸೂಲಾತಿಗೆ ಸೂಚಿಸಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 3.22ಎರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬಾಗಲಕೋಟೆ	31	31	58.13	0.00
2	ಚಾಮರಾಜನಗರ	3	3	0.77	0.00
3	ಚಿಕ್ಕಮಗಳೂರು	4	4	4.38	0.00
4	ಧಾರವಾಡ	59	59	119.65	0.00
5	ಗದಗ	37	37	140.78	0.00
6	ಹಾವೇರಿ	49	49	63.02	0.00
7	ಕೊಪ್ಪಳ	20	20	66.55	4.35
8	ಮಂಡ್ಯ	14	14	17.70	0.05
9	ಮೈಸೂರು	14	14	27.94	0.00
10	ರಾಯಚೂರು	7	7	21.07	0.00
11	ತುಮಕೂರು	1	1	0.33	0.00
12	ಉಡುಪಿ	15	15	31.39	4.17
13	ಉತ್ತರಕನ್ನಡ	45	45	54.16	0.00
14	ವಿಜಯಪುರ	53	53	93.62	0.00
ಒಟ್ಟು ಮೊತ್ತ		**352**	**352**	**699.49**	**8.56**
ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)				**708.05**	

3.23 ವಿವಿಧ ಯೋಜನೆ/ನಿಧಿಗಳಿಂದ ಮುಂಗಡಗಳನ್ನು ಪಡೆದು ಹಣ ಹೊಂದಾಣಿಕೆ ಮಾಡದೇ ಇರುವುದು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 98ರಲ್ಲಿ ಸೂಚಿಸಿರುವಂತೆ ಗ್ರಾಮ ಪಂಚಾಯಿತಿಯ ವಿವಿಧ ಯೋಜನೆ/ನಿಧಿಗಳಿಂದ ಪಡೆದ ಮುಂಗಡ ಹಣಕ್ಕೆ ಲೆಕ್ಕ ಹೊಂದಾಣಿಕೆ ಮಾಡದೇ ಇರುವುದು ಲೆಕ್ಕಪರಿಶೋಧನೆಯಲ್ಲಿ ಕಂಡುಬಂದಿರುತ್ತದೆ. ಗ್ರಾಮಪಂಚಾಯಿವಾರು ವಿವರ ಕೆಳಕಂಡಂತಿರುತ್ತದೆ.

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಹೆಸರು	ಆಕ್ಷೇಪಣೆ	ವಸೂಲಾತಿ
1	2	3	4	5
1	ದಕ್ಷಣ ಕನ್ನಡ	ಬೆಳುವಾಯಿ	6.95	0.00
		ಬೆಳ್ಮ	1.07	0.00
		ಚೇಳ್ಯಾರು	0.38	0.00
		ದರೆಗುಡ್ಡೆ	6.58	0.00
		ಗಂಜೀಮಠ	21.50	0.00
		ಗುರುಪುರ	2.92	0.00
		ಐಕಳ	4.81	0.00
		ಕೆಮ್ರಾಲ್	60.58	0.00

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಹೆಸರು	ಆಕ್ಷೇಪಣೆ	ವಸೂಲಾತಿ
		ಕಿಲ್ಪಾಡಿ	0.09	0.00
		ಕಿನ್ಯಾ	0.12	0.00
		ಮಂಜನಾಡಿ	6.59	0.00
		ಮೆನ್ನಬೆಟ್ಟು	7.91	0.00
		ಮಳವೂರು	0.64	0.00
		ನೀರುಮಾರ್ಗ	13.56	0.00
		ಪಡುಮರ್ನಾಡು	2.57	0.00
		ಪಡುಪಣಂಬೂರು	5.00	0.00
		ಪಾಲಡ್ಕ	0.07	0.00
		ಪುತ್ತಿಗೆ	0.07	0.00
		ಸೂರಿಂಜೆ	0.06	0.00
		ತೆಂಕಮಿಜಾರ್	0.67	0.00
		ಎಡಪದವು	9.94	0.00
		ಎಕ್ಕಾರು	12.74	0.00
		ಅಳಿಕೆ	8.74	0.00
		ಅಮ್ಟಾಡಿ	5.31	0.00
		ಬಡಗಕಜೆಕಾರು	1.08	0.00
		ಬಾಳ್ತಿಲ	2.59	0.00
		ಗೋಳ್ತಮಜಲು	0.24	0.00
		ಕರಿಯಂಗಳ	0.41	0.00
		ಕಾವಳಮುಡೂರು	9.50	0.00
		ಕೊಲ್ನಾಡು	5.21	0.00
		ಕುರ್ನಾಡು	2.00	0.00
		ಮೇರಮಜಲು	2.37	0.00
		ಪಿಲಾತಬೆಟ್ಟು	10.12	0.00
		ರಾಯಿ	3.60	0.00
		ಸಜಿಪಮುನ್ನೂರು	12.08	0.00
		ಸರಪಾಡಿ	14.58	0.00
		ತುಂಬೆ	4.27	0.00
		ಅಂಡಿಂಜೆ	2.31	0.00
		ಬಳಂಜ	13.61	0.00
		ಹೊಸಂಗಡಿ	10.25	0.00
		ಇಳಂತಿಲ	13.23	0.00
		ಕಲ್ಮಂಜ	0.08	0.00
		ಕೊಯ್ಯುರು	0.13	0.00
		ಕುಕ್ಕೇಡಿ	12.53	0.00
		ಮಾಲಾಡಿ	0.16	0.00
		ಮರೋಡಿ	7.10	0.00

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಹೆಸರು	ಆಕ್ಷೇಪಣೆ	ವಸೂಲಾತಿ
		ನಿಡ್ಲೆ	1.99	0.00
		ಪಡಂಗಡಿ	1.08	0.00
2	ದಾವಣಗೆರೆ	ಸಾರಥಿ	79.00	0.00
		ವಾಸನ	65.00	0.00
3	ಮಂಡ್ಯ	ಬಲ್ಲೇನಹಳ್ಳಿ	1.51	0.00
		ಹಿರೇಮರಳಿ	0.15	0.00
4	ತುಮಕೂರು	ಅಮ್ಮಸಂದ್ರ	1.04	0.00
		ಕಣತ್ತೂರು	0.18	0.00
5	ಉಡುಪಿ	ಚಾಂತಾರು	0.00	0.342
ಒಟ್ಟು ಮೊತ್ತ		**55**	**456.20**	**0.34**
ಒಟ್ಟು ಮೊತ್ತ ಆಕ್ಷೇಪಣೆ+ವಸೂಲಾತಿ			**456.54**	

3.24 ಹರಾಜು ಮೊತ್ತ ವಸೂಲಿಯಾಗದಿರುವ ಪ್ರಕರಣಗಳು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 34ರಲ್ಲಿ ಸೂಚಿಸಿರುವಂತೆ ಸ್ವಂತ ಆದಾಯಗಳನ್ನು ಕ್ರೋಢೀಕರಿಸುವ ಕುರಿತು ಗ್ರಾಮ ಪಂಚಾಯಿತಿಗಳಲ್ಲಿ ರಿಜಿಸ್ಟರ್‌ನ್ನು ನಿರ್ವಹಿಸಿ ಆದಾಯ ಹೆಚ್ಚಿಸಬೇಕಿರುತ್ತದೆ. ಗ್ರಾಮಪಂಚಾಯಿತಿಗಳಲ್ಲಿ ಸಂತೆ ಹರಾಜು, ಅಮರಾಯಿ ಫಸಲಿನ ಹರಾಜು, ಜಾನುವಾರು ದೊಡ್ಡಿ ಹರಾಜು, ಅರೆಬಂಡೆ ಹರಾಜು ಇತ್ಯಾದಿ ವಿವಿಧ ಹರಾಜು ಪ್ರಕ್ರಿಯೆಗಳು ನಡೆಸಿದಲ್ಲಿ ಸ್ವಂತ ಆದಾಯವನ್ನು ಹೆಚ್ಚಿಸಿಕೊಳ್ಳುವ ಸಂಭವವಿರುತ್ತದೆ. ಹರಾಜುಗಳನ್ನು ನಡೆಸದಿರುವುದರಿಂದ ಒಟ್ಟಾರೆ 52 ಗ್ರಾಮ ಪಂಚಾಯತಿಗಳಿಂದ ರೂ.38.55ಲಕ್ಷಗಳ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದ್ದು, ರೂ.59.39ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2 ರ 3.24ಎ ರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	13	13	23.36	20.13
2	ಚಿಕ್ಕಮಗಳೂರು	3	3	0.00	0.60
3	ಚಿಕ್ಕಬಳ್ಳಾಪುರ	3	3	0.00	1.09
4	ದಾವಣಗೆರೆ	3	3	7.35	0.60
5	ಹಾಸನ	15	15	0.00	25.39
6	ಹಾವೇರಿ	5	5	0.00	7.42
7	ಮಂಡ್ಯ	2	2	6.05	0.00
8	ಶಿವಮೊಗ್ಗ	1	1	0.00	0.05
9	ತುಮಕೂರು	7	7	1.79	4.11
ಒಟ್ಟು		**52**	**52**	**38.55**	**59.39**
ಒಟ್ಟು ಮೊತ್ತ(ಆಕ್ಷೇಪಣೆ+ವಸೂಲಾತಿ)				**97.94**	

3.25 ಗ್ರಾಮ ಪಂಚಾಯತಿಗಳ ಸಿಬ್ಬಂದಿ ವೆಚ್ಚವು ಗ್ರಾಮ ಪಂಚಾಯತಿಗಳ ವಾರ್ಷಿಕ ಆದಾಯದ ಶೇ.40ನ್ನು ಮೀರಿರುವುದು.

ಸರ್ಕಾರದ ಅದೇಶ ಸಂಖ್ಯೆ:ಗ್ರಾ.ಅಪ/102/ವಿಇಎಲ್/90, ದಿನಾಂಕ:10.1.1994 ರಂತೆ ಗ್ರಾಮ ಪಂಚಾಯತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದ ಒಟ್ಟು ವಾರ್ಷಿಕ ವೆಚ್ಚವು ಆ ಗ್ರಾಮ ಪಂಚಾಯತಿಯ ಒಟ್ಟು ವಾರ್ಷಿಕ ಆದಾಯದ(ದಿನಾಂಕ:10.01.1994ರ ಆದೇಶದ ಟಿಪ್ಪಣಿ–2ರಲ್ಲಿ ತಿಳಿಸಿರುವ ಆದಾಯಗಳನ್ನು ಹೊರತುಪಡಿಸಿ) ಶೇ.40ನ್ನು ಮೀರಬಾರದೆಂದು ಸೂಚಿಸಲಾಗಿದೆ. ಆದರೆ 26 ಜಿಲ್ಲೆಗಳ 3367 ಗ್ರಾಮ ಪಂಚಾಯತಿಗಳಲ್ಲಿ ಸದರಿ ಆದೇಶವನ್ನು ಪಾಲಿಸದೇ ಮಿತಿಯನ್ನು ಮೀರಿ, ಸಿಬ್ಬಂದಿ ವೇತನ ಇತ್ಯಾದಿಗಳಿಗೆ ವೆಚ್ಚವಾಗಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿದೆ. ಜಿಲ್ಲಾವಾರು ವಿವರ ಅನುಬಂಧ–14ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು ಅನುಬಂಧ–14ಎ ರಲ್ಲಿ ನೀಡಲಾಗಿದೆ.

3.26 ಗುತ್ತಿಗೆದಾರರು,. ಸರಬರಾಜುದಾರರು ಮತ್ತು ಇತರರ ಹೆಸರಿಗೆ ನೀಡಬೇಕಾಗಿರುವ ಬಿಲ್ಲು ಪಾವತಿಯ ಬಾಬ್ತನ್ನು ಗ್ರಾಮಪಂಚಾಯಿತಿ ಸಿಬ್ಬಂದಿಯ ಹೆಸರಿಗೆ ಧನಾದೇಶವನ್ನು (ಚೆಕ್) ಬರೆದು ಸಂದಾಯ ಮಾಡಿರುವ ಪ್ರಕರಣಗಳು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಗಳ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006ರ ನಿಯಮ 49ರ ಪ್ರಕಾರ ಗ್ರಾಮಪಂಚಾಯಿತಿಗಳು ರೂ.50–00ಕ್ಕಿಂತ ಹೆಚ್ಚಿನ ಮೊತ್ತದ ಪಾವತಿಗಳನ್ನು ಸಂಬಂಧಿಸಿದ ಸಂಸ್ಥೆಯ ಹೆಸರಿಗೆ ಬರೆದ ಅಕೌಂಟ್ ಪೇಯಿ ಧನಾದೇಶಗಳ ಮೂಲಕ ಮಾಡಬೇಕಾಗಿರುತ್ತದೆ. ಈ ಕೆಳಕಂಡ ಜಿಲ್ಲೆಗಳಲ್ಲಿನ ಗ್ರಾಮಪಂಚಾಯಿತಿಗಳಲ್ಲಿ ನಿಯಮವನ್ನು ಅನುಸರಿಸದಿರುವುದನ್ನು ಗಮನಿಸಲಾಗಿದೆ. ಬ್ಯಾಂಕ್ ಪಾಸ್ ಪುಸ್ತಕ ಹಾಗೂ ಗ್ರಾಮ ಪಂಚಾಯಿತಿಯ ಸಿಬ್ಬಂದಿಗಳ ವೇತನ ಬಟವಾಡೆ ವಹಿಗಳಲ್ಲಿರುವ ಹೆಸರುಗಳನ್ನು ಪರಿಶೀಲಿಸಿದಾಗ ಧನಾದೇಶಗಳನ್ನು ಗ್ರಾಮ ಪಂಚಾಯಿತಿಯ ಜವಾನ, ವಸೂಲಿಗಾರ, ನೀರು ಸರಬರಾಜುದಾರ (ವಾಟರ್ ಮ್ಯಾನ್) ಇತ್ಯಾದಿ ಸಿಬ್ಬಂದಿಗಳ ಹೆಸರಿಗೆ ಬರೆದು ಹಣ ಪಡೆದುಕೊಳ್ಳಲಾಗುತ್ತಿದೆ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯಿತಿಗಳು ನಿಯಮಾನುಸಾರ ಪಾವತಿಗಳನ್ನು ಮಾಡದೇ ಇರುವುದು ದೃಢಪಟ್ಟಿರುತ್ತದೆ. ಗ್ರಾಮಪಂಚಾಯಿತಿವಾರು ಪ್ರಕರಣಗಳ ಬಗ್ಗೆ ವಿವರಿಸಿರುವಂತೆ ಆಕ್ಷೇಪಣೆ ಮೊತ್ತ ರೂ.33.95ಲಕ್ಷಗಳು ಹಾಗೂ ರೂ.69.19ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2 ರ 3.26ಎರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಚಾಮರಾಜನಗರ	2	2	0.00	0.69
2	ದಾವಣಗೆರೆ	53	53	20.76	68.50
3	ಹಾವೇರಿ	1	1	0.50	0.00
4	ಶಿವಮೊಗ್ಗ	1	1	12.70	0.00
ಒಟ್ಟು		**57.**	**57**	**33.95**	**69.19**
ಒಟ್ಟು ಮೊತ್ತ(ಆಕ್ಷೇಪಣೆ+ವಸೂಲಾತಿ)				**103.14**	

3.27 ಸಿಬ್ಬಂದಿಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ನೇಮಕಾತಿ ಮಾಡಿಕೊಂಡಿರುವ ಪ್ರಕರಣಗಳು.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಸೆಕ್ಷನ್ 112(2) ರ ಪ್ರಕಾರ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಪೂರ್ವಾನುಮೋದನೆಯೊಂದಿಗೆ ಸಿಬ್ಬಂದಿಗಳ ನೇಮಕಾತಿಯನ್ನು ಮಾಡಿಕೊಳ್ಳತಕ್ಕದ್ದು. ಆದರೆ 7 ಜಿಲ್ಲೆಗಳಲ್ಲಿನ ಒಟ್ಟು 173 ಗ್ರಾಮ ಪಂಚಾಯಿತಿಗಳಲ್ಲಿ ಸಿಬ್ಬಂದಿಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ನೇಮಕಾತಿ ಮಾಡಿಕೊಂಡಿರುವ ಪ್ರಕರಣಗಳು ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಿದ್ದು, ಇದರಲ್ಲಿ ರೂ.934.97ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ರೂ.0.31ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 3.27ಎರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಹೆಸರು	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಚಾಮರಾಜನಗರ	1	1	4.80	0.00
2	ದಕ್ಷಿಣ ಕನ್ನಡ	11	11	15.55	0.00
3	ದಾವಣಗೆರೆ	5	5	7.21	0.31
4	ಕೊಡಗು	62	62	395.51	0.00
5	ಮಂಡ್ಯ	8	8	32.31	0.00
6	ಮೈಸೂರು	1	1	0.74	0.00
7	ಉಡುಪಿ	85	85	478.54	0.00
ಒಟ್ಟು		**173**	**173**	**934.66**	**0.31**
ಒಟ್ಟು ಮೊತ್ತ(ಆಕ್ಷೇಪಣೆ+ವಸೂಲಾತಿ)				**934.97**	

3.28 ವೇತನ ಖಾತೆಯಲ್ಲಿ ಸಿಬ್ಬಂದಿಗೆ ಹೆಚ್ಚುವರಿ ಪಾವತಿ ಮತ್ತು ಗ್ರಾಮ ಪಂಚಾಯತಿ ಗೌರವಧನ ಹೆಚ್ಚಿಗೆ ಪಾವತಿ ಪ್ರಕರಣಗಳು.

12 ಜಿಲ್ಲೆಗಳ 137 ಗ್ರಾಮ ಪಂಚಾಯತಿಗಳಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಯಾಗದೇ ಸಾಮಗ್ರಿ/ವಿವಿಧ ಬಿಲ್ಲಿನ ಒಟ್ಟು ಮೊತ್ತ ರೂ.199.09ಲಕ್ಷಗಳನ್ನು ಪಾವತಿಸಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದಿದ್ದು ಸದರಿ ಮೊತ್ತದ ರೂ.179.75ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ರೂ.19.34ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಜಿಲ್ಲಾವಾರು ವಿವರ ಈ ಕೆಳಕಂಡಂತೆ ನೀಡಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 3.28ಎರಲ್ಲಿ ನೀಡಲಾಗಿದೆ.

(ರೂ.ಲಕ್ಷಗಳಲ್ಲಿ)					
ಕ್ರ. ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	1	1	0.00	0.13
2	ಬಾಗಲಕೋಟೆ	3	3	3.01	0.00
3	ಬೆಳಗಾವಿ	12	12	18.38	0.00
4	ಬೀದರ್	1	1	0.00	0.24
5	ಚಾಮರಾಜನಗರ	2	2	2.18	0.66
6	ದಾವಣಗೆರೆ	41	41	72.15	0.29
7	ಧಾರವಾಡ	3	3	3.46	0.07
8	ಕಲ್ಬುರ್ಗಿ	10	10	4.79	0.20
9	ಮಂಡ್ಯ	30	30	35.65	16.68
10	ಶಿವಮೊಗ್ಗ	2	2	0.13	0.17
11	ತುಮಕೂರು	5	5	0.00	0.90
12	ಉಡುಪಿ	27	27	40.01	0.00
ಒಟ್ಟು ಮೊತ್ತ		**137**	**137**	**179.75**	**19.34**
ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)				**199.09**	

3.29 ಚರ ಮತ್ತು ಸ್ಥಿರಾಸ್ಥಿ ವಹಿ ನಿರ್ವಹಿಸದಿರುವ ಪ್ರಕರಣಗಳು.

ಉಡುಪಿ ಜಿಲ್ಲೆಯ 06 ಗ್ರಾಮ ಪಂಚಾಯತಿಗಳಲ್ಲಿ ಚರ ಮತ್ತು ಸ್ಥಿರಾಸ್ಥಿ ವಹಿ ನಿರ್ವಹಿಸದಿರುವ ಪ್ರಕರಣಗಳಲ್ಲಿ ಒಟ್ಟು ಮೊತ್ತದ ರೂ.14.37ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಗ್ರಾಮಪಂಚಾಯಿತಿ ವಿವರ ಈ ಕೆಳಕಂಡಂತೆ ನೀಡಲಾಗಿದೆ.

ರೂ.ಲಕ್ಷಗಳಲ್ಲಿ				
ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಹೆಸರು	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ
1	2	3	4	5
1	ಉಡುಪಿ	ಶಿರ್ವ	36	1.81
		ಕೆರಾಡಿ	35	3.26
		ಶಂಕರನಾರಾಯಣ	34	1.84
		ಸಿದ್ದಾಪುರ	35	2.12
		ಕುಂಚೂರು	29	2.00
		ಸಾಣೂರು	39	3.35
	ಒಟ್ಟು ಮೊತ್ತ	**6**	**6**	**14.37**

3.30 ಕಟ್ಟಡ ಪರವಾನಗಿ ಶುಲ್ಕ ವಸೂಲಿಸದಿರುವ ಪ್ರಕರಣಗಳು

07 ಜಿಲ್ಲೆಗಳ 25 ಗ್ರಾಮ ಪಂಚಾಯತಿಗಳಲ್ಲಿ ಕಟ್ಟಡ ಪರವಾನಗಿ ಶುಲ್ಕ ವಸೂಲಿಸದಿರುವ ಪ್ರಕರಣಗಳು ಕಂಡು ಬಂದಿದ್ದು. ಸದರಿ ಮೊತ್ತದ ರೂ.6.26ಲಕ್ಷಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ ಹಾಗೂ ರೂ.21.11ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಗ್ರಾಮಪಂಚಾಯಿತಿ ವಿವರ ಈ ಕೆಳಕಂಡಂತೆ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಹೆಸರು	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	ಹೊಸಹಳ್ಳಿ	27	0.00	0.51
2	ಚಿಕ್ಕಮಗಳೂರು	ಅಂಬಳೆ	25	0.00	0.18
			26	0.07	0.00
3	ದಾವಣಗೆರೆ	ಹೆಚ್.ಕಡದಕಟ್ಟೆ	66	0.00	13.17
		ಹನುಮಸಾಗರ	69	0.00	0.94
		ಹರಳಹಳ್ಳಿ	66	0.51	0.00
		ನ್ಯಾಮತಿ	67	0.00	1.58
		ಸುರಹೊನ್ನೆ	67	0.00	2.74
4	ಹಾವೇರಿ	ಕಬ್ಬೂರು	32	0.00	1.61
5	ಮಂಡ್ಯ	ಬಿರುವಳ್ಳಿ	49	0.05	0.00
		ಭಾರತೀಪುರ ಕ್ರಾಸ್	38	0.02	0.00
		ಬೂಕನಕೆರೆ	35	0.02	0.00
		ಹರಳಹಳ್ಳಿ	33	0.02	0.00
		ಸಿಂಧಘಟ್ಟ	36	0.01	0.00
		ಬೆಸಗರಹಳ್ಳಿ	57,58,60	3.38	0.06
		ಬಿದರಹಳ್ಳಿ	34	0.00	0.03
		ಚಾಮನಹಳ್ಳಿ	55	0.25	0.00
		ಬೇವಿನಹಳ್ಳಿ	54	0.93	0.00
		ಸಂತೆಕಸಲಗೆರೆ	34	0.06	0.00
		ಹಿರೇಮರಳಿ	33	0.51	0.00
6	ಶಿವಮೊಗ್ಗ	ಅಬ್ಬಲಗೆರೆ	26 ಅ	0.00	0.31
7	ಉತ್ತರ ಕನ್ನಡ	ನಾಡುಮಾಸ್ಕೇರಿ	61	0.20	0.00
		ನಾಡುಮಾಸ್ಕೇರಿ	61 ಅ	0.24	0.00
ಒಟ್ಟು ಮೊತ್ತ		**25**	**25**	**6.26**	**21.11**
ಒಟ್ಟು ಮೊತ್ತ ಆಕ್ಷೇಪಣೆ+ವಸೂಲಾತಿ				**27.37**	

ಅಧ್ಯಾಯ–4

ಗ್ರಾಮ ಪಂಚಾಯತಿಗಳಿಂದ ಸರ್ಕಾರದ ವಿವಿಧ ಯೋಜನೆಗಳ ಅನುಷ್ಠಾನ

4.1 ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪಡೆದ ಅನುದಾನದಲ್ಲಿ ಬಳಕೆಯಾಗದೇ ಉಳಿದಿರುವ ಅನುದಾನ ಹಾಗೂ ಸದರಿ ಯೋಜನೆಯಲ್ಲಿನ ವೆಚ್ಚಗಳಿಗೆ ಹಾಜರುಪಡಿಸದೇ ಇರುವ ಓಚರ್‌ಗಳು.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ರ 4ನೇ ಕಲಂನಡಿ, ಗ್ರಾಮೀಣ ಪ್ರದೇಶಗಳಲ್ಲಿನ ಅಕುಶಲ ದೈಹಿಕ ಕೆಲಸ ಮಾಡಲು ಇಚ್ಚಿಸುವ ವಯಸ್ಕರಿಗೆ ಪ್ರತಿ ಕುಟುಂಬಕ್ಕೆ ಒಂದು ಆರ್ಥಿಕ ವರ್ಷದಲ್ಲಿ ಕನಿಷ್ಠ ನೂರು ದಿನಗಳ ಖಾತರಿ ಉದ್ಯೋಗ ಒದಗಿಸುವುದಕ್ಕಾಗಿ, ಭಾರತ ಸರ್ಕಾರ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ 2005ನ್ನು (ಕೇಂದ್ರ ಅಧಿನಿಯಮ ಸಂಖ್ಯೆ: 42/2005) ಜಾರಿಗೆ ತಂದಿರುತ್ತದೆ. ಕೇಂದ್ರ ಸರ್ಕಾರ ಕಾಲಕಾಲಕ್ಕೆ ಅಧಿಸೂಚಿಸುವ ಜಿಲ್ಲೆಗಳಲ್ಲಿ ಈ ಅಧಿನಿಯಮ ಅನ್ವಯಿಸಲಿದ್ದು ಅಧಿಸೂಚಿತ ದಿನಾಂಕಗಳಿಂದ ಈ ಅಧಿಸೂಚನೆ ಜಾರಿಗೆ ಬರುತ್ತದೆ. ಕೂಲಿಯಾಧಾರಿತ ಉದ್ಯೋಗವನ್ನು ಸೃಜಿಸಿ, ಗ್ರಾಮೀಣ ಜನರ ಜೀವನಕ್ಕೆ ಭದ್ರತೆಯನ್ನು ಒದಗಿಸುವುದು ಈ ಅಧಿನಿಯಮದ ಉದ್ದೇಶವಾಗಿದ್ದು, ಇದರಲ್ಲಿ ಪ್ರಸ್ತಾಪಿಸಿರುವ ಕಾಮಗಾರಿಗಳು, ಬರಗಾಲ, ಅರಣ್ಯನಾಶ ಮತ್ತು ಮಣ್ಣಿನ ಸವೆತ ಇವುಗಳಿಂದಾಗಿ ಉದ್ಭವಿಸುವ ದೀರ್ಘಕಾಲದ ಸಮಸ್ಯೆಗಳಿಂದ ಉಂಟಾಗುವ ಬಡತನಕ್ಕೆ ಸೂಕ್ತ ಪರಿಹಾರ ಸೂಚಿಸುತ್ತವೆ. ಗ್ರಾಮೀಣ ಭಾಗದ ಬಡತನದ ಚಿತ್ರಣವನ್ನೇ ಬದಲಿಸುವ ಸಾಮರ್ಥ್ಯ ಇರುವುದರಿಂದ ಈ ಅಧಿನಿಯಮವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಗಳು ಅಧಿನಿಯಮದ ಅನುಸೂಚಿ-1 ಮತ್ತು ಅನುಸೂಚಿ–2 ರಲ್ಲಿ ಸೂಚಿಸಿರುವ ಕನಿಷ್ಠ ಅಂಶಗಳನ್ನು ಒಳಗೊಂಡಂತೆ ರಾಜ್ಯಗಳು ರಾಜ್ಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗಳನ್ನು ರೂಪಿಸಬೇಕಾಗಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿನ ಆರ್ಥಿಕ ಹಾಗೂ ಸಾಮಾಜಿಕ ಮೂಲ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವ ಮೂಲಕ ಉದ್ಯೋಗ ಖಾತರಿ ಯೋಜನೆಯನ್ನು ಸಾಕಾರಗೊಳಿಸುವ ಹಾಗೂ ಹಂತ ಹಂತವಾಗಿ ಬದುಕಿಗೆ ಭದ್ರತೆಯನ್ನು ಒದಗಿಸುವ ನಿಟ್ಟಿನಲ್ಲಿ, ಈ ಅಧಿನಿಯಮವು ಪ್ರಮುಖ ಪಾತ್ರ ವಹಿಸುತ್ತದೆ. ರಾಜ್ಯದಲ್ಲಿ ಈ ಯೋಜನೆಯನ್ನು ಕೇಂದ್ರ ಪುರಸ್ಕೃತ ಯೋಜನೆಯೊಂದರ ರೂಪದಲ್ಲಿ ಕೇಂದ್ರ–ರಾಜ್ಯ ಸರ್ಕಾರಗಳ ನಡುವೆ ಸರಿ ಸುಮಾರು 90:10ರ ಅನುಪಾತದಲ್ಲಿ ನಿಧಿ ಹಂಚಿಕೆಯೊಂದಿಗೆ ಅನುಷ್ಠಾನಗೊಳಿಸಬೇಕಾಗಿರುತ್ತದೆ.

ಈ ಯೋಜನೆಯ ಅನುಷ್ಠಾನಕ್ಕೆ ಗ್ರಾಮ ಪಂಚಾಯತಿಯು ಜವಾಬ್ದಾರಿಯುತ ಪ್ರಾಧಿಕಾರವಾಗಿರುತ್ತದೆ. .ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರ ತಮ್ಮ ತಮ್ಮ ಪಾಲಿನ ಯೋಜನೆಯ ಅನುದಾನದ ಮೊತ್ತವನ್ನು ಬ್ಯಾಂಕ್‌ನ "ರಾಜ್ಯ ಉದ್ಯೋಗ ಖಾತರಿ ನಿಧಿ" ಖಾತೆಗೆ ವರ್ಗಾಯಿಸುತ್ತದೆ. ರಾಜ್ಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿರ್ದೇಶಕರು ಈ ನಿಧಿಯ ರಕ್ಷಕರಾಗಿರುತ್ತಾರೆ ಮತ್ತು ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿ/ಗ್ರಾಮ ಪಂಚಾಯತಿಗಳಿಗೆ ಪ್ರಥಮ ಹಂತದಲ್ಲಿ ರಾಜ್ಯದ 05 ಜಿಲ್ಲೆಗಳಲ್ಲಿ ದಿನಾಂಕ:02.02.2006ರಿಂದ, ಎರಡನೇ ಹಂತದಲ್ಲಿ 06 ಜಿಲ್ಲೆಗಳಲ್ಲಿ ದಿನಾಂಕ:01.04.2007 ರಿಂದ ಹಾಗೂ ಉಳಿದ ಎಲ್ಲಾ ಜಿಲ್ಲೆಗಳಿಗೆ ದಿನಾಂಕ:01.04.2008ರಿಂದ ಅನ್ವಯವಾಗುವಂತೆ ಈ ಅಧಿನಿಯಮದಡಿ ಕಾರ್ಯಕ್ರಮವನ್ನು ವಿಸ್ತರಿಸಲಾಗಿರುತ್ತದೆ. ಕರ್ನಾಟಕ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ನಿಯಮ–19 ರಂತೆ ಗ್ರಾಮ ಪಂಚಾಯತಿಗಳಲ್ಲಿ ನಿರ್ವಹಿಸುವ ಲೆಕ್ಕಗಳಿಗೆ ನಿಯಂತ್ರಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಇವರು ಶಾಸನಬದ್ಧ ಲೆಕ್ಕ ಪರಿಶೋಧಕರಾಗಿರುತ್ತಾರೆ.

ಈ ಅಧಿನಿಯಮದಡಿಯಲ್ಲಿ 2018–19ನೇ ಸಾಲಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಒಟ್ಟು ರೂ283724.67ಲಕ್ಷಗಳು ಅನುದಾನ ಸ್ವೀಕೃತವಾಗಿದ್ದು, ಇತರೇ ಮೂಲಗಳಿಂದ ಒಟ್ಟು ರೂ.576.43ಲಕ್ಷಗಳು ಸೇರ್ಪಡೆಯಾಗಿ ಹಿಂದಿನ ಸಾಲಿನ ಆರಂಭಿಕ ಶಿಲ್ಕು ರೂ.7009.78ಲಕ್ಷಗಳು ಸೇರಿದಂತೆ ವರ್ಷದ ಅಂತ್ಯಕ್ಕೆ ಒಟ್ಟಾರೆ ರೂ.291310.88ಲಕ್ಷಗಳು ಮೊತ್ತ ಲಭ್ಯವಾಗಿರುತ್ತದೆ. ಈ ಯೋಜನೆಯಡಿಯಲ್ಲಿ 2018–19ನೇ ಸಾಲಿನಲ್ಲಿ ಒಟ್ಟು ರೂ.283559.33ಲಕ್ಷಗಳ ವೆಚ್ಚ ನಿರ್ವಹಿಸಿ ರೂ.7751.55ಲಕ್ಷಗಳು ವೆಚ್ಚವಾಗದೇ ಉಳಿದಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಿದೆ. ಜಿಲ್ಲಾವಾರು ವಿವರಗಳನ್ನು ಅನುಬಂಧ–6ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು ಅನುಬಂಧ–6ಎರಲ್ಲಿ ನೀಡಲಾಗಿದೆ.

ಲೆಕ್ಕ ಪರಿಶೋಧನೆಗೆ ಓಚರ್/ದಾಖಲಾತಿಗಳನ್ನು ಒದಗಿಸದಿರುವ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 29 ಲೆಪಬಿ 2006 ಬೆಂಗಳೂರು, ದಿನಾಂಕ:18.04.2007ರಲ್ಲಿ ಪ್ರಸ್ತಾಪಿಸಿದೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ 2018–19ನೇ ಸಾಲಿನ ಅರ್ಥಿಕ ವರ್ಷಕ್ಕೆ 17 ಜಿಲ್ಲೆಗಳ 219 ಗ್ರಾಮಪಂಚಾಯತಿಗಳಲ್ಲಿ ಒಟ್ಟು ರೂ.4476.62ಲಕ್ಷ ಮೊತ್ತದಷ್ಟು ಓಚರ್/ದಾಖಲಾತಿಗಳನ್ನು ಒದಗಿಸಿರುವುದಿಲ್ಲ. ಆದ್ದರಿಂದ ಈ ಕುರಿತಂತೆ ಪರಿಶೀಲನೆ ಮಾಡಲು ಸಾಧ್ಯವಾಗಿರುವುದಿಲ್ಲವಾದ್ದರಿಂದ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪಡೆದ ಅನುದಾನದಿಂದ ಯೋಜನೆಯ ಉದ್ದೇಶ ಪೂರ್ಣಗೊಳಿಸಲು ಸಫಲವಾಗಿರುವುದೇ? ಪರಿಣಾಮಕಾರಿಯಾಗಿರುವುದೇ? ಎಂಬ ಶಂಕೆಯು ಮೂಡುತ್ತದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬಾಗಲಕೋಟ	3	3	36.84	0.00
2	ಬೆಳಗಾವಿ	63	63	1268.28	0.00
3	ಬಳ್ಳಾರಿ	16	16	544.12	0.00
4	ಚಾಮರಾಜನಗರ	1	1	3.38	0.00
5	ಚಿಕ್ಕಮಗಳೂರು	1	1	2.39	0.00
6	ಚಿಕ್ಕಬಳ್ಳಾಪುರ	14	14	468.32	0.00
7	ಚಿತ್ರದುರ್ಗ	6	6	702.57	0.00
8	ದಾವಣಗೆರೆ	13	13	301.49	123.78
9	ಧಾರವಾಡ	5	5	133.19	0.00
10	ಹಾವೇರಿ	34	34	95.90	11.11
11	ಕಲಬುರಗಿ	1	1	0.00	20.09
12	ಕೊಪ್ಪಳ	9	9	76.52	0.00
13	ಮಂಡ್ಯ	9	9	88.71	1.11
14	ಮೈಸೂರು	6	6	72.72	1.00
15	ರಾಯಚೂರು	16	16	191.72	0.00
16	ಶಿವಮೊಗ್ಗ	6	6	4.49	0.00
17	ತುಮಕೂರು	16	16	328.89	0.00
	ಒಟ್ಟು ಮೊತ್ತ	**219**	**219**	**4319.53**	**157.09**
	ಒಟ್ಟು ಮೊತ್ತ (ಆಕ್ಷೇಪಣೆ+ವಸೂಲಾತಿ)			**4476.62**	

ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2 ರ 4.1ಎರಲ್ಲಿ ನೀಡಲಾಗಿದೆ.

4.2 ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಲ್ಲಿ ಉಂಟಾಗಿರುವ ಲೋಪಗಳು.

ಗ್ರಾಮಪಂಚಾಯತಿಗಳ ಲೆಕ್ಕಪರಿಶೋಧನಾ ವೇಳೆ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಲ್ಲಿ ಸಾಮಾನ್ಯವಾಗಿ ಕೆಳಕಂಡ ನ್ಯೂನತೆಗಳು ಕಂಡುಬಂದಿದ್ದು, ಸಂಬಂಧಪಟ್ಟ ಲೆಕ್ಕ ಪರಿಶೋಧನಾ ವರದಿಗಳಲ್ಲಿ ವಿವರಿಸಿದೆ. ಈ ಬಗ್ಗೆ ಸೂಕ್ತ ಮೇಲ್ವಿಚಾರಣೆಯು ಅಗತ್ಯವಿದೆ.

1. ನೋಂದಣಿ ಮತ್ತು ಉದ್ಯೋಗ ಚೀಟಿ ವಿತರಣೆ ಬಗ್ಗೆ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ ಕೈಪಿಡಿ ಕಂಡಿಕೆ 9 ಮತ್ತು 10ರಲ್ಲಿ ಸೂಚಿಸಿರುವಂತೆ ವಿತರಣೆ ಮಾಡಿರುವ ನಮೂನೆ-1ರಿಂದ ನಮೂನೆ-7ರವರೆಗೆ ದಾಖಲೆಗಳನ್ನು ಪರಿಶೀಲನೆಗೆ ಒದಗಿಸಿರುವುದಿಲ್ಲ.
2. ಕಾಮಗಾರಿ ಬಿಲ್ಲುಗಳಲ್ಲಿ ನಮೂನೆ-6, 8 ಮತ್ತು 9 ಮಾತ್ರ ಲಭ್ಯವಿರುತ್ತದೆ.
3. ನಮೂನೆ-1ರಲ್ಲಿ ಸ್ವಯಂ ಪ್ರೇರಣೆಯಿಂದ ಕೆಲಸಕ್ಕಾಗಿ ಅರ್ಜಿ ಸಲ್ಲಿಸುವ ಅಕುಶಲ ಕೂಲಿ ಕಾರ್ಮಿಕರಲ್ಲಿ ಕೆಲವರು ಅಕ್ಷರಸ್ಥರು ಹಾಗೂ ಕೆಲವರು ಅನಕ್ಷರಸ್ಥರು ಇದ್ದು ಕಾಮಗಾರಿಗಳಲ್ಲಿ ಕೆಲಸ ನಿರ್ವಹಿಸಿದ ಬಳಿಕ ಎನ್.ಎಂ.ಆರ್.ಗಳಲ್ಲಿ ಕಾಮಗಾರಿ ನಿರ್ವಹಿಸಲು ನಿಯೋಜನೆಗೊಂಡ ಕೂಲಿ ಕಾರ್ಮಿಕರಲ್ಲಿ ಕೆಲವರು ಸಹಿ ನೀಡಿದ್ದು ಮತ್ತೆ ಕೆಲವರು ಹೆಬ್ಬೆಟ್ಟು ಗುರುತು ಹಾಕಿರುವುದು ಗಮನಕ್ಕೆ ಬಂದಿರುತ್ತದೆ. ನಮೂನೆ-1ನ್ನು ಪರಿಶೀಲನೆಗೆ ಒದಗಿಸಿಲ್ಲದ ಕಾರಣ ಎನ್.ಎಂ.ಆರ್.ಗಳಲ್ಲಿ ನಿಖರವಾಗಿ ಪಾವತಿಯಾಗಿರುವುದನ್ನು ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ.
4. ಎನ್.ಎಂ.ಆರ್.ಗಳಲ್ಲಿ ಹೆಬ್ಬೆಟ್ಟು ಗುರುತು ಹಾಕಿದ ಬಹುತೇಕ ಪ್ರಕರಣಗಳಲ್ಲಿ ಇದನ್ನು ಕಾರ್ಯದರ್ಶಿಗಳಿಂದಾಗಲೀ/ ಅಧ್ಯಕ್ಷರಿಂದಾಗಲೀ ಧೃಢೀಕರಿಸಿರುವುದಿಲ್ಲ.
5. ಉದ್ಯೋಗ ಖಾತರಿ ಯೋಜನೆಯ ಕೈಪಿಡಿ ಕಂಡಿಕೆ-12ರಲ್ಲಿ ತಿಳಿಸಿದಂತೆ ಗಿಡ ನೆಡುವ ಕಾಮಗಾರಿಗಳಿಗೆ ಹೆಚ್ಚಿನ ಮೊತ್ತವನ್ನು ವಿನಿಯೋಗಿಸುವ ದೃಷ್ಟಿಯಿಂದ ಪ್ರತಿ ಗ್ರಾಮಪಂಚಾಯಿತಿಗಳಲ್ಲಿ ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಗ್ರಾಮಪಂಚಾಯಿತಿಯು ನಿಯೋಜಿಸತಕ್ಕದ್ದು, ರಸ್ತೆಗಳನ್ನು ಕೊನೆಯ ಆದ್ಯತೆಯಾಗಿ ಒಟ್ಟು ಮೊತ್ತದ 10%ಗಿಂತ ಕಡಿಮೆ ಮೊತ್ತದಲ್ಲಿ ತೆಗೆದುಕೊಳ್ಳಬೇಕೆಂದು ಸೂಚಿಸಲಾಗಿದ್ದಾಗ್ಯೂ ಇದನ್ನು ಪಾಲಿಸಿರುವುದಿಲ್ಲ.
6. ಉದ್ಯೋಗ ಖಾತರಿ ಯೋಜನೆಯ ಕೈಪಿಡಿ ಕಂಡಿಕೆ-22ರಲ್ಲಿ ತಿಳಿಸಿರುವಂತೆ ಈ ಯೋಜನೆಯಡಿಯಲ್ಲಿ 100% ರಷ್ಟು ಕಾಮಗಾರಿಗಳನ್ನು ತಾಲ್ಲೂಕು ಮಟ್ಟದ ಅಧಿಕಾರಿಗಳು ಕನಿಷ್ಠ 2%ರಷ್ಟು ಕಾಮಗಾರಿಗಳನ್ನು ರಾಜ್ಯ ಮಟ್ಟದ ಅಧಿಕಾರಿಗಳು ತಪಾಸಣೆ ಮಾಡಬೇಕು ಎಂದು ತಿಳಿಸಿದ್ದಾಗ್ಯೂ ಈ ರೀತಿ ತಪಾಸಣೆ ಮಾಡಿದ ಬಗ್ಗೆ ಲೆಕ್ಕ ತನಿಖೆ ಸಮಯದಲ್ಲಿ ಮಾಹಿತಿಯನ್ನು ಒದಗಿಸಿರುವುದಿಲ್ಲ. ಉದ್ಯೋಗ ಖಾತರಿ ಯೋಜನೆಯ ಕೈಪಿಡಿ ಅನುಬಂಧ-3ರಲ್ಲಿ ತಿಳಿಸಿರುವಂತೆ ಕಾರ್ಯನಿರ್ವಾಹಣಾ ಇಲಾಖೆಗಳಿಂದ ಕಾಮಗಾರಿಗಳನ್ನು ನಿರ್ವಹಿಸಿದ್ದ ಬಗ್ಗೆ ಕಾಮಗಾರಿಗಳ ಅಳತೆ ಪುನರ್ ಪರಿಶೀಲನೆ ಮಾಡಿದ್ದ ಬಗ್ಗೆ ಅಳತೆ ಪುಸ್ತಕದಲ್ಲಿ ಅವಶ್ಯ ದಾಖಲೆ ಮಾಡಿ ಧೃಢೀಕರಿಸಿರುವುದಿಲ್ಲ.
7. ಉದ್ಯೋಗ ಖಾತರಿ ಯೋಜನೆಯು ಅಧಿನಿಯಮದ ಪ್ರಕರಣ 3(3)ರಂತೆ ಕೆಲಸ ಮಾಡುವ ಕೂಲಿ ಕಾರ್ಮಿಕರಿಗೆ ನಂತರದ, ದಿನಾಂಕದಿಂದ ಒಂದು ವಾರದೊಳಗೆ ಅಥವಾ 15 ದಿನಗಳಿಗೆ ಮೀರದಂತೆ ಕೂಲಿಯನ್ನು ಕಡ್ಡಾಯವಾಗಿ ಪಾವತಿ ಮಾಡಬೇಕಿದೆ. ಆದರೆ ಅನೇಕ ಪ್ರಕರಣಗಳಲ್ಲಿ ಈ ಸೂಚನೆ ಪಾಲಿಸಿರುವುದು ಕಂಡುಬಂದಿರುವುದಿಲ್ಲ, ಇದೇ ರೀತಿ ಪುನರಾವರ್ತನೆಯಾದಲ್ಲಿ, ಕೂಲಿ ಪಾವತಿ ಅಧಿನಿಯಮ 1936 (4/1936) ರನ್ವಯ ಕೂಲಿ ಕಾರ್ಮಿಕರಿಗೆ ಪರಿಹಾರ ನೀಡಬೇಕಾದ ಹೊಣೆ ಕಾರ್ಯದರ್ಶಿ/ ಅಧ್ಯಕ್ಷರಿಗೆ ಉಂಟಾಗುತ್ತದೆ ಎಂಬುದನ್ನು ಗಮನದಲ್ಲಿರಿಸಬೇಕಾಗುತ್ತದೆ.

8. ಉದ್ಯೋಗ ಖಾತರಿ ಯೋಜನೆ ಅನುಷ್ಠಾನದಲ್ಲಿ ಯಂತ್ರಗಳನ್ನು ಬಳಸಬೇಕಾದ ಸಂದರ್ಭಗಳಲ್ಲಿ ಪತ್ರ ಸಂ: ಗ್ರಾಅಪಂ 5 ಉಖಾಯೋ 2008(ಪಿ) ದಿನಾಂಕ:30.08.2009ರಲ್ಲಿ ಸರ್ಕಾರ ನೀಡಿದ ಸೂಚನೆಗಳನ್ನು ಅನುಸರಿಸದೇ ಇರುವುದು ಗಮನಕ್ಕೆ ಬಂದಿರುತ್ತದೆ.
9. ಸರ್ಕಾರದ ಪತ್ರ ಸಂ: ಗ್ರಾಅಪ 5 ಉಖಾಯೋ 2008 ದಿನಾಂಕ:09.04.2009ರಲ್ಲಿ ತಿಳಿಸಿರುವಂತೆ, ಉದ್ಯೋಗ ಖಾತರಿ ಯೋಜನೆಯಡಿಯ ಕಾಮಗಾರಿಗಳಲ್ಲಿ 50 ದಿನಗಳನ್ನು ಯಾವ ಕೂಲಿ ಕಾರ್ಮಿಕರು ನಿರ್ವಹಿಸಿ ಪೂರೈಸಿರುತ್ತಾರೋ, ಅಂತಹವರಿಗೆ ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ ಆರೋಗ್ಯ ವಿಮೆಯನ್ನು ಹಾಗೂ ಆಮ್ ಆದ್ಮಿ ಭೀಮಾ ಯೋಜನೆಯನ್ನು ವಿಸ್ತರಿಸುವ ಬಗ್ಗೆ ಪ್ರಸ್ತಾಪಿಸಿದ್ದು ನಮೂನೆ-3ರಲ್ಲಿನ ಈ ಮಾಹಿತಿಯನ್ನು ಒದಗಿಸಿಲ್ಲದ ಕಾರಣ ಇದನ್ನು ಪರಿಶೀಲಿಸಲಾಗಿರುವುದಿಲ್ಲ.
10. ಉದ್ಯೋಗ ಖಾತರಿ ಯೋಜನೆ ಕೈಪಿಡಿ ಕಂಡಿಕೆ-12(111)ರಲ್ಲಿ ತಿಳಿಸಿರುವಂತೆ ಕಿರು ಮತ್ತು ಸಣ್ಣ ನೀರಾವರಿ ಕಾಮಗಾರಿಗಳು ಸೇರಿದಂತೆ, ನೀರಾವರಿ ಕಾಲುವೆ ಕಾಮಗಾರಿಗಳನ್ನು ತೆಗೆದುಕೊಂಡಿದ್ದು, ಕಾಲುವೆಗಳಲ್ಲಿ ಬೆಳೆದಿರುವ ಪೊದೆ ಹಾಗೂ ಮಣ್ಣನ್ನು ತೆಗೆಯುವ ಕಾಮಗಾರಿಗಳ ಪ್ರಕರಣಗಳಲ್ಲಿ 4%ರಷ್ಟು ವ್ಯಾಟ್ ಕಳೆಯಬೇಕಾಗಿದ್ದು ಈ ನಿಯಮ ಅನುಸರಿಸಿರುವುದಿಲ್ಲ. ಎಂಬಾಂಕ್‌ಮೆಂಟ್ ಕಾಮಗಾರಿಗಳ ನಿರ್ವಹಣೆಯಲ್ಲಿ ಶೇ.15ರಷ್ಟು ಶ್ರಿಂಕೇಜ್ ಕಳೆದಿರುವುದಿಲ್ಲ.

ಉದ್ಯೋಗ ಖಾತರಿ ಅಧಿನಿಯಮ 2005ರ ನಿಯಮ ಕಂಡಿಕೆ-15ರಲ್ಲಿ ತಿಳಿಸಿರುವಂತೆ ಅಂದಾಜುಗಳ ತಯಾರಿಕೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಗಳು ಕೆಲಸದ ಅಳತೆ ಇತ್ಯಾದಿಗಳಿಗೆ ಸಂಬಂಧಿಸಿದಂತೆ, ರಚಿಸಲಾಗಿರುವ ಕರ್ನಾಟಕ ಪಂಚಾಯತ್ ರಾಜ್ (ಆಯವ್ಯಯ ಮತ್ತು ಲೆಕ್ಕಪತ್ರ) ನಿಯಮಗಳು 2006ರಂತೆ ನಿಯಮಗಳನ್ನು ಪಾಲಿಸಬೇಕಾಗಿದ್ದು, ಇವುಗಳನ್ನು ಪಾಲಿಸಲು ತಿಳಿಸಲಾಗಿದೆ. ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ/13ನೇ ಹಣಕಾಸು/ ಇನ್ನಿತರೆ ಯೋಜನೆಯ ಅನುಷ್ಠಾನದಲ್ಲಿ ಉಂಟಾಗಿರುವ ಲೋಪಗಳು/ನ್ಯೂನ್ಯತೆಗಳಿಗೆ ಸಂಬಂಧಿಸಿದಂತೆ ಗದಗ ಜಿಲ್ಲೆಯ ಈ ಕೆಳಕಂಡ 8 ಗ್ರಾಮಪಂಚಾಯಿತಿಗಳಲ್ಲಿ ಕಂಡುಬಂದಿರುತ್ತದೆ.

ರೂ.ಲಕ್ಷಗಳಲ್ಲಿ

ಕ್ರಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿ ಹೆಸರು	ಲೆಕ್ಕ ಪರಿಶೋಧನಾ ವರದಿ ಕಂಡಿಕೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಗದಗ	ಬೆಳಹೋಡ	50	6.53	0.00
		ಹರ್ತಿ	43	3.00	0.00
		ಹರ್ಲಾಪೂರ	48	0.61	0.00
		ಕಳಾಸಾಪೂರ	46	6.81	0.00
		ಕುರ್ತಕೋಟಿ	48	1.22	0.00
		ಸೊರಟೂರು	47ಎ	0.42	0.00
		ಸೂರಣಗಿ	48	1.52	0.00
		ಲಕ್ಕಲಕಟ್ಟಿ	48	0.00	2.16
	ಒಟ್ಟು	**8**	**8**	**20.11**	**2.16**
ಒಟ್ಟು ಮೊತ್ತ(ಆಕ್ಷೇಪಣೆ+ವಸೂಲಾತಿ)				**22.27**	

4.3 ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (NREGA) ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳಲ್ಲಿ ಕೂಲಿ ದರಕ್ಕಿಂತ ಹೆಚ್ಚಿಗೆ ಕೂಲಿ ದರ ಪಾವತಿಸಿರುವುದು.

ಗ್ರಾಮಪಂಚಾಯಿತಿಗಳ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಕೆಳಕಂಡ ಜಿಲ್ಲಾವಾರು ಗ್ರಾಮಪಂಚಾಯಿತಿಗಳ ಪ್ರಕರಣಗಳಲ್ಲಿ ಹೆಚ್ಚಿಗೆ ಕೂಲಿ ದರ ಪಾವತಿಸಿರುವುದು ಆಕ್ಷೇಪಿಸಿದೆ ಈ ಸಂಬಂಧ ಕೆಳಕಂಡ ಆಕ್ಷೇಪಣೆ ಹಾಗೂ ವಸೂಲಾತಿಗಳನ್ನು ಸೂಚಿಸಿದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಹೆಸರು	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಂಗಳೂರು	ಭಕ್ತರಹಳ್ಳಿ	33(2)	0.19	0.00
2	ಬಾಗಲಕೋಟೆ	ಬಿಲ್‌ಕೆರೂರ	35	0.24	0.00
3	ದಾವಣಗೆರೆ	ಹಿರೇಮಲ್ಲನಹೊಳೆ	72	0.00	217.07
4	ಕೊಡಗು	ಹಂಡ್ಲಿ	65	0.00	0.14
		ಶಾಂತಳ್ಳಿ	64	0.00	0.77
5	ಮಂಡ್ಯ	ಹರಳಹಳ್ಳಿ	55	0.43	0.00
		ಕಿರುಗಾವಲು	55	0.00	0.11
		ಮಿಕ್ಕೆರೆ	56	0.00	0.02
		ಗುಮ್ಮನಹಳ್ಳಿ	55	0.00	0.07
		ಮುಂಡಗದೊರೆ	57	0.00	0.04
6	ತುಮಕೂರು	ಯಳನಡು	20	0.00	0.69
		ಬಿದರೆ	10	0.00	0.17
		ಎಸ್ ಕೊಡಗೀಹಳ್ಳಿ	20(6)	0.00	0.02
		ಕಗ್ಗೆರೆ	30(3)	0.00	0.01
		ರಂಟವಳಲು	33/3	0.00	0.31
		ನೊಣವಿನಕೆರೆ	29	0.00	0.06
		ಕಡಸೂರು	2(1)	0.00	0.07
ಒಟ್ಟು ಮೊತ್ತ		17	17	0.86	219.56
ಒಟ್ಟು ಮೊತ್ತ ಆಕ್ಷೇಪಣೆ+ವಸೂಲಾತಿ				**220.43**	

1. ಅನಧಿಕೃತವಾಗಿ ಗೈರು ಹಾಜರಾಗಿರುವ ಅಕುಶಲ ಕಾರ್ಮಿಕರಿಗೆ ಹಾಜರಾತಿ ನೀಡಿ ಹೆಚ್ಚಿನ ಮೊಬಲಗು ಪಾವತಿಸಿರುವುದು.
2. ಹಾಜರು ಪಟ್ಟಿಯಲ್ಲಿ ಇರುವ ಮೊಬಲಗಿಗಿಂತ ಹೆಚ್ಚಿಗೆ ಪಾವತಿಸಿರುವುದು.
3. ಓಎಖ ಮೊಬಲಗಿಗಿಂತ ಹೆಚ್ಚುವರಿ ಪಾವತಿ.
4. ಕೆಲವೊಂದು ಸಾಮಗ್ರಿ ಸರಬರಾಜು (ಸಪ್ಲೈ) ಬಿಲ್ಲಿನ ಮೊತ್ತಕ್ಕಿಂತ ಹೆಚ್ಚುವರಿ ಪಾವತಿ.
5. ತಪ್ಪು ಲೆಕ್ಕಾಚಾರದಿಂದ ಹೆಚ್ಚುವರಿ ಪಾವತಿ ಹಾಗೂ ಕೆಲಸಗಾರರಿಗೆ ಕೆಲಸ ನಿರ್ವಹಿಸಿದ್ದಕ್ಕಿಂತ ಹೆಚ್ಚುವರಿ ಕೂಲಿ ಪಾವತಿ.
6. ಅಳತೆ ನಿರ್ವಹಿಸಿದ ಮೊತ್ತಕ್ಕಿಂತ ಹೆಚ್ಚಿನ ಮೊತ್ತದ ಕೂಲಿ ಪಾವತಿಸಿರುವುದು ಕಂಡುಬಂದಿರುತ್ತದೆ. ಇದು ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕ ಪತ್ರಗಳು) ನಿಯಮಗಳು 2006, ನಿಯಮ 87[(1)ರಿಂದ(8)] ಮತ್ತು 88(1)ಕ್ಕೆ ವಿರುದ್ಧವಾಗಿರುತ್ತದೆ.

4.4 13 ಮತ್ತು 14ನೇ ಹಣಕಾಸು ಆಯೋಗದ ಯೋಜನೆಯಡಿ ಬಳಕೆಯಾಗದೇ ಉಳಿದಿರುವ ಮೊತ್ತ ಹಾಗೂ ಲೆಕ್ಕಪರಿಶೋಧನೆಗೆ ಹಾಜರುಪಡಿಸದೇ ಇರುವ ಓಚರ್‌ಗಳು.

ರಾಜ್ಯದ ಗ್ರಾಮ ಪಂಚಾಯತಿಗಳ ವಿವಿಧ ಅಭಿವೃದ್ಧಿ ಕಾರ್ಯಗಳಿಗಾಗಿ ಕೇಂದ್ರ ಸರ್ಕಾರವು 13/14ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ ಯೋಜನೆಗಳನ್ನು ಜಾರಿಗೆ ತಂದಿದ್ದು, ಸದರಿ ಯೋಜನೆಗಳಡಿಯಲ್ಲಿ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದಿದೆ. 2018-19ನೇ ಸಾಲಿನಂತ್ಯದ ಲೆಕ್ಕಪರಿಶೋಧನೆ ಕೈಗೊಂಡ ಗ್ರಾಮ ಪಂಚಾಯತಿಗಳಲ್ಲಿ ಈ ಯೋಜನೆಗಳ ಅನುಷ್ಠಾನಕ್ಕಾಗಿ ಕೇಂದ್ರ ಸರ್ಕಾರದಿಂದ ಒಟ್ಟು ರೂ.172211.65ಲಕ್ಷಗಳು ಅನುದಾನ ಸ್ವೀಕೃತವಾಗಿದ್ದು, ಇತರೇ ಮೂಲಗಳಿಂದ ಒಟ್ಟು ರೂ.6212.64ಲಕ್ಷಗಳು ಸೇರ್ಪಡೆಯಾಗಿ ಹಿಂದಿನ ಸಾಲಿನ ಆರಂಭಿಕ ಶಿಲ್ಕು ರೂ.81542.79ಲಕ್ಷಗಳು ಸೇರಿದಂತೆ ಒಟ್ಟು ರೂ.259967.09ಲಕ್ಷಗಳಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಒಟ್ಟು ರೂ.100687.83ಲಕ್ಷಗಳು ವೆಚ್ಚವಾಗಿದ್ದು, ರೂ.159279.26ಲಕ್ಷಗಳು ವೆಚ್ಚವಾಗದೇ ಬಾಕಿ ಉಳಿದಿರುವುದು ಲೆಕ್ಕ ಪರಿಶೋಧನೆಯಲ್ಲಿ ಕಂಡುಬಂದಿದೆ. ಗ್ರಾಮ ಪಂಚಾಯತಿಗಳು ಹಣಕಾಸು ಆಯೋಗದ ಶಿಫಾರಸ್ಸಿನ ಅನುದಾನದ ಸ್ವೀಕೃತಿ, ಭರಿಸಿದ ವೆಚ್ಚ ಹಾಗೂ ವರ್ಷಾಂತ್ಯದಲ್ಲಿ ಬಳಕೆಯಾಗದೇ ಬಾಕಿ ಉಳಿದ ಅನುದಾನದ ಜಿಲ್ಲಾವಾರು ವಿವರಗಳನ್ನು ಅನುಬಂಧ-5ರಲ್ಲಿ ಹಾಗೂ ಗ್ರಾಮಪಂಚಾಯಿತಿವಾರು ವಿವರಗಳನ್ನು ಅನುಬಂಧ-5ಎರಲ್ಲಿ ನೀಡಲಾಗಿದೆ.

13 ಮತ್ತು 14ನೇ ಹಣಕಾಸು ಯೋಜನೆಗೆ ಸಂಬಂಧಿಸಿದಂತೆ, 2018-19ನೇ ಸಾಲಿನಂತ್ಯಕ್ಕೆ 21 ಜಿಲ್ಲೆಗಳ 718 ಗ್ರಾಮಪಂಚಾಯತಿಗಳಲ್ಲಿ ರೂ.2987.86ಲಕ್ಷಗಳ ಮೊತ್ತದಷ್ಟು ಓಚರ್/ದಾಖಲಾತಿಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲವಾದ್ದರಿಂದ ಹಾಜರುಪಡಿಸದಿರುವ ಸದರಿ ಮೊತ್ತದ ಓಚರ್/ದಾಖಲಾತಿಗಳ ವ್ಯವಹಾರಗಳ ಪರಿಶೀಲನೆ ಮಾಡಲು ಸಾಧ್ಯವಾಗಿರುವುದಿಲ್ಲ, ಇದರಿಂದ ಅವುಗಳಲ್ಲಿ ಆಗಿರಬಹುದಾದ ಸಂಭವನೀಯ ಅಕ್ರಮ/ವಂಚನೆ/ ದುರುಪಯೋಗಗಳನ್ನು ಪತ್ತೆ ಹಚ್ಚುವಲ್ಲಿ ಸಾಧ್ಯವಾಗದೇ ಇರುವುದಕ್ಕೆ ಅವಕಾಶ ಮಾಡಿಕೊಟ್ಟಂತಾಗಿದೆ.

ಸರ್ಕಾರದ ಆದೇಶದ ದಿನಾಂಕ:18.04.2007ರಲ್ಲಿ ಗ್ರಾಮ ಪಂಚಾಯಿತಿಗಳು ಸಕಾಲದಲ್ಲಿ ಅಂದರೆ ಏಪ್ರಿಲ್ 30ರ ಒಳಗಾಗಿ ವರ್ಷಾಂತ್ಯ ವರದಿ ಮತ್ತು ಬ್ಯಾಂಕ್ ಸಮನ್ವಯ ತಃಖ್ತೆ ಸಿದ್ಧಪಡಿಸುವಂತೆ ತಿಳಿಸಿದೆ. ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ ಕಛೇರಿಯ ಆಡಿಟ್ ಸಿಬ್ಬಂದಿಗೆ ಅನುಮೋದಿತ ವರ್ಷಾಂತ್ಯ ವರದಿ, ಬ್ಯಾಂಕ್ ಸಮನ್ವಯ ತಃಖ್ತೆ, ಅನುಮೋದಿತ ಆಯವ್ಯಯ ಹಾಗೂ ಎಲ್ಲಾ ಕಡತಗಳು, ವಹಿಗಳು ಮತ್ತು ದಾಖಲಾತಿಗಳನ್ನು ಲೆಕ್ಕ ತಪಾಸಣೆ ಸಂದರ್ಭದಲ್ಲಿ ಹಾಜರುಪಡಿಸದೇ ಇರುವುದರಿಂದ, ಸಕಾಲದಲ್ಲಿ ಆಡಿಟ್ ಕಾರ್ಯ ಮುಗಿಸಲು ಸಾಧ್ಯವಾಗಿರುವುದಿಲ್ಲ. ಜೊತೆಗೆ ಮಾನವ ದಿನಗಳೂ ಕೂಡ ವ್ಯರ್ಥವಾಗುರುವುದಿಂದ ವಿನಾಕಾರಣ ಇಲಾಖೆಯ ಸದರಿ ಸಿಬ್ಬಂದಿಗೆ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆ ಪಾವತಿಸುವಂತಹ ಪ್ರಸಂಗ ಉಂಟಾಗುತ್ತಿದೆ. ಸದರಿ ಸರ್ಕಾರದ ಆದೇಶದ ಕಂಡಿಕೆ 9ರಲ್ಲಿ ಇಂತಹ ಪ್ರಕರಣಗಳು ಉದ್ಭವಿಸಬಾರದೆಂದು ಸೂಚಿಸಿದೆ. ಇಂತಹ ಪ್ರಕರಣಗಳು ಮರುಕಳಿಸಿರುವುದು ಸರ್ಕಾರದ ಗಮನಕ್ಕೆ ಬಂದಲ್ಲಿ, ಸಂಬಂಧಿಸಿದ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವ ಬಗ್ಗೆ ಸರ್ಕಾರ ಮತ್ತು ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮಜರುಗಿಸುವಂತೆ ತಿಳಿಸಿದೆ. ಜಿಲ್ಲಾವಾರು ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ-2 ರ 4.4ಎರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬಾಗಲಕೋಟ	18	18	90.59	0.00
2	ಬೆಳಗಾವಿ	85	85	340.99	27.32
3	ಬಳ್ಳಾರಿ	106	106	490.31	0.00
4	ಬೀದರ್	11	11	74.43	0.00
5	ಚಾಮರಾಜನಗರ	17	17	55.78	0.00
6	ಚಿಕ್ಕಮಗಳೂರು	1	1	1.97	0.00
7	ಚಿಕ್ಕಬಳ್ಳಾಪುರ	40	40	312.25	0.00
8	ಚಿತ್ರದುರ್ಗ	12	12	97.97	0.00
9	ದಾವಣಗೆರೆ	23	23	5.01	24.04
10	ಧಾರವಾಡ	35	35	194.89	0.00
11	ಗದಗ	84	84	241.60	2.99
12	ಹಾವೇರಿ	50	50	101.76	4.83
13	ಕಲಬುರಗಿ	11	11	43.82	7.41
14	ಕೊಡಗು	3	3	6.47	0.00
15	ಕೊಪ್ಪಳ	72	72	320.35	32.12
16	ಮಂಡ್ಯ	11	11	15.29	0.71
17	ರಾಯಚೂರು	3	3	26.13	0.00
18	ಶಿವಮೊಗ್ಗ	27	27	25.49	0.00
19	ತುಮಕೂರು	19	19	53.25	8.64
20	ವಿಜಯಪುರ	62	62	247.60	0.00
21	ಯಾದಗಿರಿ	29	29	133.84	0.00
ಒಟ್ಟು ಮೊತ್ತ		**718**	**718**	**2879.80**	**108.06**
ಒಟ್ಟು ಮೊತ್ತ ಆಕ್ಷೇಪಣೆ+ವಸೂಲಾತಿ				**2987.86**	

4.5 ವಿವಿಧ ಯೋಜನೆಗಳಡಿ ಕೆಲವು ಕಾಮಗಾರಿಗಳಿಗೆ ಅನುಮೋದಿತ ಅಂದಾಜು ಪಟ್ಟಿ ಇಲ್ಲದೆ ಹಣ ಪಾವತಿ ಮಾಡಿರುವುದು.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತ್ ಆಯವ್ಯಯ ಮತ್ತು ಲೆಕ್ಕಪತ್ರಗಳು) ನಿಯಮಗಳು 2006, ನಿಯಮ 74ರ ಪ್ರಕಾರ ಯಾವುದೇ ಕಾಮಗಾರಿಯನ್ನು ಅಂದಾಜು ಪಟ್ಟಿ ಸಿದ್ಧ ಪಡಿಸದೆ ಆರಂಭಿಸುವಂತಿಲ್ಲ, ನಿಯಮ 81ರ ಪ್ರಕಾರ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಗಳನ್ನು ಪಡೆದು ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕಿರುತ್ತದೆ. ನಿಯಮ 85ರ ಪ್ರಕಾರ ಅಳತೆ ಪುಸ್ತಕವನ್ನು ನಿರ್ವಹಿಸಬೇಕಿರುತ್ತದೆ. ನಿಯಮ 92ರ ಪ್ರಕಾರ ಕಾಮಗಾರಿ ಮುಕ್ತಾಯ ವರದಿಯನ್ನು ಗ್ರಾಮಪಂಚಾಯಿತಿಯು ನೀಡಬೇಕಿರುತ್ತದೆ. ಆದರೆ ಗ್ರಾಮ ಪಂಚಾಯಿತಿಗಳ ವಿವಿಧ ಯೋಜನೆಗಳಡಿ ಕೈಗೊಂಡ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆಳಕಂಡ ನ್ಯೂನತೆಗಳನ್ನು ಲೆಕ್ಕಪರಿಶೋಧನೆ ಸಂದರ್ಭದಲ್ಲಿ ಗಮನಿಸಿದೆ.

1. ಅಂದಾಜು ಪಟ್ಟಿ ತಯಾರಿಸದೇ ಕಾಮಗಾರಿ ನಿರ್ವಹಿಸಿರುವುದು.
2. ಅಳತೆ ಪುಸ್ತಕದಲ್ಲಿ ದಾಖಲಿಸದೇ ಕಾಮಗಾರಿ ನಿರ್ವಹಿಸಿರುವುದು.
3. ಮೂಲ ಅಂದಾಜು ಪಟ್ಟಿ ಇಲ್ಲದೇ, ಕಾಮಗಾರಿ ಬಿಲ್ಲು ಪಾವತಿಸಿರುವುದು.
4. ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ಪಡೆಯದೇ ಇರುವುದು.
5. ಕಾಮಗಾರಿಗಳಿಗೆ ಸಂಬಂಧಿಸಿದ ಆಡಳಿತ ಮಂಜೂರಾತಿ, ತಾಂತ್ರಿಕ ಮಂಜೂರಾತಿ ಆಗದಿರುವುದು, ಬಿಲ್ಲು ಪಾಸಿಂಗ್ ನಮೂದಿಸದಿರುವುದು.
6. ಸಕ್ಷಮ ಪ್ರಾಧಿಕಾರದ ಪೂರ್ವಾನುಮೋದನೆ ಇಲ್ಲದೇ ಕಾಮಗಾರಿ ಕೈಗೊಂಡಿರುವುದು.
7. ಮುಕ್ತಾಯ ಪ್ರಮಾಣ ಪತ್ರ ಇಲ್ಲದಿರುವುದು.

ಈ ಮೇಲ್ಕಂಡ ನ್ಯೂನತೆಗಳಿಂದ ಕಾಮಗಾರಿಗಳ ವೆಚ್ಚ ಸಂಬಂಧ ಕೆಳಕಂಡ 06 ಜಿಲ್ಲೆಯಲ್ಲಿನ 89 ಪ್ರಕರಣಗಳಲ್ಲಿ ರೂ.109.91ಲಕ್ಷಗಳನ್ನು ಆಕ್ಷೇಪಣೆಗೆ ಹಾಗೂ ರೂ.0.23ಲಕ್ಷಗಳನ್ನು ವಸೂಲಾತಿಗೆ ಸೂಚಿಸಲಾಗಿದೆ. ಜಿಲ್ಲಾವಾರು ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2ರ 4.5ಎ ರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ)

ಕ್ರಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಚಾಮರಾಜನಗರ	1	1	1.96	0.00
2	ದಾವಣಗೆರೆ	34	34	68.55	0.00
3	ಗದಗ	2	2	1.56	0.00
4	ಮಂಡ್ಯ	2	2	2.63	0.00
5	ಉಡುಪಿ	2	2	2.97	0.00
6	ವಿಜಯಪುರ	48	48	32.24	0.23
ಒಟ್ಟು		**89**	**89**	**109.91**	**0.23**
ಒಟ್ಟು ಮೊತ್ತ(ಆಕ್ಷೇಪಣೆ+ವಸೂಲಾತಿ)				**110.14**	

4.6 ಕಾಮಗಾರಿಗಳ ವಿವರವನ್ನು ಕ್ರಿಯಾಯೋಜನೆಯಲ್ಲಿ ಅಳವಡಿಸದಿರುವುದು ಹಾಗೂ ಕ್ರಿಯಾ ಯೋಜನೆಗೆ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ವೆಚ್ಚ ಮಾಡಿರುವ ಪ್ರಕರಣಗಳು.

ಗ್ರಾಮ ಪಂಚಾಯತಿಯಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಯೋಜನೆಗಳ ವಿವರಗಳೂ ಪಂಚತಂತ್ರ ತಂತ್ರಾಂಶದಲ್ಲಿ ಅಳವಡಿಕೆಯಾಗಿರಬೇಕು. ಕಾಮಗಾರಿಯನ್ನು ನಿರ್ವಹಿಸುವ ಮುನ್ನ ಅಂದಾಜು ಪಟ್ಟಿ ತಯಾರಿಸಿ ಅನುಮೋದನೆ ಪಡೆದುಕೊಂಡಿರುವ ಬಗ್ಗೆ, ಖರೀದಿ ಪ್ರಕ್ರಿಯೆಯಲ್ಲಿ ಕೆ.ಟಿ.ಪಿ.ಪಿ. ನಿಯಮ ಪಾಲಿಸಿರುವ ಬಗ್ಗೆ, ಖರೀದಿಸಿದ ಸಾಮಗ್ರಿಗಳ ಉತ್ತಮ ಗುಣಮಟ್ಟ ಹೊಂದಿರುವ ಕುರಿತು ಪ್ರಮಾಣೀಕರಿಸಿರುವ ಬಗ್ಗೆ, ಶೇ.1ರಷ್ಟು ಕಾರ್ಮಿಕ ಸುಂಕ ಕಟಾಯಿಸಿರುವ ಬಗ್ಗೆ, ಅಳತೆ ಪುಸ್ತಕದಲ್ಲಿ ಸಾಮಗ್ರಿಗಳ ವಿವರ ನಮೂದಿಸಿರುವ ಬಗ್ಗೆ, ಅಧ್ಯಕ್ಷರು ಹಾಗೂ ಪಿಡಿಓ ಸಹಿಯಾಗಿರುವ ಬಗ್ಗೆ ಇತ್ಯಾದಿ ವಿವರಗಳು ಲಭ್ಯವಿರುವುದಿಲ್ಲವೆಂಬುದನ್ನು ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ಗಮನಿಸಲಾಗಿದೆ.

12 ಜಿಲ್ಲೆಗಳಲ್ಲಿನ 90 ಗ್ರಾಮ ಪಂಚಾಯಿತಿಗಳಲ್ಲಿ 14ನೇ ಹಣಕಾಸು ಹಾಗೂ ಇತರೆ ಯೋಜನೆಗಳಡಿಯಲ್ಲಿ 90 ಪ್ರಕರಣಗಳಲ್ಲಿ ಕಾಮಗಾರಿಗಳ ವಿವರವನ್ನು ಕ್ರಿಯಾಯೋಜನೆಯಲ್ಲಿ ಅಳವಡಿಸದಿರುವುದು, ಅಂದಾಜು ಪತ್ರಿಕೆಯನ್ನು ತಯಾರಿಸದಿರುವುದು, ಅಳತೆ ಮಸ್ತಕದಲ್ಲಿ ನಮೂದಿಸದಿರುವುದು ಮತ್ತು ಅಧ್ಯಕ್ಷರು ಹಾಗೂ ಪಿಡಿಓ ಸಹಿ ಆಗದಿರುವುದನ್ನು ಲೆಕ್ಕಪರಿಶೋಧನೆ ವೇಳೆಯಲ್ಲಿ ಗಮನಿಸಿದೆ. ರೂ.307.86ಲಕ್ಷಗಳನ್ನು ಆಕ್ಷೇಪಣೆಯಲ್ಲಿ ಹಾಗೂ ರೂ.4.74ಲಕ್ಷಗಳನ್ನು ವಸೂಲಾತಿಯಲ್ಲಿಟ್ಟಿದೆ. ಜಿಲ್ಲಾವಾರು ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2ರ 4.6ಎರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಳಗಾವಿ	30	30	78.79	4.19
2	ಚಿಕ್ಕಮಗಳೂರು	9	9	12.41	0.00
3	ದಾವಣಗೆರೆ	14	14	15.44	0.00
4	ಧಾರವಾಡ	5	5	30.22	0.00
5	ಹಾವೇರಿ	2	2	0.84	0.55
6	ಕೊಪ್ಪಳ	1	1	0.20	0.00
7	ಮಂಡ್ಯ	6	6	12.43	0.00
8	ಮೈಸೂರು	10	10	128.55	0.00
9	ಶಿವಮೊಗ್ಗ	3	3	0.78	0.00
10	ತುಮಕೂರು	5	5	20.67	0.00
11	ಉಡುಪಿ	2	2	6.96	0.00
12	ಉತ್ತರಕನ್ನಡ	3	3	0.56	000
	ಒಟ್ಟು	**90**	**90**	**307.86**	**4.74**
ಒಟ್ಟು ಮೊತ್ತ(ಆಕ್ಷೇಪಣೆ+ವಸೂಲಾತಿ)				**312.60**	

4.7 ವಿವಿಧ ಯೋಜನೆಗಳ ಕಾಮಗಾರಿ ಬಿಲ್ಲುಗಳಲ್ಲಿ ಪಾವತಿಸಿರುವ ಅಧಿಕ ಮೊತ್ತ.

ಗ್ರಾಮ ಪಂಚಾಯಿತಿಗಳಲ್ಲಿ 13/14ನೇ ಹಣಕಾಸು ಯೋಜನೆ, ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ, ನೀರು ಸರಬರಾಜು, ಮತ್ತು ಇತರೆ ಯೋಜನೆ ಕಾಮಗಾರಿ ಬಿಲ್ಲುಗಳನ್ನು ಪಾಸು ಮಾಡುವಲ್ಲಿ 15 ಜಿಲ್ಲೆಗಳ 147 ಗ್ರಾಮ ಪಂಚಾಯಿತಿಗಳ 147 ಪ್ರಕರಣಗಳಲ್ಲಿ ಬಿಲ್ಲುಗಳ ಮೊತ್ತಕ್ಕಿಂತ ಅಧಿಕ ಮೊತ್ತ ಪಾವತಿ ಮಾಡಿರುವುದು ಕಂಡು ಬಂದಿರುತ್ತದೆ. ಇದು ಕರ್ನಾಟಕ ಆರ್ಥಿಕ ಸಂಹಿತೆ 1958ರ ಅನುಚ್ಛೇದ 16ಕ್ಕೆ ವಿರುದ್ಧವಾಗಿದ್ದು, ಒಟ್ಟು ರೂ.16.13ಲಕ್ಷಗಳನ್ನು ಸಂಬಂಧಪಟ್ಟವರಿಂದ ವಸೂಲಿಸಿ ಯೋಜನೆಗಳ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಲು ಹಾಗೂ ರೂ.17.31ಲಕ್ಷಗಳಿಗೆ ಸೂಕ್ತ ದಾಖಲೆಗಳನ್ನು ಒದಗಿಸುವ ಬಗ್ಗೆ ಸಂಬಂಧಪಟ್ಟ ಗ್ರಾಮಪಂಚಾಯಿತಿಗಳ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಿದ್ದು ಈ ಕುರಿತು ಲೆಕ್ಕಪರಿಶೋಧನಾ ವರದಿಗಳಲ್ಲಿ ವಿವರಿಸಿದೆ. ಜಿಲ್ಲಾವಾರು ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ. ಕಂಡಿಕೆವಾರು ಗ್ರಾಮಪಂಚಾಯಿತಿ ವಿವರಗಳನ್ನು ಸಂಪುಟ–2 ರ 4.7ಎರಲ್ಲಿ ನೀಡಲಾಗಿದೆ.

ರೂ.ಲಕ್ಷಗಳಲ್ಲಿ

ಕ್ರ ಸಂ.	ಜಿಲ್ಲೆಯ ಹೆಸರು	ಗ್ರಾಮ ಪಂಚಾಯತಿಗಳ ಸಂಖ್ಯೆ	ಲೆಕ್ಕ ಪರಿಶೋಧನಾ ವರದಿ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ	ವಸೂಲಾತಿ
1	2	3	4	5	6
1	ಬೆಳಗಾವಿ	8	8	0.00	2.64
2	ಚಾಮರಾಜನಗರ	1	1	0.00	0.14
3	ಚಿಕ್ಕಮಗಳೂರು	5	5	0.00	0.16
4	ಚಿತ್ರದುರ್ಗ	1	1	0.00	0.41
5	ದಾವಣಗೆರೆ	5	5	0.00	0.40
6	ಗದಗ	4	4	0.00	0.13
7	ಹಾವೇರಿ	10	10	3.53	0.94
8	ಕೊಡಗು	7	7	3.28	0.15
9	ಕೊಪ್ಪಳ	1	1	0.31	0.00
10	ಮಂಡ್ಯ	15	15	2.96	3.48
